ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 1 ಬುಧವಾರ 2023

ಸಂಪುಟ: 43 | ಸಂಚಿಕೆ: 311 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವೇತನ ಪರಿಷ್ಕರಣೆ, ಹಳೇ ಪಿಂಚಣಿ ಯೋಜನೆ ಮರು ಜಾರಿಗೆ ಆಗ್ರಹಿಸಿ

ಇಂದಿನಿಂದ ರಾಜ್ಯ ಸರ್ಕಾರಿ ನೌಕರರ ಮುಷ್ಕರ

■ ಸರ್ಕಾರದೊಂದಿಗಿನ ಮಾತುಕತೆ ವಿಫಲ
■ ಕರ್ತವ್ಯಕ್ಕೆ ಗೈರು ಹಾಜರಾಗಲು ನಿರ್ಧಾರ





"ಸರ್ಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಸಭೆಯ ಮುಂದಿಟ್ಟರು. ಆ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದೇವೆ. ಸೌಹಾರ್ದಯುತವಾಗಿ ಮಾತುಕತೆ ನಡೆಸಿದ್ದೇವೆ. ಕೆಲವು ವಿಚಾರಗಳನ್ನು ಹಣಕಾಸು ಪರಿಸ್ಥಿತಿಯನ್ನು ಅವಲೋಕಿಸಿ ಕಾನೂನು ಇತಿಮಿತಿಯಲ್ಲಿ ತೀರ್ಮಾನಿಸಬೇಕೆಂದು ತಿಳಿಸಿದ್ದೇನೆ. ಕೋವಿಡ್ ಸಂದರ್ಭದಲ್ಲಿ ವೇತನ ಕಡಿತಗೊಳಿಸದಿರುವುದು ಸೇರಿದಂತೆ ಸರ್ಕಾರದ ಹಲವು ಕ್ರಮಗಳನ್ನು ಅವರೂ ಪ್ರಶಂಸಿಸಿದ್ದಾರೆ. ವೇತನ ಆಯೋಗದ ವರದಿ ತರಿಸಿಕೊಂಡು ಅನುಷ್ಠಾನಗೊಳಿಸುವುದಾಗಿ ತಿಳಿಸಿದ್ದೇನೆ. ಚರ್ಚೆ ಬಗ್ಗೆ ಸಂಘದ ಪದಾಧಿಕಾರಿಗಳ ಅಭಿಪ್ರಾಯ ಪಡೆದು ತಿಳಿಸುವುದಾಗಿ ಹೇಳಿದ್ದಾರೆ. ನಂತರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



"ಮುಖ್ಯಮಂತ್ರಿಗಳೊಂದಿಗೆ ನಡೆದ ಮೊದಲ ಸಭೆಯಲ್ಲಿ ನಮ್ಮ ಪ್ರಮುಖ ಎರಡು ಬೇಡಿಕೆಗಳ ಬಗ್ಗೆ ಚರ್ಚಿಸಲಾಯಿತು. ಸರ್ಕಾರ ಎಂದೂ ನೌಕರರ ವಿರುದ್ಧವಾಗಿಲ್ಲ, ನಿಮ್ಮ ಬೇಡಿಕೆಗಳ ಈಡೇರಿಸುವುದಾಗಿ ಭರವಸೆ ನೀಡಿದ್ದಾರೆ. ಈ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಅಭಿಪ್ರಾಯ ತಿಳಿಸುವುದಾಗಿ ಹೇಳಿ ಬಂದಿದ್ದೇವೆ. ಹಾಗಾಗಿ ಸಂಘದ ಕಚೇರಿಯಲ್ಲಿ ತಡರಾತ್ರಿ ಸಭೆ ನಡೆಸಿ ಅಭಿಪ್ರಾಯ ಪಡೆದು ನಂತರ ಸರ್ಕಾರಕ್ಕೆ ತಿಳಿಸುತ್ತೇವೆ. ಸದ್ಯ ನಿಗದಿಯಂತೆ ಮುಷ್ಕರ ನಡೆಯಲಿದೆ.

–ಸಿ.ಎಸ್.ಷಡಕ್ಷರಿ, ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಬೆಂಗಳೂರು, ಫೆ. 28 (ಕೆಎಂಶಿ)– ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ಮತ್ತು ಮುಖ್ಯಕಾರ್ಯದರ್ಶಿಯವರ ನಡುವೆ ನಡೆದ ಮಾತುಕತೆ, ನಂತರ ರಾತ್ರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ನಡೆಸಿದ ಸಂಧಾನ ಮಾತುಕತೆಯೂ ಫಲಪ್ರದವಾಗದ ಹಿನ್ನೆಲೆಯಲ್ಲಿ ನಾಳೆಯಿಂದ ರಾಜ್ಯ ಸರ್ಕಾರಿ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವ ತೀರ್ಮಾನ ಕೈಗೊಂಡಿದ್ದಾರೆ.

ನೌಕರರ ವೇತನ ಪರಿಷ್ಕರಣೆ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡದ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ, ಹಾಗೂ ಹೊಸ ಪಿಂಚಣಿ ನೀತಿಗೆ ಒತ್ತಾಯಿಸಿ, ನಾಳೆಯಿಂದ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಧುಮುಕಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಇಂದು ಮಧ್ಯಾಹ್ನ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜೊತೆ ಸುಧೀರ್ಘ ಸಮಾಲೋಚನೆ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ವೇತನ ಆಯೋಗಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಹಣ ಮೀಸಲಿರಿಸಿ, ಘೋಷಣೆ ಮಾಡುವವರೆಗೂ ತಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ನೌಕರರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಮಾತುಕತೆ ವಿಫಲವಾಯಿತು. ಮುಖ್ಯಕಾರ್ಯದರ್ಶಿಯವರು ಪರಿಪರಿಯಾಗಿ ಮುಷ್ಕರ ಕೈಬಿಡುವಂತೆ ಮನವಿ ಮಾಡಿದ್ದಲ್ಲದೆ, ನೌಕರರಿಗೆ ದೊರಕಬೇಕಾದ ▶ 6ನೇ ಪುಟಕ್ಕೆ

ಮೈಸೂರಲ್ಲಿ ತುರ್ತುಸೇವೆ ಹೊರತು ಸಾರ್ವಜನಿಕ ಸೇವೆಯಲ್ಲಿ

ಭಾರೀ ವ್ಯತ್ಯಯ ಸಾಧ್ಯತೆ

ಮೈಸೂರು, ಫೆ.28(ಆರ್‌ಕೆ/ಎಸ್‌ಬಿಡಿ)– ಏಳನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ವೇತನ ಪರಿಷ್ಕರಣೆ ಹಾಗೂ ಹಳೆ ಪಿಂಚಣಿ ಯೋಜನೆ ಮರು ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ನಾಳೆ (ಮಾ.1)ಯಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದು, ಮೈಸೂರು ಜಿಲ್ಲೆಯಲ್ಲೂ ತುರ್ತು ಸೇವೆ ಹೊರತುಪಡಿಸಿ ಸಾರ್ವಜನಿಕ ಸೇವೆಯಲ್ಲಿ ಭಾರೀ ವ್ಯತ್ಯಯವಾಗುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರಿ ನೌಕರರ ಸಂಘವು ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರದ ವಿವಿಧ ಇಲಾಖೆ, ಸ್ಥಳೀಯ ಸಂಸ್ಥೆಗಳು, ನಿಗಮ ಮಂಡಳಿಗಳ ನೌಕರರು ಬುಧವಾರದಿಂದ ರಾಜ್ಯಾದ್ಯಂತ ಕಚೇರಿಗಳಿಗೆ ಗೈರು ಹಾಜರಾಗುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ತುರ್ತು ವೈದ್ಯಕೀಯ ಸೇವೆ, ಸಾರಿಗೆ, ಆಂಬುಲೆನ್ಸ್ ಸಂಚಾರ, ಹಾಲು ಉತ್ಪನ್ನಗಳ ಸರಬರಾಜು ಸೇರಿದಂತೆ ಅತ್ಯವಶ್ಯಕ ಸೇವೆ ಮಾತ್ರ ಲಭ್ಯವಿರಲಿದ್ದು, ಶಾಲಾ–ಕಾಲೇಜುಗಳೂ ಬಂದ್ ಆಗುವ ಸಾಧ್ಯತೆ ದಟ್ಟವಾಗಿದೆ. ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆ, ಪ್ರಥಮ ಪಿಯು ವಾರ್ಷಿಕ ಪರೀಕ್ಷೆಗೂ ಅಡ್ಡಿಯಾಗಲಿದೆ. ನಗರ ಪಾಲಿಕೆ, ಮುಡಾ, ತಾಲೂಕು ಕಚೇರಿ, ಉಪನೋಂದಣಾಧಿಕಾರಿ ಕಚೇರಿ ಸೇರಿದಂತೆ ಬಹುತೇಕ ಎಲ್ಲಾ ಇಲಾಖೆಗಳ ಕಚೇರಿ ಕಾರ್ಯದಲ್ಲೂ ವ್ಯತ್ಯಯವಾಗುವ ಸಾಧ್ಯತೆ ಇದೆ. ▶ 6ನೇ ಪುಟಕ್ಕೆ



"ರಾಜ್ಯ ಸರ್ಕಾರಿ ನೌಕರರ ಸಂಘ ಬುಧವಾರ ಕರೆ ನೀಡಿರುವ ಮುಷ್ಕರಕ್ಕೆ ಬೆಂಬಲ ನೀಡಲು ಅಗತ್ಯ ವಸ್ತು ಸೇವೆಯಡಿ ಬರುವ ಇಲಾಖಾ ನೌಕರರನ್ನು ಹೊರತುಪಡಿಸಿ, ಉಳಿದ ಎಲ್ಲಾ ಇಲಾಖಾ ನೌಕರರು ಕರ್ತವ್ಯಕ್ಕೆ ಸಾಮೂಹಿಕವಾಗಿ ಗೈರು ಹಾಜರಾಗುವುದಾಗಿ ಮನವಿ ಪತ್ರ ನೀಡಿದ್ದಾರೆ. ಆದರೆ, ಸರ್ಕಾರಿ ನೌಕರರ ಸಾಮೂಹಿಕ ಗೈರು ಹಾಜರಾತಿ ಬಗ್ಗೆ ಸರ್ಕಾರದಿಂದ ಅನುಮತಿ ನೀಡಿಲ್ಲ. ಆದಾಗ್ಯೂ ನೌಕರರು ಸಾಮೂಹಿಕ ರಜೆ ಹಾಕಿದರೆ, ನಾಳಿನ ಪರಿಸ್ಥಿತಿಯನ್ನು ನೋಡಿಕೊಂಡು ಸರ್ಕಾರಕ್ಕೆ ವರದಿ ನೀಡಲಾಗುವುದು. –ಡಾ.ರಾಜೇಂದ್ರ, ಜಿಲ್ಲಾಧಿಕಾರಿ



"7ನೇ ವೇತನ ಆಯೋಗದ ಮಧ್ಯಂತರ ವರದಿ ಅನುಷ್ಠಾನ, ಎನ್‌ಪಿಎಸ್ ರದ್ದುಪಡಿಸಿ ಓಪಿಎಸ್ ಮರು ಜಾರಿಗೊಳ್ಳುವಂತೆ ಒತ್ತಾಯಿಸಿ, ಮುಷ್ಕರಕ್ಕೆ ಕರೆ ನೀಡಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಹೋರಾಟಕ್ಕೆ ಬೆಂಬಲ ಸೂಚಿಸಲು ಮೈಸೂರು ಜಿಲ್ಲೆಯ ಎಲ್ಲಾ ಉಪನ್ಯಾಸಕರು ಸಾಮೂಹಿಕವಾಗಿ ಗೈರು ಹಾಜರಾಗುವುದಾಗಿ ಮನವಿ ಸಲ್ಲಿಸಿದ್ದಾರೆ. ಆದರೆ ಇಲಾಖೆಯಿಂದ ಇದಕ್ಕೆ ಅನುಮತಿ ನಿರಾಕರಿಸಿದ್ದು ಎಂದಿನಂತೆ ಪಾಠ–ಪ್ರವಚನದಲ್ಲಿ ಭಾಗಿಯಾಗುವಂತೆ ಸೂಚಿಸಲಾಗಿದೆ. ಅಲ್ಲದೆ, ಪ್ರಥಮ ಪಿಯುಸಿ ಪರೀಕ್ಷೆಗಳು ನಡೆಯುತ್ತಿದ್ದು, ಬುಧವಾರ ಪರೀಕ್ಷೆಯನ್ನು ನಡೆಸುವಂತೆ ಆಯಾಯ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

–ನಾಗಮಲ್ಲೇಶ್, ಡಿಡಿಪಿಯು, ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ

ಶಾಸಕ ತನ್ವೀರ್ ಸೇಠ್ ಚುನಾವಣಾ ರಾಜಕಾರಣದಿಂದ

ನಿವೃತ್ತಿ ನಿರ್ಧಾರ ಕೈಬಿಡುವಂತೆ ಆಗ್ರಹ

● ಮನ ನೊಂದ ಅಭಿಮಾನಿ ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಯತ್ನ; ಶಾಸಕರ ಮನೆ ಮೇಲೇರಿ ಅಲ್ಲಿಂದ ಹಾರಿ ಆತ್ಮಹತ್ಯೆಗೂ ಯತ್ನಿಸಿದ ಕಾಂಗ್ರೆಸ್ ಮುಖಂಡ ● ಉದಯಗಿರಿಯ ತನ್ವೀರ್ ಸೇಠ್ ನಿವಾಸದ ಬಳಿ ನೂರಾರು ಕಾರ್ಯಕರ್ತರು, ಮುಖಂಡರು ಬೆಳ್ಳಂಬೆಳಿಗ್ಗೆ ಜಮಾವಣೆ; ನಿರ್ಧಾರದಿಂದ ಹಿಂದೆ ಸರಿಯುವಂತೆ ಶಾಸಕ ತನ್ವೀರ್ ಮನವೊಲಿಕೆ ಯತ್ನ







ಮೈಸೂರು, ಫೆ.28(ಆರ್‌ಕೆ)–ಚುನಾವಣಾ ರಾಜಕಾರಣದಿಂದ ನಿವೃತ್ತಿಗೆ ನಿರ್ಧರಿಸಿರುವ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ನಿಲುವು ವಿರೋಧಿಸಿ ಅವರ ಅಭಿಮಾನಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇಂದು ಬೆಳ್ಳಂಬೆಳಿಗ್ಗೆ ಮೈಸೂರಿನ ಉದಯಗಿರಿಯ ಅವರ ಮನೆ ಬಳಿ ಜಮಾಯಿಸಿ, ತನ್ವೀರ್ ಮನವೊಲಿಸಲೆತ್ನಿಸಿದರು. ಕೆಲವರು ನಿರ್ಧಾರದಿಂದ ಹಿಂದೆ ಸರಿಯದೇ ಇದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿ, ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡರೆ, ಇನ್ನು ಕೆಲವರು ಅವರ ಮನೆ ಮೇಲೇರಿ ಅಲ್ಲಿಂದ ಹಾರುವ ಯತ್ನ ಮಾಡಿದರು. ಆದರೆ ಅಲ್ಲಿದ್ದವರು ಅವರ ಪ್ರಯತ್ನ ವಿಫಲಗೊಳಿಸಿದರು.

ಇಂದಿನ 'ಮೈಸೂರು ಮಿತ್ರ'ನ ಮುಖಪುಟದ 'ಚುನಾವಣಾ ರಾಜಕಾರಣದಿಂದ ಹಿಂದೆ ಸರಿಯಲು ಶಾಸಕ ತನ್ವೀರ್ ಸೇಠ್ ನಿರ್ಧಾರ' ವರದಿ ಕಂಡು ಬೆಳ್ಳಂಬೆಳಗ್ಗೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಭಾರೀ ಸಂಖ್ಯೆಯಲ್ಲಿ ಉದಯಗಿರಿಯಲ್ಲಿರುವ ತನ್ವೀರ್ ಸೇಠ್ ಮನೆಗೆ ದೌಡಾಯಿಸಿ, ತಮ್ಮ ನಿಲುವು ಬದಲಿಸಿ ಮುಂಬರುವ ಚುನಾವಣೆಯಲ್ಲಿ ಎನ್.ಆರ್.ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಮನವಿ ಮಾಡಿದರು.

ಈ ಹಿಂದೆ ನಿಮ್ಮ ತಂದೆ ಅಜೀಜ್ ಸೇಠ್ ಅವರನ್ನು ಬೆಂಬಲಿಸಿ ಗೆಲ್ಲಿಸಿದ್ದ ಕ್ಷೇತ್ರದ ಮತದಾರರು, ಅವರ ಕಾಲಾನಂತರ ನಿಮಗೆ ಮತ ನೀಡಿ, ವಿಧಾನಸಭೆಗೆ ಆರಿಸಿ ಕಳುಹಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಅಜೀಜ್ ಸೇಠ್‌ಗೆ ನೀಡಿದ ಮನ್ನಣೆಯನ್ನು ನಿಮಗೂ ನೀಡುತ್ತಾ ಬಂದಿದೆ. ನೀವು ಶಾಸಕರಾಗಿ, ಸರ್ಕಾರ ಬಂದಾಗ ಸಚಿವರಾಗಿ ರಾಜ್ಯದ ಜನರ ಸೇವೆ ಮಾಡಿದ್ದೀರಿ. ಬಡವರು, ಅಲ್ಪಸಂಖ್ಯಾತರು ಸೇರಿದಂತೆ ಜಾತಿ, ಧರ್ಮ ಭೇದವಿಲ್ಲದೆ ಎಲ್ಲ ವರ್ಗದ ಜನರಿಗೂ ನ್ಯಾಯ ದೊರಕಿಸಿಕೊಡುತ್ತಿರುವ ನೀವು ಇನ್ನಷ್ಟು ಕಾಲ ರಾಜಕೀಯದಲ್ಲಿ ಸಕ್ರಿಯರಾಗಿರಬೇಕು. ▶ 8ನೇ ಪುಟಕ್ಕೆ


ಹೈಕಮಾಂಡ್ ಸ್ಪರ್ಧಿಸಿ ಎಂದರೆ ಸ್ಪರ್ಧಿಸುತ್ತೇನೆ



ಮೈಸೂರು, ಫೆ.28(ಆರ್‌ಕೆ)–ಚುನಾವಣೆಗೆ ಸ್ಪರ್ಧಿಸುವ ಸಂಬಂಧ ಕಾಂಗ್ರೆಸ್ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧನಾಗಿದ್ದೇನೆ. ಒಂದು ವೇಳೆ ಸ್ಪರ್ಧಿಸಿ ಎಂದರೆ ಅನಿವಾರ್ಯ, ಸ್ಪರ್ಧಿಸುತ್ತೇನೆ ಎಂದು ಮೈಸೂರಿನ ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ. ಭಾರೀ ಸಂಖ್ಯೆಯಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಇಂದು ಉದಯಗಿರಿಯ ತಮ್ಮ ನಿವಾಸದ ಬಳಿ ಜಮಾಯಿಸಿ ನಿಲುವು ಬದಲಿಸಿ ಮುಂಬರುವ ಚುನಾವಣೆಯಲ್ಲಿ ಎನ್.ಆರ್. ಕ್ಷೇತ್ರದಿಂದಲೇ ಸ್ಪರ್ಧಿಸುವಂತೆ ಒತ್ತಾಯಿಸಿದ ವೇಳೆ ತನ್ವೀರ್ ಸೇಠ್ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಹಾಲಿ ಶಾಸಕನಾಗಿ ಟಿಕೆಟ್‌ಗೆ ಅರ್ಜಿ ಸಲ್ಲಿಸುವಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಒತ್ತಡ ಹೇರಿದ್ದರಿಂದ ನಾನು ಅರ್ಜಿ ಸಲ್ಲಿಸಿದ್ದೆ. ಅದೇ ರೀತಿ ನನ್ನ ಆರೋಗ್ಯ ಸ್ಥಿತಿ ಸರಿ ಇಲ್ಲದ ಕಾರಣ ಚುನಾವಣಾ ರಾಜಕಾರಣದಿಂದ ▶ 8ನೇ ಪುಟಕ್ಕೆ

ಕಾಂಗ್ರೆಸ್, ಎಡಪಕ್ಷಗಳ ಮಡಿಲಿಗೆ ದೇಶವನ್ನು ಮತ್ತೊಮ್ಮೆ ಹಾಕುವುದ ತಡೆಯಬೇಕಿದೆ

● ಪದೇ ಪದೆ ರಾಜ್ಯಕ್ಕೆ ಭೇಟಿ ಸಂಬಂಧ ವಿಪಕ್ಷಗಳ ಟೀಕೆಗೆ ಪ್ರಧಾನಿ ಮೋದಿ ಪ್ರತಿಕ್ರಿಯೆ
● ಬೆಲೆ ಏರಿಕೆಯ ಕೋಪ ನಿಮಗಿದೆ; ಆದರೆ ಎಲ್ಲವನ್ನೂ ಹೊಂದಿಸಿಕೊಳ್ಳುವುದು ತುಂಬಾ ಕಷ್ಟ
● ನಾನೊಬ್ಬ ದೇಶಭಕ್ತ; ನನ್ನಲ್ಲಿ ಸ್ವಾರ್ಥವಿಲ್ಲ



ಬೆಂಗಳೂರು, ಫೆ. 28(ಕೆಎಂಶಿ)– ಅಭಿವೃದ್ಧಿಯಾಗುತ್ತಿರುವ ಪವಿತ್ರವಾದ ನಮ್ಮ ದೇಶವನ್ನು ಮತ್ತೊಮ್ಮೆ ಕಾಂಗ್ರೆಸ್ ಮತ್ತು ಎಡ ಪಕ್ಷಗಳ ಮಡಿಲಿಗೆ ಹಾಕದಿರುವ ಉದ್ದೇಶದಿಂದ ನಾನು ಪದೇ ಪದೆ ಕರ್ನಾಟಕಕ್ಕೆ ಬರುತ್ತಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಪ್ರಧಾನಿಯವರು ಮೇಲಿಂದ ಮೇಲೆ ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಕೈಗೊಳ್ಳುತ್ತಿರುವ ಬಗ್ಗೆ ಪ್ರತಿಪಕ್ಷಗಳು ಟೀಕೆ ಮಾಡಿದ ಹಿನ್ನೆಲೆಯಲ್ಲಿ ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಇಂತಹ ಪಕ್ಷಗಳ ಮಡಿಲಿಗೆ ಎಲ್ಲಿ ಅಧಿಕಾರ ನೀಡುತ್ತಾರೋ ಎಂಬ ಆತಂಕದಿಂದ ಬರುತ್ತಿದ್ದೇನೆ.

ವಿರೋಧ ಪಕ್ಷಗಳು ನನ್ನ ಮೇಲೆ ಸುಳ್ಳುಗಳ ಮಳೆಯನ್ನೇ ಸುರಿಸುತ್ತಿದ್ದಾರೆ. ದಯವಿಟ್ಟು ಅವರ ಬಣ್ಣದ ಮಾತುಗಳಿಗೆ ಮರುಳಾಗಿ, ಅವರ ಬೆಂಬಲಿಸಬೇಡಿ ಎಂದು ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ. ನನ್ನ ಮೇಲೆ ನಿಮಗೆಲ್ಲ ಕೋಪವಿದೆ. ಅದು ನನಗೆ ಗೊತ್ತು. ಮೋದಿ, ಗ್ಯಾಸ್ ಬೆಲೆ, ▶ 8ನೇ ಪುಟಕ್ಕೆ

ಮಾ.27ಕ್ಕೆ ರಾಜ್ಯ ವಿಧಾನಸಭೆ ಚುನಾವಣಾ

ವೇಳಾಪಟ್ಟಿ ಪ್ರಕಟ ಸಾಧ್ಯತೆ

ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ರಾಜ್ಯ ಸರ್ಕಾರಕ್ಕೆ ಕೇಂದ್ರದ ಸೂಚನೆ





ಬೆಂಗಳೂರು, ಫೆ. 28(ಕೆಎಂಶಿ)–ರಾಜ್ಯ ವಿಧಾನಸಭೆಯ ಚುನಾವಣಾ ವೇಳಾಪಟ್ಟಿ ಮಾರ್ಚ್ ಇಪ್ಪತ್ತೇಳರಂದು ಪ್ರಕಟವಾಗುವ ಸಾಧ್ಯತೆ ಇದ್ದು, ಅಷ್ಟರೊಳಗೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಸೂಚನೆ ನೀಡಿದೆ. ಕೇಂದ್ರದ ಮೌಖಿಕ ಆದೇಶದ ಹಿನ್ನೆಲೆಯಲ್ಲಿ ಆಡಳಿತಾರೂಢ ಬಿಜೆಪಿ ತನ್ನ ಸಚಿವರು ಮತ್ತು ಶಾಸಕರಿಗೆ ಸಂದೇಶ ರವಾನೆ ಮಾಡಿ ಬಾಕಿ ಉಳಿದಿರುವ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು, ಜನರಿಗೆ ಅದು ತಲುಪುವಂತಾಗಬೇಕು ಎಂದು ಸಂದೇಶ ರವಾನಿಸಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ 2023–24 ನೇ ಸಾಲಿನ ಬಜೆಟ್‌ಗೆ ಅನುಮೋದನೆ ಪಡೆದು ಮಾರ್ಚ್ ಒಂದರಿಂದಲೇ ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ. ಕೇಂದ್ರದ ಸೂಚನೆಯ ಹಿನ್ನೆಲೆಯಲ್ಲಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ಶಾಸಕರಿಗೆ ಸೂಚನೆ ನೀಡಿದ್ದು, ನಿಮ್ಮ ನಿಮ್ಮ ಕ್ಷೇತ್ರದಲ್ಲೇ ಇದ್ದು ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದ್ದಾರೆ.

ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸುವುದಕ್ಕಿಂತ ಮುನ್ನವೇ ಕೇಂದ್ರ ಸರ್ಕಾರ ರಾಜ್ಯದಲ್ಲಿ ತಾನು ಕೈಗೊಂಡಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಭರದ ತಯಾರಿ ನಡೆಸಿದೆ. ಇದೇ ಕಾರಣಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರು ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ನಾಲ್ಕು ಬಾರಿ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಬಿಜೆಪಿ ▶ 8ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಸಿಎಂ ಅಭ್ಯರ್ಥಿ ಎಂದು ಘೋಷಿಸಿದರೆ 'ಕೈ' ಹಿಡಿಯುತ್ತೇವೆ

ಮಂಡ್ಯ ಜಿಲ್ಲಾ ಕಾಂಗ್ರೆಸ್‌ನ ಬಹುತೇಕ ಒಕ್ಕಲಿಗ ನಾಯಕರ ಪಟ್ಟು





ಮಂಡ್ಯ, ಫೆ.28(ಮೋಹನ್‌ರಾಜ್)– ಕರ್ನಾಟಕ ಪ್ರದೇಶ ಕಾಂಗ್ರೆಸ್ (ಕೆಪಿಸಿಸಿ) ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದರೆ ಮಾತ್ರ ಜಿಲ್ಲೆಯ ಒಕ್ಕಲಿಗ ಸಮುದಾಯ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷದ 'ಕೈ' ಹಿಡಿಯಲಿದೆ ಎಂದು ಮಂಡ್ಯ ಜಿಲ್ಲಾ ಒಕ್ಕಲಿಗ ಸಮುದಾಯದ ಎಲ್ಲಾ ಕಾಂಗ್ರೆಸ್ ಮುಖಂಡರು ಒಕ್ಕೊರಲಿನ ನಿರ್ಧಾರಕ್ಕೆ ಬಂದಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಮಂಡ್ಯ ಜಿಲ್ಲಾ ಕಾಂಗ್ರೆಸ್ ಒಕ್ಕಲಿಗ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ರಾಜ್ಯದಲ್ಲೇ ಅತೀ ಹೆಚ್ಚು ಒಕ್ಕಲಿಗ ಮತದಾರರಿರುವ ಮಂಡ್ಯ ಜಿಲ್ಲೆಯಲ್ಲಿ ಒಕ್ಕಲಿಗ ಮತದಾರರನ್ನು ಕಾಂಗ್ರೆಸ್‌ನತ್ತ ಸೆಳೆಯುವುದು ಹಾಗೂ ಸಮುದಾಯದ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಗಾದಿಗೇರಿಸುವ ವಿಚಾರವಾಗಿ ಮಹತ್ವದ ಸಭೆ ನಡೆಸಲಾಯಿತು. ವಿಶೇಷವೆಂದರೆ ಮಾಧ್ಯಮ ಪ್ರತಿನಿಧಿಗಳನ್ನು ಹೊರಗಿಟ್ಟು ಈ ಸಭೆ ನಡೆಸಲಾಯಿತು.

ಡಿಕೆಶಿ ಸಿಎಂ ಅಭ್ಯರ್ಥಿ ಎಂದು ಘೋಷಿಸಿ: ಸಭೆಯಲ್ಲಿದ್ದ ಜಿಲ್ಲೆಯ ಬಹುತೇಕ ನಾಯಕರು, ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಅಭ್ಯರ್ಥಿ ಎಂದು ಘೋಷಿಸಬೇಕೆಂದು ಆಗ್ರಹಿಸಿದರು. 1999ರಲ್ಲಿ ಸಮುದಾಯದ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗುವ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಅಂದಿನ 9 ಕ್ಷೇತ್ರಗಳ ಪೈಕಿ 7 ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರು ಗೆದ್ದಿದ್ದರು. ಅಂದು ಕಾಂಗ್ರೆಸ್ ಪಕ್ಷ ಕೃಷ್ಣ ಅವರನ್ನು ಸಿಎಂ ಅಭ್ಯರ್ಥಿ ಎಂದು ಘೋಷಿಸಿದ್ದರಿಂದ ಸಮುದಾಯ ಅವರ ಕೈ ಹಿಡಿಯಿತು. ಈಗಲೂ ಅದೇ ರೀತಿಯ ನಿರ್ಧಾರವನ್ನು ಪಕ್ಷ ಕೈಗೊಳ್ಳಬೇಕೆಂದು ಸಭೆಯಲ್ಲಿ ಆಗ್ರಹಿಸಲಾಯಿತು.

ಜೊತೆಗೆ 2018ರ ಚುನಾವಣೆಯಲ್ಲಿ ಸಮುದಾಯದವರೇ ಆದ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಾರೆ ಎಂಬ ನಿಟ್ಟಿನಲ್ಲಿ ಇದೇ ಮಂಡ್ಯ ಜಿಲ್ಲೆಯ ಜನ ಏಳಕ್ಕೆ ಏಳು ಕ್ಷೇತ್ರವನ್ನು ಗೆಲ್ಲಿಸಿಕೊಟ್ಟಿದ್ದಾರೆ. ಅದರಂತೆ ಈ ಬಾರಿಯೂ ಒಕ್ಕಲಿಗ ಸಮುದಾಯದ ಡಿ.ಕೆ.ಶಿವಕುಮಾರ್ ಸಿಎಂ ಅಭ್ಯರ್ಥಿ ಎಂದು ಘೋಷಣೆಯಾದರೆ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಲಾಭವಿದೆ ಎಂದು ಮುಖಂಡರು ಅಭಿಪ್ರಾಯಪಟ್ಟರು.

ಸಿಎಂ ಅಭ್ಯರ್ಥಿ ಘೋಷಿಸಿದರೆ ಗೊಂದಲ: ಇನ್ನು ಕೆಲ ಮುಖಂಡರು ಈಗಲೇ ಮುಖ್ಯಮಂತ್ರಿ ಅಭ್ಯರ್ಥಿ ಘೋಷಿಸಿದರೆ ಗೊಂದಲವಾಗಬಹುದು. ಈ ನಿಟ್ಟಿನಲ್ಲಿ ಮೊದಲು ಪಕ್ಷವನ್ನು ಅಧಿಕಾರಕ್ಕೆ ತರೋಣ. ಅಧಿಕ ಶಾಸಕರ ಬೆಂಬಲ ▶ 8ನೇ ಪುಟಕ್ಕೆ

ಸಿಎಂ ಆಯ್ಕೆ ಹೈಕಮಾಂಡ್‌ಗೆ ಬಿಟ್ಟಿದ್ದು: ಸಿಆರ್‌ಎಸ್

ಮಂಡ್ಯ, ಫೆ.28– ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಇಲ್ಲ. ಮುಖ್ಯಮಂತ್ರಿ ಯಾರು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಎಐಸಿಸಿ ಸದಸ್ಯ ಎನ್.ಚಲುವರಾಯಸ್ವಾಮಿ ತಿಳಿಸಿದರು. ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಸಿಎಂ ಯಾರಾಗಬೇಕೆಂಬುದನ್ನು ಖರ್ಗೆ ಹಾಗೂ ರಾಹುಲ್‌ಗಾಂಧಿ ತೀರ್ಮಾನಿಸುತ್ತಾರೆ. ಮೊದಲು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ಬಹಳ ಮುಖ್ಯ. ಪಕ್ಷ ಅಧಿಕಾರಕ್ಕೆ ಬಂದ ನಂತರ ಮುಖ್ಯಮಂತ್ರಿ ಆಯ್ಕೆಯಾಗಲಿದೆ ಎಂದರು. ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆಗೆ ಯಾರು ಸಹ ಪೈಪೋಟಿ ನಡೆಸುತ್ತಿಲ್ಲ. ಎಲ್ಲರೂ ಪಕ್ಷವನ್ನು ಅಧಿಕಾರಕ್ಕೆ ತರಲು ಹೋರಾಡುತ್ತಿದ್ದಾರೆ. ನಮ್ಮದೂ ಅದೇ ಹೋರಾಟವಾಗಿದ್ದು, ಮಂಡ್ಯ ಜಿಲ್ಲೆಯಲ್ಲಿ ಅತೀ ಹೆಚ್ಚು ಒಕ್ಕಲಿಗರಿರುವ ಕಾರಣ ಈ ಸಮುದಾಯದ ಮತದಾರರನ್ನು ಕಾಂಗ್ರೆಸ್‌ನತ್ತ ಸೆಳೆಯುವ ದೃಷ್ಟಿಯಿಂದ ಸಭೆ ಕರೆಯಲಾಗಿದೆ ಎಂದು ಹೇಳಿದರು. ಸಮುದಾಯ ಈ ಹಿಂದೆ ಜೆಡಿಎಸ್ ಪಕ್ಷವನ್ನು ಬೆಂಬಲಿಸಿದೆ. ಈ ಬಾರಿ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ವಾತಾವರಣವಿದ್ದು, ಮಂಡ್ಯ ಜಿಲ್ಲೆಯ ಹಿತದೃಷ್ಟಿಯಿಂದ ಸಮುದಾಯದ ಮತದಾರರು ಕಾಂಗ್ರೆಸ್ ಕೈ ಹಿಡಿಯಬೇಕು. ಜೆಡಿಎಸ್‌ಗೂ ಅವಕಾಶ ಕೊಡಲಾಗಿದೆ. ಈ ಬಾರಿ ನಮ್ಮನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಆ ಕಾರಣಕ್ಕಾಗಿ ಸಭೆ ಕರೆದಿದ್ದು, ಸಭೆಯಲ್ಲಿ ನಮ್ಮ ಸಮುದಾಯದ ಮುಖಂಡರಿಗೆ ಒಕ್ಕಲಿಗ ಮತದಾರರಿಗೆ ಪ್ರಸಕ್ತ ಪರಿಸ್ಥಿತಿ ಮನವರಿಕೆ ಮಾಡುವಂತೆ ಸೂಚಿಸಲಾಗುತ್ತದೆ. ಮಂಡ್ಯ ಜಿಲ್ಲೆಯ ಏಳಕ್ಕೆ ಏಳು ಸ್ಥಾನ ಕಾಂಗ್ರೆಸ್ ಗೆಲ್ಲಲು ತಂತ್ರಗಾರಿಕೆ ನಡೆಸಲಾಗಿದೆ ಎಂದರು.

ನಾಳೆ ಸಿದ್ಧಾರ್ಥನಗರದ ಶ್ರೀ ಸಿದ್ಧಿ ವಿನಾಯಕನ ಗೋಪುರದ ಗುದ್ದಲಿಪೂಜೆ

ಮೈಸೂರು, ಫೆ. 28– ಮೈಸೂರು ಸಿದ್ಧಾರ್ಥನಗರದ ಕಾರಂಜಿ ಮತ್ತು ಸಿದ್ಧಾರ್ಥನಗರ ತೆರಿಗೆದಾರರ ಸಂಘದ ವತಿಯಿಂದ ಶ್ರೀ ಸಿದ್ಧಿ ವಿನಾಯಕ ಸ್ವಾಮಿಯ 30ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವ ಹಾಗೂ ಉದ್ದೇಶಿತ ರಾಜಗೋಪುರದ ಗುದ್ದಲಿಪೂಜೆ ಕಾರ್ಯಕ್ರಮ ಮಾ. 2(ಗುರುವಾರ) ಬೆಳಗ್ಗೆ 11.30 ರಿಂದ 12 ಗಂಟೆಯೊಳಗೆ ನೆರವೇರಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಉಪಮೇಯರ್ ಹಾಗೂ ಸಂಘದ ಅಧ್ಯಕ್ಷರಾದ ಶ್ರೀಮತಿ ಎಂ. ಮಹದೇವಮ್ಮ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ತನ್ವೀರ್ ಸೇಠ್ ಪಾಲ್ಗೊಳ್ಳಲಿದ್ದಾರೆ.

ಅತಿಥಿಗಳಾಗಿ ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಉಪಮೇಯರ್ ಶ್ರೀಮತಿ ಜಿ. ರೂಪಾ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಸದಸ್ಯೆ ಅಶ್ವಿನಿ ಅನಂತು, ಮಾಜಿ ಉಪಮೇಯರ್ ಶ್ರೀಧರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್, ಪಾಲಿಕೆ ಮಾಜಿ ಸದಸ್ಯ ಪಿ.ದೇವರಾಜ್ ಭಾಗವಹಿಸಲಿದ್ದಾರೆ.

ಪಿಯುಸಿಎಲ್‌ನ ನೂತನ ಪದಾಧಿಕಾರಿಗಳು

ಮೈಸೂರು, ಫೆ. 28– ಇತ್ತೀಚೆಗೆ ನಡೆದ ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್)ದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು 2023–25ನೇ ಸಾಲಿಗೆ ಆಯ್ಕೆ ಮಾಡಲಾಯಿತು.

ಡಾ. ಕೆ.ಕಾಳಚನ್ನೇಗೌಡ (ಅಧ್ಯಕ್ಷ), ಪ್ರೊ. ಲತಾ ಕೆ. ಬಿದ್ದಪ್ಪ, ಕಮಲ್ ಗೋಪಿನಾಥ್ (ಉಪಾಧ್ಯಕ್ಷರು), ವಿ. ಪುರುಷೋತ್ತಮ್ (ಪ್ರಧಾನ ಕಾರ್ಯದರ್ಶಿ), ಆರ್. ನಾಗರಾಜು (ಕಾರ್ಯದರ್ಶಿ), ಪ್ರೊ. ಕೆ.ಬಿ. ಕುಮಾರಸ್ವಾಮಿ (ಸಹ ಕಾರ್ಯದರ್ಶಿ), ಡಾ. ಇ. ರತಿರಾವ್ (ಖಜಾಂಚಿ), ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪ್ರೊ. ಪಿ.ಎನ್. ಶ್ರೀದೇವಿ, ಡಾ. ವೆಂ. ವನಜ, ಡಾ. ವಿ.ಲಕ್ಷ್ಮೀನಾರಾಯಣ, ಪ್ರೊ. ಪಂಡಿತಾರಾಧ್ಯ, ನಾ. ದಿವಾಕರ ಮತ್ತು ಜಿ.ಪಿ. ಬಸವರಾಜು ಆಯ್ಕೆಯಾಗಿದ್ದಾರೆ.

ಶೈಕ್ಷಣಿಕ ರಂಗಭೂಮಿ ಕಾರ್ಯಕ್ರಮ

ಮೈಸೂರು, ಫೆ. 28 – ಮೈಸೂರಿನ ಹಾರ್ಡ್ವಿಕ್ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಮಾ. 2 ರಂದು ಬೆಳಗ್ಗೆ 11ಕ್ಕೆ ಹಾರ್ಡ್ವಿಕ್ ಸ್ವತಂತ್ರ ಪದವಿಪೂರ್ವ ಕಾಲೇಜು ಆವರಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಮಂಗಳೂರಿನ ಬಲ್ಮಠದ ಸಿಎಸ್‌ಐ, ಕೆಎಸ್‌ಡಿ ಬಿಷಪ್ ರೆವರೆಂಡ್ ಹೇಮಚಂದ್ರ ಅಯ್ಯ ಉದ್ಘಾಟಿಸುವರು. ಶಿಕ್ಷಣ ತಜ್ಞ ಡಾ. ಉಮೇಶ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ನಿರ್ದೇಶಕ ಪ್ರಸನ್ನ ಭಾಗವಹಿಸಲಿದ್ದಾರೆ. ಇದೇ ವೇಳೆ ಪ್ರಾಂಶುಪಾಲ ಸುಂದರೇಶ್ ದೇವಪ್ರಿಯಂ, ಹಾರ್ಡ್ವಿಕ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಗುರುಭಕ್ತಯ್ಯ ಹಾಗೂ ಸಾಹಿತಿ ಡಾ.ಮೋಹನ್ ಪಾಳೇಗಾರ್ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ತೇಜಸ್ವಿ ಅವರ ಕಾದಂಬರಿ ಆಧಾರಿತ 'ಕೃಷ್ಣೇಗೌಡನ ಆನೆ' ನಾಟಕದ ಆಯ್ದ ಭಾಗಗಳ ಪ್ರದರ್ಶನವಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 99451–58970 ಸಂಪರ್ಕಿಸಬಹುದು.

ಮೈಸೂರು–ಬೆಂಗಳೂರು ಹೆದ್ದಾರಿಯ ಸರ್ವೀಸ್ ರಸ್ತೆ ಪೂರ್ಣಗೊಂಡ ನಂತರವೇ

ಟೋಲ್ ಸಂಗ್ರಹಣೆಗೆ ಕಾಂಗ್ರೆಸ್ ಆಗ್ರಹ

- ಉದ್ದೇಶಿತ ಟೋಲ್ ಮೊತ್ತ ದುಬಾರಿ; ಕಡಿತಗೊಳಿಸಲು ಒತ್ತಾಯ
- ಮಾ.11ರಂದು ಹೆದ್ದಾರಿ ಉದ್ಘಾಟನೆ ವೇಳೆ ಮೌನ ಪ್ರತಿಭಟನೆ ಎಚ್ಚರಿಕೆ



ಮೈಸೂರು, ಫೆ.28(ಎಂಟಿವೈ)– ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸರ್ವೀಸ್ ರಸ್ತೆ ನಿರ್ಮಾಣ ಪೂರ್ಣಗೊಂಡ ಬಳಿಕವೇ ಟೋಲ್ ಸಂಗ್ರಹಿಸಬೇಕು. ಅಲ್ಲದೆ, ಈಗ ನಿಗದಿ ಮಾಡಿರುವ ದರ ದುಬಾರಿಯಾಗಿದ್ದು, ಅದನ್ನು ಕಡಿಮೆ ಮಾಡಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟೋಲ್ ದರ ದುಪ್ಪಟ್ಟಾಗಿದೆ. ಬಡವರು ಹಾಗೂ ಮಧ್ಯಮ ವರ್ಗದ ಜನರು ಭರಿಸಲು ಸಾಧ್ಯವಾಗದು. ಇಷ್ಟು ದುಬಾರಿ ದರ ವಸೂಲಿ ಮಾಡಿದರೆ, ರಸ್ತೆ ನಿರ್ಮಾಣ ಉದ್ದೇಶಕ್ಕೆ ಅಪಚಾರವಾಗಲಿದೆ. ಜನರಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ದಶಪಥ ಯೋಜನೆಯನ್ನು ಅನುಷ್ಠಾನಗೊಳಿಸಿತ್ತು. ಸರ್ವೀಸ್ ರೋಡ್ ಪೂರ್ಣಗೊಳ್ಳುವವರೆಗೂ ಟೋಲ್ ಸಂಗ್ರಹ ಮಾಡಬಾರದು. ಅಲ್ಲದೆ, ಉದ್ದೇಶಿತ ಟೋಲ್ ದರ ಕಡಿಮೆ ಮಾಡಬೇಕು. ಇಲ್ಲದಿದ್ದರೆ ಮಾ.11ರ ದಶಪಥ ಹೆದ್ದಾರಿ ಉದ್ಘಾಟನೆ ದಿನದಂದು ಮೌನ ಪ್ರತಿಭಟನೆ, ಕಪ್ಪು ಬಾವುಟ ಪ್ರದರ್ಶನ ಮಾಡುವುದಾಗಿ ಎಚ್ಚರಿಸಿದರು.

ಟೋಲ್ ಸಂಗ್ರಹ ಆದೇಶವನ್ನು ರಾತ್ರೋರಾತ್ರಿ ಮುಂದೂಡಲಾಗಿದೆ. ಮಾ.14ರಿಂದ ವಸೂಲಿ ಮಾಡಲಾಗುತ್ತದೆ. ಆದರೆ, ಈಗ ನಿಗದಿಪಡಿಸಿರುವ ದರ ಜನರ ಸುಲಿಗೆ ಮಾಡುವಂತಿದೆ. ಕೇಂದ್ರ ಸಾರಿಗೆ ಇಲಾಖೆ ಎಕ್ಸ್‌ಪ್ರೆಸ್ ಹೈವೆ ಟೋಲ್ ಸಂಗ್ರಹದ ಬಗ್ಗೆ ತಿದ್ದುಪಡಿ ಮಾಡಿದೆ. ಭೂಮಿ ಮಟ್ಟದ ರಸ್ತೆಗೆ 1 ಕಿಮೀ.ಗೆ 2.50 ರೂ., ಎಲಿವೇಟರ್ ರಸ್ತೆಗೆ 3.50 ರೂ. ನಿಗದಿಪಡಿಸಿದೆ. ಈ ಪ್ರಕಾರ ಬೆಂಗಳೂರು–ನಿಡಘಟ್ಟದವರೆಗೆ 55 ಕಿಮೀಗೆ 135 ರೂ. ಪಾವತಿಸಬೇಕು. ಮೈಸೂರು–ಬೆಂಗಳೂರು 118 ಕಿಮೀ ಏಕಮುಖ ಸಂಚಾರಕ್ಕೆ 300 ರೂ. ಪಾವತಿಸಬೇಕಾಗುತ್ತದೆ. ಇದು ಅತ್ಯಂತ ದುಬಾರಿ ಎಂದು ಕಿಡಿಕಾರಿದರು.

ಜುಲೈ ನಂತರ ಟೋಲ್ ದರ ಮತ್ತಷ್ಟು ಹೆಚ್ಚಿಸಲಾಗುತ್ತದೆ. ಏಕಮುಖ ಸಂಚಾರಕ್ಕೆ 465 ರೂ. ಆದರೆ ಎರಡೂ ಕಡೆಯಿಂದ ಒಟ್ಟು 930 ರೂ. ಪಾವತಿಸಬೇಕಾಗುತ್ತದೆ. ದೇಶದ ಇತರ ಎಕ್ಸ್‌ಪ್ರೆಸ್‌ವೇಗಳಿಗಿಂತ ಹೆಚ್ಚಿನ ದರ ನಿಗದಿಪಡಿಸಿರುವುದಾದರೂ ಏಕೆ. ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ರಾಮನಗರ ಬಳಿ ನಿರ್ಗಮನದ ಪಾಯಿಂಟ್ ಇಲ್ಲ. ಅಂಡರ್‌ಪಾಸ್ ಇಲ್ಲ. ಗ್ರಾಮದ ಎದುರಿನ ಜಮೀನಿಗೆ ಹೋಗಲು 10 ಕಿಮೀ ದೂರ ಬಳಸಿಕೊಂಡು ಬರಬೇಕಾಗಿದೆ. ಈ ಸಮಸ್ಯೆ ಬಗೆಹರಿಸಬೇಕು. 10 ಲಕ್ಷದ ಕಾರು ಖರೀದಿಸಿದರೆ ಅದಕ್ಕೆ 2.5 ಲಕ್ಷ ರೂ. ಜೀವಿತಾವಧಿ ತೆರಿಗೆ ಕಟ್ಟಿಸಿಕೊಳ್ಳಲಾಗುತ್ತದೆ. ಇಷ್ಟಾದ ಮೇಲೂ ರಸ್ತೆಯಲ್ಲಿ ಟೋಲ್ ಸಂಗ್ರಹಿಸುವುದು ಏಕೆ ಎಂದು ಪ್ರಶ್ನಿಸಿದರು.

ತಾಲಿಬಾನ್–ಆರ್‌ಎಸ್‌ಎಸ್ ಸಾಮ್ಯತೆ: ಬಿಜೆಪಿ ಕಾರ್ಯಕರ್ತರು ಮೈಮರೆತರೆ ಸಿದ್ದರಾಮಯ್ಯ ನೇತೃತ್ವದ ತಾಲಿಬಾನ್ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂಬ ಸಂಸದ ಪ್ರತಾಪ ಸಿಂಹ ಹೇಳಿಕೆಗೆ ಪ್ರತಿಕ್ರಿಯಿಸಿದ ಎಂ. ಲಕ್ಷ್ಮಣ್, ಆರ್‌ಎಸ್‌ಎಸ್ ಮತ್ತು ತಾಲಿಬಾನಿ ನಡುವೆ ಸಾಮ್ಯತೆಯಿರುವ 10 ಅಂಶಗಳನ್ನು ಪಟ್ಟಿ ಮಾಡಬಹುದು. ವಸ್ತ್ರ, ವಿಚಾರ, ರಕ್ತಪಾತ, ಕೋಮು ಗಲಭೆ ಇಬ್ಬರೂ ಬಯಸುತ್ತಾರೆ. ವ್ಯವಸ್ಥೆ ಬುಡಮೇಲು ಮಾಡಿ, ಸಂವಿಧಾನದ ಮೇಲೆ ನಂಬಿಕೆ ಇಡುವುದಿಲ್ಲ. ಪ್ರಶ್ನೆ ಮಾಡಿದರೆ ದೇಶದ್ರೋಹಿಯಾಗಬೇಕು. ರಾಷ್ಟ್ರಧ್ವಜದ ಬಗ್ಗೆ ನಂಬಿಕೆ ಇಲ್ಲ. ತಮ್ಮ ಧರ್ಮದವರ ಮೇಲೆ ಮಾತ್ರ ಪ್ರೀತಿಯಿರುತ್ತದೆ. ಹೀಗಾಗಿ, ತಾಲಿಬಾನ್ ರಾಜಕಾರಣ ಮಾಡುತ್ತಿರುವುದು ಯಾರು ಎಂದು ಟೀಕಿಸಿದರು.

2024ರ ಮೇ ತಿಂಗಳಿಗೆ ಪ್ರತಾಪ ಸಿಂಹ ಮಾಜಿ ಸಂಸದರಾಗುತ್ತಾರೆ. ಮತ್ತೆ ಅವರು ಗೆಲ್ಲುವುದೇ ಇಲ್ಲ. ಅವರ ಪಕ್ಷದವರೇ ಅವರನ್ನು ಸೋಲಿಸಲು ಪಣತೊಟ್ಟಿದ್ದಾರೆ. ರಾಜ್ಯದಲ್ಲಿ 2014ರಿಂದ ಇದುವರೆಗೆ 22,650 ರೌಡಿಗಳನ್ನು ರೌಡಿ ಪಟ್ಟಿಯಿಂದ ಕೈ ಬಿಡಲಾಗಿದೆ. 1036 ಕೊಲೆಗಳು, 423 ಅತ್ಯಾಚಾರಗಳಾಗಿವೆ. ಯಾವುದು ತಾಲಿಬಾನ್ ಸರ್ಕಾರ. 600 ಭರವಸೆಗಳ ಪೈಕಿ ಎಷ್ಟನ್ನು ಈಡೇರಿಸಿದ್ದೀರಿ ಎಂದು ಪ್ರಶ್ನಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಶಿ, ಉಮಾಭಾರತಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರನ್ನು ಕಡೆಗಣಿಸಿದ ನಿಮ್ಮಿಂದ ನಾವು ಪಾಠ ಕಲಿಯಬೇಕಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಜಿ.ಪಂ.ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಇದ್ದರು.

ಸುಯೋಗ್ ಆಸ್ಪತ್ರೆಯ ಸೇವೆ ಇತರೆ ಆಸ್ಪತ್ರೆಗಳಿಗೆ ಮಾದರಿ

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಮಂಜುನಾಥ್ ಅಭಿಮತ



ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಭಾನುವಾರ(ಫೆ.26) ಬೆಳಗ್ಗೆ ಏರ್ಪಡಿಸಿದ್ದ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಖ್ಯಾತ ಹೃದ್ರೋಗ ತಜ್ಞರಾದ ಡಾ.ಸಿ.ಎನ್.ಮಂಜುನಾಥ್ ಉದ್ಘಾಟಿಸಿದರು. ಚಿತ್ರದಲ್ಲಿ ಹೃದ್ರೋಗ ತಜ್ಞರಾದ ಡಾ. ರವಿಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ವಿಧಾನಪರಿಷತ್ ಸದಸ್ಯ ಡಿ.ಮಾದೇಗೌಡರು, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಆಸ್ಪತ್ರೆಯ ಸಿಇಓ ಡಾ. ಎಂ.ವಿ.ಮಂಜುನಾಥ್, ನಿರ್ದೇಶಕರಾದ ಶ್ರೀಮತಿ ಸುಧಾ ಯೋಗಣ್ಣ, ಡಾ.ರಾಜೇಂದ್ರ ಪ್ರಸಾದ್ ಹಾಗೂ ಡಾ.ಸೀಮಾ ಯೋಗಣ್ಣ ಇದ್ದಾರೆ.

ಮೈಸೂರು, ಫೆ.28–ಭಾರತದಲ್ಲಿ ಸುಮಾರು 50ರಿಂದ 60 ಕಾಯಿಲೆಗಳು ಜೀವನಶೈಲಿ ಆಧಾರಿತ ಕಾಯಿಲೆಗಳಾಗಿದ್ದು, ಅವುಗಳನ್ನು ಸೂಕ್ತ ಜೀವನಶೈಲಿಯ ಮಾರ್ಪಾಡಿನೊಂದಿಗೆ ಬದಲಿಸಿಕೊಂಡು ಆರೋಗ್ಯಯುತ ಬಾಳ್ವೆ ನಡೆಸಬಹುದಾಗಿದೆ ಎಂದು ಖ್ಯಾತ ಹೃದ್ರೋಗ ತಜ್ಞ ಡಾ. ಸಿ.ಎನ್.ಮಂಜುನಾಥ್ ಸಲಹೆ ನೀಡಿದರು.

ಅವರು ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಕಳೆದ ಭಾನುವಾರ(ಫೆ.26) ಬೆಳಗ್ಗೆ ಏರ್ಪಡಿಸಿದ್ದ ಉಚಿತ ಹೃದ್ರೋಗ ತಪಾಸಣಾ ಶಿಬಿರದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಇಂದು ಯುವಕರಲ್ಲಿ, ಸ್ತ್ರೀಯರಲ್ಲಿ ಹೃದ್ರೋಗದ ಸಮಸ್ಯೆಗಳು ಹೆಚ್ಚುತ್ತಿದ್ದು, ಆಹಾರ, ವ್ಯಾಯಾಮ ರಹಿತ, ಧೂಮಪಾನ, ಮದ್ಯಪಾನಯುಕ್ತ ಬದುಕೇ ಕಾರಣವೆಂದು ಹೇಳಿದ ಅವರು, ಇವುಗಳ ಸೂಕ್ತ ಬದಲಾವಣೆಯೊಂದಿಗೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಹೃದ್ರೋಗ ತಪಾಸಣೆಗೆ ಒಳಗಾಗುವುದರಿಂದ ಗುಪ್ತವಾಗಿರುವ ಹೃದ್ರೋಗ ಸಮಸ್ಯೆಗಳನ್ನು ಪತ್ತೆ ಹಚ್ಚಿ ಅವುಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದರು. ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿ ಪಂಚತಾರಾ ಹೋಟೇಲ್ ಮಾದರಿಯಲ್ಲಿ ಆಸ್ಪತ್ರೆಯನ್ನು ನಿರ್ಮಾಣ ಮಾಡಿರುವ ಡಾ. ಎಸ್.ಪಿ. ಯೋಗಣ್ಣನವರು ಈ ಬಗೆಯ ಉಚಿತ ಹೃದ್ರೋಗ ತಪಾಸಣೆ, ಆಂಜಿಯೋಗ್ರಾಂ ಹಾಗೂ ಆಂಜಿಯೋಪ್ಲಾಸ್ಟಿಗಳನ್ನು ಮಾಡುತ್ತಿರುವುದು ಸುಯೋಗ್ ಆಸ್ಪತ್ರೆಯ ಸೇವಾ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಾಗಿದ್ದು, ಈ ದಿಸೆಯಲ್ಲಿ ಸುಯೋಗ್ ಆಸ್ಪತ್ರೆ ಇತರೇ ಆಸ್ಪತ್ರೆಗಳಿಗೆ ಮಾದರಿಯಾಗಿದೆ ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸುಯೋಗ್ ಆಸ್ಪತ್ರೆಯಲ್ಲಿ ಎಲ್ಲಾ ವರ್ಗದ ಜನರಿಗೆ ಕೈಗೆಟಕುವ ದರದಲ್ಲಿ ಸೇವೆ ಲಭಿಸುತ್ತಿರುವುದು ಶ್ಲಾಘನೀಯ ಎಂದರು.

ಮಾಜಿ ವಿಧಾನಪರಿಷತ್ ಸದಸ್ಯ ಡಿ.ಮಾದೇಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭ ಹೃದ್ರೋಗ ತಜ್ಞರಾದ ಡಾ.ರವಿಕುಮಾರ್, ಸುಯೋಗ್ ಆಸ್ಪತ್ರೆಯ ಅತ್ಯಾಧುನಿಕ ಯಂತ್ರೋಪಕರಣಗಳಿಂದ ಕೂಡಿರುವ ಹೃದ್ರೋಗ ವಿಭಾಗದ ಕುರಿತು ಮಾಹಿತಿ ನೀಡಿದರು. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ಸ್ವಾಗತಿಸಿದರು. ಆಸ್ಪತ್ರೆಯ ಸಿಇಓ ಡಾ.ಎಂ.ವಿ.ಮಂಜುನಾಥ್ ವಂದನಾರ್ಪಣೆ ಮಾಡಿದರು.

ಇಂದಿನಿಂದ ಮಾ.4ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಫೆ.28– ಯಾಚೇಗೌಡನಹಳ್ಳಿ ವಿದ್ಯುತ್ ಮಾರ್ಗದಲ್ಲಿ ಕಾಮಗಾರಿ ನಡೆಯುವುದರಿಂದ ಕರಕನಹಳ್ಳಿ ಹಾಗೂ ಸಮೃದ್ಧಿ ಬಡಾವಣೆ, ಯಲಚನಹಳ್ಳಿ, ಗುಂಗ್ರಾಲ್ ಛತ್ರ ಹಾಗೂ ಗುಂಗ್ರಾಲ್ ಛತ್ರದಕೊಪ್ಪಲು, ದಡದಕಲ್ಲಹಳ್ಳಿ, ಹೊಸಕೋಟೆ ಗ್ರಾಮ ಹಾಗೂ ಪೆಟ್ರೋಲ್ ಬಂಕ್, ಇಟ್ಟಿಗೆ ಕಾರ್ಖಾನೆ, ಸಾಗರಕಟ್ಟೆ, ಯಾಚೇಗೌಡನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.1 ರಿಂದ 4ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಪುನೀತ್ ರಾಜ್‌ಕುಮಾರ್ ಹಾಡು ಬೇಕೆಂದು ಕೇಳಿದ ವ್ಯಕ್ತಿ ಮೇಲೆ ಹಲ್ಲೆ ಆರೋಪ

- ಹೆಬ್ಬಾಳು ಠಾಣೆಯಲ್ಲಿ ಪ್ರಕರಣ ದಾಖಲು
- ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರೆಸ್ಟೋರೆಂಟ್‌ನಲ್ಲಿ ಶನಿವಾರ ತಡರಾತ್ರಿ ಘಟನೆ

ಮೈಸೂರು, ಫೆ. 28(ಆರ್‌ಕೆ)–ಅಪ್ಪು ಚಿತ್ರದ ಹಾಡು ಬೇಕೆಂದು ಕೇಳಿದ ನನ್ನ ಮೇಲೆ ನಟ ದರ್ಶನ್ ಸಂಗಡಿಗ ಹಲ್ಲೆ ನಡೆಸಿದರು ಎಂದು ಬೋಗಾದಿಯ ವ್ಯಕ್ತಿಯೊಬ್ಬರು ಮೈಸೂರು ಹೆಬ್ಬಾಳು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಘಟನೆ ಕಳೆದ ಶನಿವಾರ ರಾತ್ರಿ ಮೈಸೂರಿನ ಹೆಬ್ಬಾಳು ಕೈಗಾರಿಕಾ ಬಡಾವಣೆಯ ಮೈಸೂರು ಯೂನಿಯನ್ ರೆಸ್ಟೋರೆಂಟ್‌ನಲ್ಲಿ ನಡೆದಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.

ಮೈಸೂರಿನ ಬೋಗಾದಿಯ ಬ್ರಿಗೇಡ್ ಪಾಮ್ ಗ್ರೋ ನಿವಾಸಿ ಯಶವಂತಕುಮಾರ್ ಹಲ್ಲೆಗೊಳಗಾದವರಾಗಿದ್ದಾರೆ. ಅವರು ಫೆಬ್ರವರಿ 25ರಂದು ನಾನು, ಮೈಸೂರು ಯೂನಿಯನ್ ರೆಸ್ಟೋರೆಂಟ್‌ನಲ್ಲಿ ತಮ್ಮ ಪತ್ನಿಯ ಹುಟ್ಟುಹಬ್ಬ ಆಚರಿಸುತ್ತಿದ್ದೆವು. ಅಲ್ಲಿ ಡಿಜೆ ಕಾರ್ಯಕ್ರಮವೂ ನಡೆಯುತ್ತಿತ್ತು. ಈ ವೇಳೆ ನಟ ದರ್ಶನ್ ಮತ್ತು ಸಂಗಡಿಗರೂ ಅಲ್ಲಿದ್ದರು. ರಾತ್ರಿ 12.30 ಗಂಟೆಯಲ್ಲಿ ನಾನು ಡಿಜೆ ಮ್ಯೂಸಿಕ್ ನಡೆಸುತ್ತಿದ್ದವರ ಬಳಿಗೆ ಹೋಗಿ ನಟ ಪುನೀತ್ ರಾಜ್‌ಕುಮಾರ್ ಅವರ 'ರಾಜಕುಮಾರ' ಸಿನೆಮಾ ಹಾಡನ್ನು ಹಾಡುವಂತೆ ವಿನಂತಿಸಿದಾಗ ಇನ್ನೆರಡು ಹಾಡಾದ ನಂತರ ಹಾಕುತ್ತೇವೆ ಎಂದು ತಿಳಿಸಿದರು. ನಾನು ನನ್ನ ಟೇಬಲ್‌ಗೆ ಹಿಂದಿರುಗುತ್ತಿದ್ದಾಗ ದರ್ಶನ್ ಸಂಗಡಿಗನೋರ್ವ ಏಕಾಏಕಿ ಬಂದು ನನ್ನ ಕತ್ತಿನ ಪಟ್ಟಿ ಹಿಡಿದು, ಅವಾಚ್ಯ ಶಬ್ಧಗಳಿಂದ ಬೈದು ಇಲ್ಲಿ 'ನಮ್ಮ ಡಿ ಬಾಸ್' ಹಾಡುಗಳನ್ನು ಬಿಟ್ಟು ಬೇರೆ ಹಾಡುಗಳನ್ನು ಕೇಳುವಂತಿಲ್ಲ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ನನ್ನ ಮೇಲೆ ಹಲ್ಲೆ ಮಾಡಿದ ಎಂದು ಯಶವಂತ್ ದೂರಿನಲ್ಲಿ ತಿಳಿಸಿದ್ದಾರೆ. ಬೇರೆ ಹಾಡುಗಳನ್ನು ಹಾಕುವಂತೆ ಕೋರಿದರೆ ನಿನ್ನನ್ನು ಇಲ್ಲೇ ಒದ್ದು ಸಾಯಿಸುತ್ತೇನೆ. ನೀನು ನನ್ನ ಕಣ್ಣಿಗೆ ಬಿದ್ದರೆ ಮುಗಿಸಿಬಿಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ ಎಂದು ಅವರು ದೂರಿದ್ದು, ಈ ಸಂಬಂಧ ಐಪಿಸಿ ಸೆಕ್ಷನ್ 341, 323, 504 ಮತ್ತು 506 ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್, ತನಿಖೆ ಕೈಗೊಂಡಿದ್ದಾರೆ. ಸ್ಥಳಕ್ಕೆ ತೆರಳಿದ್ದ ಪೊಲೀಸರು, ಮಹಜರು ನಡೆಸಿ ಮೈಸೂರು ಯೂನಿಯನ್ ರೆಸ್ಟೋರೆಂಟ್‌ನಲ್ಲಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಸಂಗ್ರಹಿಸಿ, ಹಲ್ಲೆ ನಡೆಸಿದವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಹುಲಿಯಮ್ಮ ಜಾತ್ರೆಯಲ್ಲಿ ಸೌಹಾರ್ದತೆ ಸಂಕೇತವಾದ ನಿಶಾನಿ ಮರದ ಉತ್ಸವ

ಮೈಸೂರು, ಫೆ. 28–ಮೈಸೂರಿನ ಐತಿಹಾಸಿಕ ಹಿನ್ನೆಲೆಯ ಕ್ಯಾತಮಾರನಹಳ್ಳಿಯಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಹುಲಿಯಮ್ಮ ಹಬ್ಬವು ಸೋಮವಾರ ಆರಂಭವಾಗಿದ್ದು, ಮಾರ್ಚ್ 8 ರವರೆಗೆ ನಡೆಯಲಿದೆ. ಮೊದಲನೇ ದಿನ ಸಾವಿರಾರು ಮಂದಿ ಗ್ರಾಮಸ್ಥರು ಮೆರವಣಿಗೆ ಮೂಲಕ ರಾಮಾನುಜ ರಸ್ತೆಯಲ್ಲಿರುವ ಎಲೆತೋಟಕ್ಕೆ ತೆರಳಿ, ಅಲ್ಲಿ ಅಡಿಕೆ ಮರ (ನಿಶಾನಿಮರ) ಕಡಿದು ತಂದು ಪೂಜೆ ಸಲ್ಲಿಸಿ ದೇವಸ್ಥಾನದ ಮುಂದೆ ಅದನ್ನು ಅಲಂಕರಿಸಲಾಗಿದೆ. ಇದು ಹಬ್ಬದ ಆಕರ್ಷಣೆಯ ಪ್ರಮುಖ ಭಾಗವೇ ಆಗಿದೆ.



ಕ್ಯಾತಮಾರನಹಳ್ಳಿಯಲ್ಲಿ ನಡೆಯುತ್ತಿರುವ ಹತ್ತು ದಿನಗಳ ಹುಲಿಯಮ್ಮ ಜಾತ್ರೆಯಲ್ಲಿ ಭಕ್ತರ ಹರಕೆಯಂತೆ ಎಲೆತೋಟದಿಂದ ಅಡಿಕೆ ಮರ (ನಿಶಾನಿಮರ)ವನ್ನು ಕಡಿದು ತಂದು ಪೂಜೆ ಸಲ್ಲಿಸಿ, ಮೆರವಣಿಗೆಯಲ್ಲಿ ಹುಲಿಯಮ್ಮ ದೇವಾಲಯದ ಮುಂದೆ ಅಲಂಕಾರ ಮಾಡಲಾಗುತ್ತದೆ. ಈ ಬಾರಿ ಹರಿಜನ ಕಾಲೋನಿಯ ದಿವಂಗತ ದೊಡ್ಡಮಾದಯ್ಯನವರ ಮಕ್ಕಳಾದ ಡಿ.ಸೋಮಶೇಖರ್, ರಾಘವೇಂದ್ರಸ್ವಾಮಿ ಅವರ ಹರಕೆಯಂತೆ ನಿಶಾನಿ ಮರ ತರಲಾಯಿತು. ಈ ವೇಳೆ ಯಜಮಾನ್ ಶಿವಕುಮಾರ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಪ್ರತಿ ಬಾರಿಯೂ ನಿಶಾನಿ ಮರ ನೀಡುವುದಾಗಿ ಹರಕೆ ಹೊತ್ತ ಭಕ್ತರಿಂದ ಮರಕ್ಕೆ ಪೂಜೆ ಸಲ್ಲಿಸಿ ತರಲಾಗುತ್ತದೆ. ಅದರಂತೆ ಈ ಬಾರಿ ದಲಿತ ಕಾಲೋನಿಯ ದಿವಂಗತ ದೊಡ್ಡಮಾದಯ್ಯನವರ ಮಕ್ಕಳಾದ ಡಿ.ಸೋಮಶೇಖರ್ ಹಾಗೂ ರಾಘವೇಂದ್ರ ಸ್ವಾಮಿ ಹರಕೆಯಂತೆ ನಿಶಾನಿ ಮರಕ್ಕೆ ಪೂಜೆ ಸಲ್ಲಿಸಿ ಯಜಮಾನರಾದ ಶಿವಕುಮಾರ್‌ರವರ ನೇತೃತ್ವದಲ್ಲಿ ಅಡಿಕೆ ಮರ ಕಡಿದು ಮೆರವಣಿಗೆ ಮೂಲಕ ತರಲಾಯಿತು. ದಲಿತ ಬಾಂಧವರು ಮರ ಕೊಡಿಸುತ್ತಿರುವುದು ಹುಲಿಯಮ್ಮ ಹಬ್ಬದ ಇತಿಹಾಸದಲ್ಲೆ ಇದೇ ಮೊದಲು. ಇಂತಹ ಸೌಹಾರ್ದತೆಗೆ ಯಜಮಾನ್ ಶಿವಕುಮಾರ್ ಅವರೇ ಕಾರಣಕರ್ತರು ಎಂದು ಭಕ್ತರು ಅವರನ್ನು ಕೊಂಡಾಡಿದ್ದಾರೆ. ಈ ಸಂದರ್ಭದಲ್ಲಿ ದಲಿತರು, ನಾಯಕ ಜನಾಂಗದ ಮುಖಂಡರು ಸೇರಿದಂತೆ ಸಾವಿರಾರು ಸಂಖ್ಯೆಯ ಗ್ರಾಮಸ್ಥರು ಹಾಜರಿದ್ದು, ಧಾರ್ಮಿಕ ಕಾರ್ಯದಲ್ಲಿ ತಮ್ಮ ತಮ್ಮ ಜವಾಬ್ದಾರಿ ಮೆರೆದರು. ಉದಯಗಿರಿ ಪೊಲೀಸ್ ಠಾಣೆ ಪೊಲೀಸರಿಂದ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭ

ಮೈಸೂರು,ಫೆ.28– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿರುವ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯ ಆವರಣದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಫೆ.6 ರಿಂದ ಹೊರರೋಗಿ ವಿಭಾಗವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಶಸ್ತ್ರಚಿಕಿತ್ಸೆಗಳನ್ನು ಇಂದಿನಿಂದ ಪ್ರಾರಂಭಿಸಲಾಗಿದೆ. ಸದರಿ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳನ್ನು ಸಾರ್ವಜನಿಕರು ಪಡೆದುಕೊಳ್ಳುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಎಂ.ವಿ.ಕುಮಾರಸ್ವಾಮಿ

ಮೈಸೂರು, ಫೆ28–ಮೈಸೂರಿನ ಜೆಎಸ್‌ಎಸ್ ಲೇ ಔಟ್ ನಿವಾಸಿಯೂ ಆದ ಜೆಎಸ್‌ಎಸ್ ವಿಕಲಚೇತನ ಡಿಪ್ಲೋಮಾ ಕಾಲೇಜಿನ ನಿವೃತ್ತ ಆಡಳಿತಾಧಿಕಾರಿ ಎಂ.ವಿ.ಕುಮಾರಸ್ವಾಮಿ(68) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ವಿಜಯಾಂಭ ಸೇರಿದಂತೆ ಅಪಾರ ಬಂದುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಗುರವಾರ) ಮಧ್ಯಾಹ್ನ 1 ಗಂಟೆಗೆ ಮೈಸೂರು ಹೊರವಲಯದ ಲಲಿತಾದ್ರಿಪುರ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯ ಎಜಿಎಂ ಎಂ.ಜಿ. ಸುದೀಪ್ ತೀವ್ರ ಸಂತಾಪ ಸೂಚಿಸಿದ್ದಾರೆ.

ಸೋಮಶೇಖರ್




ಹೊಳೆನರಸೀಪುರ, ಫೆ.28–ತಾಲೂಕಿನ ಉದ್ದೂರು ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಸದಸ್ಯ ಸೋಮಶೇಖರ್ (60) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಕಲಾವತಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ ಸಿ.ವಿ.ರಾಮನ್ ಸಾಧನೆ ಹಿಂದೆ ಕನ್ನಡ ನಾಡಿನ ಕಾಣಿಕೆಯೂ ಇದೆ

ಸಾಹಿತಿ ಬನ್ನೂರು ರಾಜು ವಿವರಣೆ

ಮೈಸೂರು, ಫೆ.28–ಕನ್ನಡಜ್ಞಾನಿ, ಪ್ರಸಿದ್ಧ ವಿಜ್ಞಾನಿ ಭಾರತರತ್ನ ಸರ್ ಸಿ.ವಿ. ರಾಮನ್ ಅವರ ವಿಜ್ಞಾನದ ಬದುಕು ಜಗತ್ತಿಗೆ ಅದರಲ್ಲೂ ವಿಶೇಷವಾಗಿ ಯುವ ವಿಜ್ಞಾನಿಗಳಿಗೆ ಮಾದರಿಯಾಗುವಂತದ್ದೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯು ಹೆಚ್.ಡಿ. ಕೋಟೆ ರಸ್ತೆಯ ರೈಲ್ವೆ ಕಾರ್ಯಾಗಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಸರ್. ಸಿ.ವಿ. ರಾಮನ್ ಗೌರವಾರ್ಥದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಭಾರತ ದೇಶದಲ್ಲಷ್ಟೇ ಅಲ್ಲದೆ ಇಡೀ ಏಷ್ಯಾದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಭೌತ ವಿಜ್ಞಾನದಲ್ಲಿ ಪ್ರಪಂಚದ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಪಡೆದು ಭಾರತದ ಕೀರ್ತಿಯನ್ನು ಜಗತ್ತಿನ ಉದ್ದಗಲಕ್ಕೂ ಬೆಳಗಿ ಜಾಗತಿಕವಾಗಿ ನಮ್ಮ ಕರ್ನಾಟಕಕ್ಕೂ ಒಂದು ಕೋಡು ಮೂಡಿಸಿದ ವಿಜ್ಞಾನಲೋಕದ ಮಹಾಬೆಳಕು ಸರ್ ಸಿ.ವಿ.ರಾಮನ್ ಎಂದರು.




ಮೂಲತಃ ರಾಮನ್ ಅವರು ತಮಿಳುನಾಡಿನವರಾದರೂ ವಿಜ್ಞಾನ ಲೋಕದ ಅವರ ಎಲ್ಲಾ ರೀತಿಯ ಅಧ್ಯಯನ, ಅಧ್ಯಾಪನ, ಸಂಶೋಧನೆಗಳಿಗೂ ನಮ್ಮ ಕನ್ನಡನಾಡು ಕರ್ಮಭೂಮಿಯಾಗಿತ್ತು. ವಿಶೇಷವಾಗಿ ಅವರಿಗೆ ನೊಬೆಲ್ ಪ್ರಶಸ್ತಿಯನ್ನು ತಂದುಕೊಟ್ಟ ಬೆಳಕಿನ ಆವಿಷ್ಕಾರವಾದ ರಾಮನ್ ಎಫೆಕ್ಟ್ ಅಥವಾ ರಾಮನ್ ಪರಿಣಾಮದ ಸಂಶೋಧನೆಗೆ ಮೂಲವೇ ಕನ್ನಡ ನಾಡಿನ ಬೆಂಗಳೂರಾಗಿದ್ದು,ಇದರ ಸಂಪೂರ್ಣ ಕ್ರೆಡಿಟ್ ನಮ್ಮ ಕನ್ನಡ ನಾಡಿಗೆ ಸಲ್ಲುತ್ತದೆ.1928 ಫೆಬ್ರವರಿ 28 ರಂದು ಬೆಂಗಳೂರಿನ ಸುಪ್ರಸಿದ್ಧ ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರ ಸಂಘದವರು ಭೌತವಿಜ್ಞಾನಿ ಸಿ.ವಿ.ರಾಮನ್ ಅವರನ್ನು ವಿಜ್ಞಾನದ ಬಗ್ಗೆ ಉಪನ್ಯಾಸ ನೀಡಲು ಕಾಲೇಜಿಗೆ ಕರೆಸಿದ್ದರು. ಆ ಸಂದರ್ಭದಲ್ಲಿ ರಾಮನ್ ಅವರು ಸೆಂಟ್ರಲ್ ಕಾಲೇಜಿನ ಭವ್ಯ ಸಭಾಂಗಣದಲ್ಲಿ ಬೆಳಕನ್ನು ಕುರಿತು ತಮ್ಮದೇ ಆದ ಆವಿಷ್ಕಾರದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಇದೇ ವಿಷಯ ಮುಂದೆ ಬೆಳಕಿನ ಬಗೆಗಿನ ಮಹತ್ವಪೂರ್ಣ ಸಂಶೋಧನೆಯಾಗಿ ರಾಮನ್ ಪರಿಣಾಮ ಎಂದು ಹೆಸರಾಗಿ 1930ರಲ್ಲಿ ನೊಬೆಲ್ ಪುರಸ್ಕಾರಕ್ಕೆ ಅವರು ಭಾಜನರಾದದ್ದು ಈಗ ವಿಶ್ವ ವಿಜ್ಞಾನ ಲೋಕದ ಇತಿಹಾಸ. ಈ ಕಾರಣಕ್ಕೆ ಫೆಬ್ರವರಿ 28 ರ ದಿನಕ್ಕೆ ವಿಶೇಷ ಮಹತ್ವ ನೀಡಿ ಪ್ರತಿವರ್ಷ ದೇಶ ಹೆಮ್ಮೆಯಿಂದ ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಸರ್ ಸಿ.ವಿ.ರಾಮನ್ ಅವರ ಭಾವಚಿತ್ರಕ್ಕೆ ವೇದಿಕೆಯಲ್ಲಿದ್ದ ಗಣ್ಯರು ಪುಷ್ಪಾರ್ಚನೆ ಮಾಡುವುದರ ಮೂಲಕ ಆರಂಭವಾದ ಈ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಸ್ತುತ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿರುವ ಶಾಲೆಯ ವಿದ್ಯಾರ್ಥಿಗಳಿಗೆ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಅಧ್ಯಕ್ಷ ಎಚ್.ವಿ.ಮುರಳೀಧರ್ ಪರೀಕ್ಷಾ ಪರಿಕರಗಳನ್ನು ವಿತರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಸಂಖ್ಯಾಶಾಸ್ತ್ರಜ್ಞ ಎಸ್.ಜಿ.ಸೀತಾರಾಂ ಮಾತನಾಡಿ, ಪ್ರತಿಯೊಂದಕ್ಕೂ ವಿಜ್ಞಾನ ಬೇಕು. ವಿಜ್ಞಾನವಿಲ್ಲದೆ ಜೀವನವಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ವಿದ್ಯಾರ್ಥಿ ದಿಶೆಯಲ್ಲೇ ವಿಜ್ಞಾನದತ್ತ ಆಸಕ್ತಿ ಹೊಂದಬೇಕು. ಕುತೂಹಲಿಗಳಾಗಿ ಪ್ರಶ್ನೆ ಮಾಡುವುದರ ಮೂಲಕ ವಿಜ್ಞಾನವನ್ನು ಅರಿತುಕೊಳ್ಳಬೇಕು. ವಿಶೇಷವಾಗಿ ಹೆಣ್ಣು ಮಕ್ಕಳು ವಿಜ್ಞಾನವನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡಿ ಮೇರಿ ಕ್ಯೂರಿಯಂಥ ವಿಜ್ಞಾನಿಗಳ ಬದುಕನ್ನು ಮಾದರಿ ಮಾಡಿಕೊಳ್ಳಬೇಕೆಂದು ಹೇಳಿದ ಅವರು, ಸಿ.ವಿ. ರಾಮನ್‌ರ ವಿಜ್ಞಾನ ಸಾಧನೆಯ ಹಿನ್ನೆಲೆಯಲ್ಲಿ ವಿಜ್ಞಾನ ಜಗತ್ತನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟು ನೀವೂ ಅವರಂತಾಗಬೇಕೆಂದು ಶುಭ ಹಾರೈಸಿದರು.

ಪ್ರೌಢಶಾಲಾ ಮುಖ್ಯ ಶಿಕ್ಷಕಿ ಎಲ್.ಲತಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು. ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷರೂ ಆದ ವಿಶ್ರಾಂತ ಶಿಕ್ಷಕ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎನ್. ಕೆ.ಕಾವೇರಿಯಮ್ಮ, ಶಿಕ್ಷಕರಾದ ಎನ್.ನಾಗರಾಜು, ಜಿ.ರವಿ, ಪಿ. ನಾಗಲಿಂಗಪ್ಪ, ಕೆ.ಎಂ.ಮಹೇಶ್, ಕುಮಾರ್,ವಿನುತಾ ಬಗರೆ, ವಿ.ಲೀಲಾವತಿ, ನೂರ್ ಸಲ್ಮಾ ಭಾನು, ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.3.2023 ಬುಧವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.
- **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಶೇಷಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.
- **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ:** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಜೈನ ವಿದ್ವಾಂಸ ರಮೇಶ್ ಶಾಸ್ತ್ರಿ ಅವರಿಂದ ಗಾಥ : 426 ರಿಂದ 450 ಕುರಿತು ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ರಾಜಕೀಯ ವಿಜ್ಞಾನ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ :** ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ ಅವರಿಂದ ಜಾಗತೀಕರಣದ ಮಾರ್ಗಸೂಚಿಗಳು ಮತ್ತು ದೃಷ್ಟಿಕೋನಗಳು ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಡಾ. ಕಾವೇರಿ ಸ್ವಾಮಿ, ಸನ್ಮಾನಿತರು: ಡಾ.ಸಿ.ಎಸ್. ಚಂದ್ರಿಕಾ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಕ್ಯಾತಮಾರನಹಳ್ಳಿ ಗ್ರಾಮಸ್ಥರು:** ಹುಲಿಯಮ್ಮ ಜಾತ್ರಾ ಮಹೋತ್ಸವ, ಮರಿಸೊಳ್ಳು ಕಾರ್ಯಕ್ರಮ, ಹೆಣ್ಣು ಮಕ್ಕಳು ಅಲಂಕಾರದ ಮೂಲಕ ತಟ್ಟೆಯಲ್ಲಿ ಬೆಲ್ಲವನ್ನಿಟ್ಟು ಅದಕ್ಕೆ ದೀಪ ಹಚ್ಚಿ ಮೆರವಣಿಗೆ ಮೂಲಕ ದೇವಾಲಯಕ್ಕೆ ಬಂದು ಪೂಜೆ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.1 ಗೀತಾರಾಧನ, 6.3 ಜೆಎಸ್‌ಎಸ್ ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ ಸದಾಶಿವ ಪಾಟೀಲ್, ಎ.ಎಸ್.ನಾಗಲಕ್ಷ್ಮೀ, ವ್ಯಾಖ್ಯಾನ– ಡಾ.ಸಿ. ನಾಗಣ್ಣ, 8.30 ತಾಯಿ ಆರೋಗ್ಯ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ. ಪ್ರಾಯೋಜಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಸಂಗೀತ, 11.00 ತಾಯಿ ಆರೋಗ್ಯ – ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ. ಪ್ರಾಯೋಜಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಚೊಂಬು ತಾಂಬಾಳದಿಂದ ಮೊಬೈಲ್‌ವರೆಗೆ", ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭು ಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ– ಮೃದಂಗ ತರಂಗದಲ್ಲಿ ಲಯ ವಿನ್ಯಾಸ, ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಪ್ರಸ್ತುತಿ– ಅಬ್ದುಲ್ ರಶೀದ್, 6.50 ಕೃಷಿರಂಗ–ಕಿಸಾನ್ ವಾಣಿ, 9.30 ಹಿಂದೂಸ್ಥಾನಿ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು.

ಚಂದ್ರವಾಡಿಯಲ್ಲಿಂದು, ನಂಜನಗೂಡು ತಾಲೂಕು

- **ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ :** ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ಗ್ರಾಮದ ಮುಖಂಡರಾದ ವಿ.ಪಿ. ನಾಗರಾಜಪ್ಪ, ನಟರಾಜಣ್ಣ, ಬೆಳಗ್ಗೆ 10ಕ್ಕೆ ಅಗ್ನಿ ಶಮನ ಉಪಕರಣಗಳು ಹಾಗೂ ಅಗ್ನಿ ಶಮನದ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ, ಸಂಜೆ 5ಕ್ಕೆ ಉಪನ್ಯಾಸ ಕಾರ್ಯಕ್ರಮ, ಮುಖ್ಯೋಪಾಧ್ಯಾಯ ಎಂ. ಭವಾನಿಶಂಕರ್ ಅವರಿಂದ ಮೂಢನಂಬಿಕೆ ಮತ್ತು ಪವಾಡಗಳ ರಹಸ್ಯ ಬಯಲು ಕುರಿತು ಉಪನ್ಯಾಸ, ಅಧ್ಯಕ್ಷತೆ : ಹೆಚ್.ಎಂ. ರಾಜಶೇಖರ, ಉಪಸ್ಥಿತರು : ಎಂ.ಪಿ. ಕಿರಣ್, ಅಶೋಕ್ ಕುಮಾರ್, ಸಿ.ಎಂ. ರಾಜಣ್ಣ, ಸಿ.ಎಂ. ಮಹೇಶ್.

15 ವರ್ಷವಾದರೂ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಕಚೇರಿ ಭಾಗ್ಯವಿಲ್ಲ

ಕೆಆರ್ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಎಲ್.ಶಿವಲಿಂಗಪ್ಪ ಬೇಸರ

ಮೈಸೂರು,ಫೆ.28(ಪಿಎಂ)– ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತು 15 ವರ್ಷಗಳೇ ಕಳೆದರೂ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಒಂದು ಸುವ್ಯವಸ್ಥಿತ ಕಚೇರಿ ಭಾಗ್ಯವಿಲ್ಲ ಎಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರೂ ಆದ ಹಿರಿಯ ಲೇಖಕ ಹಾಗೂ ಕಲಾವಿದ ಎಲ್.ಶಿವಲಿಂಗಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದ ಪ.ಮಲ್ಲೇಶ್ ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮೈಸೂರು ನಗರ ಘಟಕದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡಿದರು.

ಶಾಸ್ತ್ರೀಯ ಸ್ಥಾನಮಾನ ದೊರೆತು ಇಂದಿಗೆ 15 (2008) ವರ್ಷಗಳೇ ಕಳೆದರೂ ಇದರ ಕೇಂದ್ರಕ್ಕೊಂದು (ಜಯಲಕ್ಷ್ಮೀವಿಲಾಸ ಅರಮನೆಯಲ್ಲಿ ಕೇಂದ್ರದ ಕಚೇರಿ ಆರಂಭಿಸಲು ಇತ್ತೀಚೆಗೆ ಮೈಸೂರು ವಿವಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆಯಾಗಿದೆ.) ಸುವ್ಯವಸ್ಥಿತ ಕಚೇರಿ ಕಲ್ಪಿಸಲಾಗಿಲ್ಲ. ಈ 15 ವರ್ಷಗಳ ಅವಧಿಯಲ್ಲಿ ಬಂದ ಅಲ್ಪ ಪ್ರಮಾಣದ ಅನುದಾನವನ್ನೂ ಸದ್ಬಳಕೆ ಮಾಡಿಕೊಳ್ಳದೇ 10 ಕೋಟಿ ರೂ. ಅನ್ನು ಕೇಂದ್ರ ಸರ್ಕಾರಕ್ಕೆ ವಾಪಸ್ಸು ಮಾಡಲಾಗಿದೆ. ಇದನ್ನು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ.ಟಿ.ರವಿ ಅವರೇ ಹೇಳಿದ್ದು ಮಾಧ್ಯಮದಲ್ಲಿ ವರದಿಯಾಗಿತ್ತು ಎಂದರು.

ಸಾವಿರಾರು ಎಕರೆ ಸರ್ಕಾರಿ ಜಮೀನು ಬಡಾವಣೆಗಳಾಗುತ್ತಿವೆ. ಬಗೆಬಗೆಯ ಕಟ್ಟಡಗಳು ನಿರ್ಮಾಣಗೊಳ್ಳುತ್ತಿವೆ. ಈ ನಡುವೆ ಎಷ್ಟೋ ಸರ್ಕಾರಿ ಕಟ್ಟಡಗಳು ಕಸಗುಡಿಸುವವರಿಲ್ಲದೆ, ಹಾಳಾಗುತ್ತಿವೆ. ರಾಜ್ಯವನ್ನು ಆಳುವವರು ಜನರ ಓಲೈಕೆಗಾಗಿ ಮಾಡಿರುವ ಮತ್ತು ಮಾಡುತ್ತಿರುವ ಅಧ್ಯಯನ ಪೀಠ, ನಿಗಮಗಳು ನಿತ್ರಾಣವಾಗಿವೆ. ಕೆಲವರಿಗೆ ಇವು ವಿಶ್ರಾಂತಿ ತಾಣವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದ ಶಾಸ್ತ್ರೀಯ ಕೇಂದ್ರಕ್ಕೆ ನೆಲೆ ಎಲ್ಲಿ ಎಂದು ವಿಷಾದಿಸಿದರು.

ಕನ್ನಡ ನಾಡಿನಲ್ಲಿ ಆಡಳಿತದ ಕಡತಗಳು ಸೇರಿದಂತೆ ಅಂಗಡಿ ಮುಂಗಟ್ಟುಗಳಾದಿಯಾಗಿ ಎಲ್ಲಾ ವ್ಯವಹಾರಗಳು ಕನ್ನಡದಲೇ ಆಗಬೇಕು. ಇಂಗ್ಲೀಷ್ ದ್ವಿತೀಯ ಭಾಷೆಯಾಗಬೇಕು ಎಂಬ ಮುಖ್ಯಾಂಶಗಳನ್ನು 1980ರ ಡಾ.ವಿ.ಕೃಗೋಕಾಕ್ ನೀಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ, 1983ರಲ್ಲಿ ಡಾ.ಸರೋಜಿನಿ ಮಹಿಷಿಯವರು ವರದಿ ಕೊಟ್ಟರು. ಅದರಂತೆ ಖಾಸಗಿ ಅಥವಾ ಸರ್ಕಾರಿ ಕ್ಷೇತ್ರವಾದರೂ ಕನ್ನಡಿಗರಿಗೇ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನೀಡಬೇಕು. ರಾಷ್ಟ್ರ ಮತ್ತು ರಾಜ್ಯ ಪ್ರಗತಿಗಾಗಿ ಉಳುವ ಭೂಮಿ ಕೊಟ್ಟವರ ಕುಟುಂಬಕ್ಕೆ ಉದ್ಯೋಗ ಕೊಡಲೇಬೇಕೆಂದು ಶಿಫಾರಸ್ಸು ಈ ವರದಿಯಲ್ಲಿದೆ. ಆದರೆ ಈ ಎಲ್ಲವೂ ಕಗ್ಗತ್ತಲೆಯ ಕಪಾಟಿನಲ್ಲಿ ಜಿರಳೆಗಳ ಆಹಾರವಾಗಿವೆ. ಇನ್ನು ಸರ್ಕಾರಿ ಶಾಲೆಗಳ ಪರಿಸ್ಥಿತಿಯಂತೂ ಹೇಳತೀರದು ಎಂದು ಬೇಸರ ವ್ಯಕ್ತಪಡಿಸಿದರು.

2004ರಲ್ಲಿ ಪ್ರಪ್ರಥಮವಾಗಿ ತಮಿಳು ಭಾಷೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ತದನಂತರ ನಿರಾಯಾಸವಾಗಿ 2005ರಲ್ಲಿ ಸಂಸ್ಕೃತ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದಕ್ಕಿತು. ಸಂಸ್ಕೃತವನ್ನು ಜಗತ್ತಿನಾದ್ಯಂತ ಮಾತ್ರವಲ್ಲ, ಭಾರತದಲ್ಲಿಯೇ ಮಾತೃಭಾಷೆಯನ್ನಾಗಿ ಮಾಡಿಕೊಂಡವರು ಬೆರಳೆಣಿಕೆಯಷ್ಟು ಜನ ಇಲ್ಲ. ಆದರೆ ಕೇಂದ್ರ ಸರ್ಕಾರ ಮಾತ್ರ ಇದಕ್ಕೆ ಕೋಟಿಗಟ್ಟಲೇ ಹಣ ನೀಡುತ್ತಿದೆ. ಆದರೆ ಕನ್ನಡ ಭಾಷಾ ಬೆಳವಣಿಗೆಗೆ ಲಕ್ಷಗಳಷ್ಟು ಮಾತ್ರ ನೀಡುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆ.ಆರ್. ಕ್ಷೇತ್ರ ಕಲೆ, ಸಂಸ್ಕೃತಿ ತವರೂರು: ಕೃಷ್ಣರಾಜ ವಿಧಾನಸಭಾ ಕ್ಷೇತ್ರವು ಕಲೆ ಮತ್ತು ಸಂಸ್ಕೃತಿಯ ತವರೂರು. ಸಂಗೀತ, ನೃತ್ಯ, ನಾಟಕ, ಚಿತ್ರ, ಶಿಲ್ಪಕಲೆ, ಸಾಹಿತ್ಯ ಈ ಎಲ್ಲಾ ಕ್ಷೇತ್ರಗಳ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕ್ಷೇತ್ರವಿದು. ಅಲ್ಲದೆ, ಅರಮನೆ ಆಡಳಿತದಲ್ಲಿ ಅಗ್ರಹಾರ, ವಿಶಾಲ ರಸ್ತೆಗಳು ನಿರ್ಮಾಣಗೊಂಡಿವೆ. ಮೈಸೂರು ಸಂಸ್ಕೃತಿಯ ಬೀಡು ಎಂದು ಖ್ಯಾತಿ ಹೊಂದಿದ್ದು, ಇದಕ್ಕೆ ಕಾರಣ ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಅವರ ಕೊಡುಗೆಯಾಗಿದೆ. ಅಲ್ಲದೆ, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಯಂತೂ ಅಪಾರ ಎಂದು ಸ್ಮರಿಸಿದರು.

ಆಶಯ ಭಾಷಣ ಮಾಡಿದ ಸಮ್ಮೇಳನದ ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್, ಕಸಾಪ ಜಿಲ್ಲಾಧ್ಯಕ್ಷರ ಅನುಮತಿ ಮೇರೆಗೆ ಬೆಂಗಳೂರು ಮಾದರಿಯಲ್ಲಿ ಕೆಆರ್ ಕ್ಷೇತ್ರದಲ್ಲಿ ಪ್ರಥಮ ಪ್ರಯತ್ನವಾಗಿ ಸಮ್ಮೇಳನ ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಮೈಸೂರು ನಗರದ ಚಾಮರಾಜ ಮತ್ತು ಎನ್‌ಆರ್ ಕ್ಷೇತ್ರಗಳಲ್ಲೂ ಸಮ್ಮೇಳನ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು. 'ಕೃಷ್ಣರಾಜ ವಿಧಾನಸಭಾ ಕ್ಷೇತ್ರ ದರ್ಶನ' ಕುರಿತು ನಿವೃತ್ತ ತಹಸೀಲ್ದಾರ್ ಡಾ.ವಿ. ರಂಗನಾಥ್ ವಿಶೇಷ ಉಪನ್ಯಾಸ ನೀಡಿದರು.

ಇದಕ್ಕೂ ಮುನ್ನ ಅಮ್ಮಸಂದ್ರ ಸುರೇಶ್ ಅವರ 'ಮಹಾ ಮಾನವತಾವಾದಿ', 'ಪತ್ರಿಕೋದ್ಯಮದ ತೇರನೆಳೆದವರು' ಮತ್ತು ಎ.ಈ.ವೀರಭದ್ರೇಗೌಡ ಆಂದಲೆ ಅವರ 'ಚುಟುಕು ಮುಂಗಾರು ಹನಿಗಳು' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಪಾಲಿಕೆ ಸದಸ್ಯರಾದ ಮ.ವಿ.ರಾಮ್‌ಪ್ರಸಾದ್, ಶೋಭಾ ಸುನಿಲ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಚುಟುಕು ಸಾಹಿತಿ ಡಾ.ಎಂ.ಜಿ.ಆರ್. ಅರಸ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸಂಸ್ಕೃತಿ ಪೋಷಕ ಕೆ.ರಘುರಾಮ್ ವಾಜಪೇಯಿ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕುವೆಂಪು ಭಾಷಾಭಾರತಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ ಉದ್ಘಾಟಿಸಿದರು.



ಜಾನಪದ ಕಲಾ ತಂಡಗಳೊಂದಿಗೆ ಸಾರೋಟಿನಲ್ಲಿ ಸಮ್ಮೇಳನಾಧ್ಯಕ್ಷರ ಮೆರವಣಿಗೆ



ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಸಮ್ಮೇಳನಾಧ್ಯಕ್ಷರು ಸಾರೋಟಿನಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗಿದರು. ಜೆಎಸ್‌ಎಸ್ ಮಹಾ ವಿದ್ಯಾಪೀಠದ ಎದುರಿನ ಬಸವಣ್ಣನವರ ಪ್ರತಿಮೆ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆಯು ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮಾರ್ಗದ ಮೂಲಕ ಮಹಾರಾಜ ಕಾಲೇಜು ಶತಮಾನೋತ್ಸವ ಭವನ ತಲುಪಿತು. ಮೆರವಣಿಗೆಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು.

ಧ್ವಜಾರೋಹಣ: ಶತಮಾನೋತ್ಸವ ಭವನದ ಎದುರು ಧ್ವಜಾರೋಹಣದೊಂದಿಗೆ ಸಮ್ಮೇಳನಕ್ಕೆ ಚಾಲನೆ ದೊರೆಯಿತು. ಶಾಸಕ ಎಸ್.ಎ.ರಾಮದಾಸ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಮೇಯರ್ ಶಿವಕುಮಾರ್ ನಾಡ ಧ್ವಜಾರೋಹಣ ನೆರವೇರಿಸಿದರೆ, ಪರಿಷತ್ತಿನ ಧ್ವಜಾರೋಹಣವನ್ನು ಕಸಾಪ ನಗರಾಧ್ಯಕ್ಷ ಕೆ.ಎಸ್.ಶಿವರಾಮು ನೆರವೇರಿಸಿದರು.


ಕನ್ನಡ ಭಾಷಾಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಸವಲತ್ತು ಪಡೆಯಬೇಕು

ಸಮ್ಮೇಳನ ಉದ್ಘಾಟಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ ಅಭಿಮತ

ಮೈಸೂರು,ಫೆ.28(ಪಿಎಂ)– ಕನ್ನಡದ ಅಸ್ಮಿತೆ ಅನಾವರಣದ ಮೂಲಕ ಸರ್ಕಾರಗಳಿಂದ ಭಾಷಾಭಿವೃದ್ಧಿಗೆ ಅಗತ್ಯ ಸವಲತ್ತು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಕನ್ನಡದ ಧ್ವನಿ ಮೊಳಗಬೇಕು ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮೈಸೂರು ನಗರ ಘಟಕದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದಂತೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಸ್ಥಾಪನೆಯಾಗಿ ಹಲವು ವರ್ಷಗಳೇ ಕಳೆದಿವೆ. ಇಲ್ಲಿಗೆ ಈವರೆಗೆ ಕೇವಲ 7 ಕೋಟಿ ಮಾತ್ರವೇ ಸರ್ಕಾರದ ಅನುದಾನ ದೊರಕಿದೆ. ಚಿದಂಬರಂ ಅವರು ಕೇಂದ್ರದ ಹಣಕಾಸು ಸಚಿವರಾಗಿದ್ದಾಗ ತಮಿಳು ಶಾಸ್ತ್ರೀಯ ಭಾಷೆಯ ಕೇಂದ್ರ ಸ್ಥಾಪನೆಗೆ ನೂರಾರು ಕೋಟಿ ರೂ. ಅನುದಾನ ಕಲ್ಪಿಸಿದರು. ಹಾಗಾಗಿ ಕನ್ನಡಕ್ಕೂ ಹೆಚ್ಚಿನ ಸವಲತ್ತು ಪಡೆಯಲು ನಮ್ಮ ಭಾಷೆಯ ಅಸ್ಮಿತೆ ಅನಾವರಣಗೊಳಿಸಿ, ಕನ್ನಡಿಗರು ಧ್ವನಿ ಮೊಳಗಿಸಬೇಕು ಎಂದು ತಿಳಿಸಿದರು.



ಡಾ.ಪ್ರಧಾನ್ ಗುರುದತ್

ಸಾಹಿತ್ಯ ಸೇವೆ ಮಾಡುವ ಅನೇಕರು ತೆರೆಮರೆಯಲ್ಲೇ ಉಳಿದುಬಿಡುತ್ತಾರೆ. ಅಂತಹವರನ್ನು ಗುರುತಿಸಿ, ಗೌರವಿಸಲು ಇಂತಹ ಸಮ್ಮೇಳನ ಅಗತ್ಯ. ಸಾಹಿತ್ಯಕ, ಸಾಮಾಜಿಕ ಮತ್ತು ಕಲಾ ಕ್ಷೇತ್ರದಲ್ಲಿ ಮಹತ್ವಪೂರ್ಣ ಕೆಲಸ ಮಾಡುವವರನ್ನು ಗುರುತಿಸಿ ಪ್ರೋತ್ಸಾಹ ನೀಡಿದರೆ, ಅವರಲ್ಲಿನ ಸೃಜನಶೀಲತೆ ಬೆಳೆದು ಅವರಿಂದ ಸಮಾಜಕ್ಕೆ ಮತ್ತಷ್ಟು ಸೇವೆ ಲಭ್ಯವಾಗುತ್ತದೆ. ತೆರೆಮರೆಯಲ್ಲಿ ಇರುವ ಸಾಧಕರನ್ನು ಗುರುತಿಸುವುದು ಸಮ್ಮೇಳನದ ಮುಖ್ಯ ಉದ್ದೇಶಗಳಲ್ಲೊಂದು ಎಂಬುದನ್ನು ತಿಳಿದು ಸಂತಸ ಉಂಟಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಇಂದಿನ ಸಮ್ಮೇಳನದಲ್ಲಿ ಸಾಕಷ್ಟು ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಸೇರಿರುವುದು ವಿಶೇಷ. ಪರಸ್ಪರ ಸನ್ಮಾನಿಸಿಕೊಳ್ಳುವ ಸಮ್ಮೇಳನವಾಗದೇ ಭಾಷೆಗೆ ಸಂಬಂಧಿಸಿದ ನೈಜ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಚರ್ಚೆಗೆ ಇಲ್ಲಿ ಆದ್ಯತೆ ನೀಡಲಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ. ತಿರುಚಿ ಬರೆದಿರುವ ಭಾರತೀಯ ಇತಿಹಾಸವನ್ನು ಶಿಕ್ಷಣದಿಂದ ಮುಕ್ತಗೊಳಿಸಿ ನೈಜ ಇತಿಹಾಸ ದಾಖಲಿಸಲು ಈ ನೀತಿ ರೂಪಿಸಲಾಗಿದೆ. ಸದರಿ ನೀತಿ ಕುರಿತು ಇಲ್ಲಿ ವಿಚಾರಗೋಷ್ಠಿ ಏರ್ಪಡಿಸಿರುವುದು ಸಂತಸ ಉಂಟು ಮಾಡಿದೆ. ನಮ್ಮ ಭಾಷೆಯ ಬೆಳವಣಿಗೆಗೆ ಸವಾಲಾಗಿರುವ ನಿರಾಸಕ್ತಿ ತೊಡೆದು ಹಾಕಲು ಇಂತಹ ಸಮ್ಮೇಳನದ ಮೂಲಕ ಚಿಂತನ–ಮಂಥನ ಆಗಬೇಕಿದೆ ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಪ್ರಾದೇಶಿಕ ಭಾಷೆಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಸಲುವಾಗಿ ಪ್ರಧಾನಿಗಳು ಒಂದು ಸಮಿತಿ ರಚನೆ ಮಾಡಿದ್ದಾರೆ. ಹಳ್ಳಿ ಹಳ್ಳಿಗಳಲ್ಲಿಂದು ಕಾನ್ವೆಂಟ್‌ಗಳು ತಲೆ ಎತ್ತಿದ್ದು, ಆ ಮೂಲಕ ಮಕ್ಕಳ ತಲೆಗೆ ಇಂಗ್ಲೀಷ್ ತುಂಬುವ ಕೆಲಸವಾಗುತ್ತಿದೆ. ಇದಕ್ಕೆ ತಡೆಯೊಡ್ಡಲು ಪ್ರಧಾನಿಗಳು ಇಂತಹ ಸಮಿತಿ ರಚಿಸಿದ್ದಾರೆ. ಇದು ನಿಜಕ್ಕೂ ಅಭಿನಂದನಾರ್ಹ. ಕರ್ನಾಟಕ ಸರ್ಕಾರವೂ ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಭಾಷಾ ವಿಧೇಯಕ ಸಿದ್ಧಪಡಿಸಿ, ಅದಕ್ಕೆ ಅಂಗೀಕಾರ ನೀಡಿದೆ. ಆ ಮೂಲಕ ನ್ಯಾಯಾಲಯ, ಶಿಕ್ಷಣ, ಆಡಳಿತ ಸೇರಿದಂತೆ ಎಲ್ಲಾ ವ್ಯವಸ್ಥೆಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಮುಂದಾಗಿದ್ದು, ಇದಕ್ಕಾಗಿ ರಾಜ್ಯ ಸರ್ಕಾರಕ್ಕೂ ವಂದಿಸುವುದಾಗಿ ಹೇಳಿದರು.

ಮೈಸೂರು ಇಡೀ ದೇಶದಲ್ಲಿ ಪ್ರಸಿದ್ಧಿ ಹೊಂದಿದ್ದು, ಇದಕ್ಕೆ ಕಾರಣ ಮೈಸೂರು ಅರಸರ ಕೊಡುಗೆ. ಮಹಾರಾಜರ ದೂರ ದೃಷ್ಟಿಯ ಆಡಳಿತ ಫಲವಾಗಿ ಅದ್ಭುತ ಕಾರ್ಯಗಳಾಗಿವೆ. ಋಗ್ವೇದದ 32 ಸಂಪುಟಗಳನ್ನು ನಮ್ಮ ಮಹಾರಾಜರು ಪ್ರಕಟಿಸಿದ್ದಾರೆ. ಅಲ್ಲದೆ, ಪುರಾಣ, ಉಪನಿಷತ್‌ಗಳನ್ನು ಕನ್ನಡಕ್ಕೆ ತಂದಿದ್ದಾರೆ. ಯಾವುದೇ ವಿಶ್ವವಿದ್ಯಾನಿಲಯವೂ ಮಾಡಲಾಗದ ಕೆಲಸವನ್ನು ಮಾಡಿದ್ದಾರೆ. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್, ಅಪಾರ ಪ್ರಮಾಣದ ಅಭಿವೃದ್ಧಿಗೆ ನಾಂದಿ ಹಾಡಿದರು. ಮೈಸೂರು ವಿವಿ ಸ್ಥಾಪಿಸಿದರು. ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸಿದರು. ಇದಿಷ್ಟೇ ಅಲ್ಲದೆ, ಸಾಲು ಸಾಲು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು ಎಂದು ಸ್ಮರಿಸಿದರು.

ಸರ್ಕಾರವೇ ಚಳವಳಿಗಳನ್ನು ಹತ್ತಿಕ್ಕುತ್ತಿದೆ: ಹೆಚ್.ವಿಶ್ವನಾಥ್ ವಿಷಾದ

ರಾಜಕೀಯದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಸಾಹಿತ್ಯ ರಚನೆಗೆ ಮನವಿ

ಮೈಸೂರು, ಫೆ.28(ಜಿಎ)–ಕನ್ನಡ ಚಳವಳಿ, ರೈತ ಚಳವಳಿ, ದಲಿತ ಚಳವಳಿ ಸೇರಿದಂತೆ ನಾನಾ ಚಳವಳಿಗಳು ಸರಕಾರವನ್ನು ಎಚ್ಚರಿಸುವ ಮೂಲಕ ಪ್ರಜಾಪ್ರಭುತ್ವ ಯಶಸ್ವಿಗೊಳಿಸುತ್ತವೆ. ಆದರೆ, ಇತ್ತೀಚೆಗೆ ಸರಕಾರವೇ ಚಳವಳಿಗಳನ್ನು ಹತ್ತಿಕ್ಕುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ನಗರದ ಮಹಾರಾಜ ಕಾಲೇಜಿನಲ್ಲಿ ಮಂಗಳವಾರ ನಡೆದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಸಾಧಕರಿಗೆ ಅಭಿನಂದನೆ ಹಾಗೂ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಚಳವಳಿಗಳನ್ನು ಸರ್ಕಾರವೇ ಸಾಯಿಸುತ್ತಿರುವುದರಿಂದ ಚಳವಳಿ, ಹೋರಾಟಗಾರರಿಲ್ಲದೇ ರಾಜ್ಯದಲ್ಲಿ ಶೂನ್ಯ ಆವರಿಸಿದ್ದು, ಹೀಗಾಗಿ ರಾಜಕೀಯ ವಿಷಯದ ಬಗ್ಗೆ ಜನರಲ್ಲಿ ಒಂದು ರೀತಿಯ ವಿರೋಧ ಭಾವವಿದೆ. ಜನತಂತ್ರ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ರಾಜಕೀಯ ಅತ್ಯಗತ್ಯ. ನಾವು ಯಾವುದೇ ಕೆಲಸ ಆಗಬೇಕಾದರೆ ಜನಪ್ರತಿನಿಧಿಗಳ ಬಳಿಯೇ ಹೋಗುತ್ತೇವೆ. ಹೀಗಾಗಿ ರಾಜಕಾರಣ ನಮ್ಮ ಬದುಕಿನೊಂದಿಗೆ ಹಾಸುಹೊಕ್ಕಾಗಿದೆ. ಹಾಗಾಗಿ ರಾಜಕೀಯದ ಬಗ್ಗೆ ಜನರಿಗೆ ನಿಜವಾದ ಅರಿವು ಮೂಡಿಸಲು ಸಾಹಿತ್ಯ ರಚನೆಯಾಗಬೇಕಿದೆ ಎಂದರು.

ಹಾವೇರಿಯಲ್ಲಿ ನಡೆದ ಮೂರು ದಿನದ ಸಾಹಿತ್ಯ ಸಮ್ಮೇಳನಕ್ಕೆ 25 ಕೋಟಿ ರೂ. ಖರ್ಚು ಮಾಡಿದ್ದಾರೆ. ಆದರೆ ಒಂದೆಡೆ 5700 ಕನ್ನಡ ಶಾಲೆ ಬಾಗಿಲು ಮುಚ್ಚಿವೆ. ಮತ್ತೊಂದೆಡೆ ರಾಜ್ಯದ 700 ಪ್ರೌಢಶಾಲೆಗಳಲ್ಲಿ ಶಿಕ್ಷಕರಿಲ್ಲ. ಮಕ್ಕಳಿಗೆ ಶೂ, ಬಟ್ಟೆ, ಪುಸ್ತಕ ಸಕಾಲಕ್ಕೆ ನೀಡಿಲ್ಲ ಎಂದು ಕೋರ್ಟ್ ಸರ್ಕಾರಕ್ಕೆ ಚಾಟಿ ಬೀಸಿದೆ. ಪ್ರಕಾಶಕರಿಗೆ ನೀಡಲಾಗುವ ಹಣ ತಲುಪುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಕೇವಲ ಹಣ ಖರ್ಚು ಮಾಡುವುದರಿಂದ ಕನ್ನಡ ಬೆಳವಣಿಗೆಯಾಗುವುದೇ ಎಂದು ಆಲೋಚಿಸಬೇಕಿದೆ ಎಂದು ತಿಳಿಸಿದರು.

ಮಹಾರಾಷ್ಟ್ರದಲ್ಲಿ ನಡೆಯುವ ಸಮ್ಮೇಳನಕ್ಕೆ ಅಲ್ಲಿನವರು ಸರ್ಕಾರದಿಂದ ಅನುದಾನ ಪಡೆಯುವುದಿಲ್ಲ. ಅಲ್ಲಿನ ಜನತೆಯೇ ಒಗ್ಗೂಡಿ ಹಣವನ್ನು ಹಾಕಿ ಸಮ್ಮೇಳನ ಮಾಡುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿಗಳು ಅಲ್ಲಿಗೆ ಹೋದರೆ, ಮೂರು ಕಾಸಿನ ಬೆಲೆ ನೀಡಲ್ಲ. ಅವರನ್ನು ವೇದಿಕೆ ಮೇಲೆ ಕೂರಿಸಲ್ಲ. ನಾವು ಇಷ್ಟು ಹಣ ಖರ್ಚು ಮಾಡುತ್ತೇವೆ. ಆದರೆ, ಏನು ಪ್ರಯೋಜನವಾಗುತ್ತಿಲ್ಲ. ಕೋಟಿ ಕೋಟಿ ರೂ. ಖರ್ಚು ಮಾಡುವ ಬದಲು ಎಲ್ಲರನ್ನು ಎಚ್ಚರಿಸುವ ಸಮ್ಮೇಳನಗಳನ್ನು ನಡೆಸಿ ಎಂದು ಸಲಹೆ ನೀಡಿದರು.

ನಂತರ ಮೈವಿವಿ ಪ್ರಭಾರ ಕುಲಪತಿ ಮುಜಾಫರ್ ಅಸ್ಸಾದಿ ಮಾತನಾಡಿ, ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡುವಾಗ ಪರಂಪರೆ, ಸಂಸ್ಕೃತಿ ಬಗ್ಗೆ ಹೇಳುತ್ತೇವೆ. ಆದರೆ, ಕರ್ನಾಟಕವು ಒಂದು ಭೌಗೋಳಿಕ ಘಟಕವಾಗಿದ್ದು, ಕನ್ನಡ ಮನಸ್ಸು ಕನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ತುಳು ಸೇರಿದಂತೆ ಹತ್ತು ಹಲವು ಭಾಷೆಗಳಿವೆ. ಅವು ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ರಾಜ್ಯಕ್ಕೆ ನೀಡಿವೆ ಎಂದರು.

ಕನ್ನಡದಲ್ಲಿ ಬಳಸುವ ಅನೇಕ ಶಬ್ದಗಳು ಉರ್ದು, ಪರ್ಶಿಯನ್, ಇಂಗ್ಲೀಷ್ ಸೇರಿದಂತೆ ಅನೇಕ ಭಾಷೆಗಳಿಂದ ಬಂದಿದೆ. ಇಂಗ್ಲೀಷ್ ಸಾಹಿತ್ಯವು ಕುವೆಂಪು, ಬಿ.ಎಂ.ಶ್ರೀ ಸೇರಿದಂತೆ ಕರ್ನಾಟಕದ ಅನೇಕ ಕವಿಗಳ ಮೇಲೆ ಪ್ರಭಾವ ಬೀರಿತು. ಹೀಗೆ ಸಾಹಿತ್ಯವು ನಿಂತ ನೀರಲ್ಲ. ಸಾಹಿತ್ಯದಲ್ಲಿ ಪ್ರತಿರೋಧ ಮತ್ತು ಒಗ್ಗೂಡಿಸುವ ಎರಡು ಶಕ್ತಿಗಳು ಅಡಗಿದ್ದು, ಕನ್ನಡದ ಮನಸ್ಸುಗಳು ಗಡಿ ಆಚೆಗೂ ಪರಿಚಯವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಡಾ. ಮಹೇಶ್ (ವೈದ್ಯಕೀಯ), ಶಾಂತರಾಜು (ಮಾಧ್ಯಮ), ಸಿದ್ದಸ್ವಾಮಿ(ಸಾಹಿತ್ಯ), ಕುಮಾರ್ ಹುಡ್ಕೊ(ಪರಿಸರ), ಸೋಮೇಗೌಡ, ಶಿಕ್ಷಣ ಕ್ಷೇತ್ರದಲ್ಲಿ ಡಾ.ಲಕ್ಷ್ಮಿ ದೇವಿ, ಡಾ.ಟಿ. ರಮೇಶ್, ಪ್ರೊ. ಬಿ.ಗುಂಡಣ್ಣ, ಡಾ. ಎಸ್.ಶಾಂತರಾಮ್, ಸಂಘಟನೆ ಕ್ಷೇತ್ರದಲ್ಲಿ ಎಸ್. ಪುಟ್ಟರಾಜಪ್ಪ, ಕವಿತಾಕಾಳೆ, ಜೆ.ಮಹದೇವಪ್ಪ, ಮಹಿಳಾ ಸಂಘಟನೆ ಕ್ಷೇತ್ರದಲ್ಲಿ ರಾಜೇಶ್ವರಿ, ಬಿ.ಎಸ್.ವನಜ, ಎಂ. ಸುನೀಲ್(ಸಮಾಜ ಸೇವೆ), ಎ.ಜಿ. ಸುವ್ರತೀಂದ್ರ(ಮುದ್ರಣ), ಮೈನಾ ಲೋಕೇಶ್(ಸಾಹಿತ್ಯ), ಅಜಯ್ ಶಾಸ್ತ್ರಿ (ಸಾಂಸ್ಕೃತಿಕ), ತೇಜಸ್ವಿ ನಾಗಲಿಂಗಸ್ವಾಮಿ (ಕನ್ನಡಪರ ಹೋರಾಟ), ಮಧು ಪ್ರಕಾಶ್(ರಂಗಭೂಮಿ), ರೇವಣ್ಣ (ಶಿಕ್ಷಣ ಮತ್ತು ಸಂಘಟನೆ), ರೇವಣ್ಣ (ಗಾಯನ), ಗಾಯತ್ರಿ ಪಾಂಡುಜೀ (ಸಮಾಜ ಸೇವೆ), ಕೊಟ್ರೇಶ್ ಬಾಬು(ಸಮಾಜ ಸೇವೆ), ಎಸ್. ಮಂಜುನಾಥಸ್ವಾಮಿ (ಸಮುದಾಯ ಸೇವೆ). ಸಮುದಾಯ ಸೇವೆ ವಿಭಾಗದಲ್ಲಿ ಚೆನ್ನೇಗೌಡ, ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಸಮ್ಮೇಳನ ಅಧ್ಯಕ್ಷ ಶಿವಲಿಂಗಯ್ಯ, ರಂಗಕರ್ಮಿ ರಾಜಶೇಖರ್ ಕದಂಬ, ಜಿಲ್ಲಾ ಸರಕಾರಿ ನೌಕರರ ಸಂಘದ ಉಪಾಧ್ಯಕ್ಷ ಮಾಲಂಗಿ ಸುರೇಶ್, ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಟರಾಜ್ ಜೋಯಿಸ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಈ.ಸಿ. ನಿಂಗರಾಜ್, ಪಾಲಿಕೆ ಸದಸ್ಯ ಮ.ವಿ. ರಾಮ್‌ಪ್ರಸಾದ್ ಉಪಸ್ಥಿತರಿದ್ದರು.





ನಕ್ಕರೆ ಅದೇ ಸ್ವರ್ಗ

ಗಂಡ: ನಂಗೆ ಲಾಟರಿ ಹೊಡೆದ್ರೆ ಏನ್ ಮಾಡ್ತೀಯ?
ಹೆಂಡತಿ: ಲಾಟರಿ ದುಡ್ಡಲ್ಲಿ ನಂಗೆ ಅರ್ಧ ಕೊಟ್ ಬಿಡ್ರಿ. ನಾನು ಪರ್ಮನೆಂಟ್ ಆಗಿ ಅಮ್ಮನ ಮನೆಗೆ ಹೋಗಿ ಇದ್ ಬಿಡ್ತೀನಿ.
ಗಂಡ: ಹೌದಾ! ನೂರು ರೂಪಾಯಿ ಲಾಟರಿ ಹೊಡೆದಿದೆ. 50 ರೂಪಾಯಿ ತಗೊಂಡು ನಿಮ್ಮಮ್ಮನ ಮನೆಗ್ ಹೋಗು.

ಮೈಸೂರು ಮಿತ್ರ
ಬುಧವಾರ, 1 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇಂದಿನ ನಿನ್ನ ಕರ್ತವ್ಯಗಳನ್ನು ಪೂರೈಸು. ಅಂದರೆ ನಾಳಿನ ಕರ್ತವ್ಯ ತಾನಾಗಿಯೇ ಗೋಚರಿಸುವುದು. – ಗಯಟೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಧಿಯಿದ್ದರೂ ನಿಧಾನವಿರಬೇಕು

ನಿಮ್ಮ ಪತ್ರಗಳು

ತಾತಯ್ಯನವರ ಅನಾಥಾಲಯದ ಮುಂದಿನ ಚರಂಡಿ ಸ್ವಚ್ಛಗೊಳಿಸಿ



ಸನ್ಮಾನ್ಯರೇ,

ತಮಗೆಲ್ಲಾ ಚೆನ್ನಾಗಿ ಗೊತ್ತಿರುವ ಹಾಗೇ ಸನ್ಮಾನ್ಯ ದಿವಂಗತ ವೆಂಕಟ ಕೃಷ್ಣಯ್ಯ (ವೃದ್ಧ ಪಿತಾಮಹ –ತಾತಯ್ಯ ಎಂದೇ ಪ್ರಸಿದ್ಧರಾಗಿದ್ದವರು) ಅವರು ಹಳೇ ರಾಜರ ಕಾಲದಲ್ಲೇ ಉತ್ತಮ ಶಿಕ್ಷಕರಾಗಿ, ಪತ್ರಕರ್ತರಾಗಿ, ಸಮಾಜ ಸೇವಕರಾಗಿ, ಸಮಾಜ ಸುಧಾರಣೆಗಾಗಿ, ದಾನ ಧರ್ಮಕ್ಕಾಗಿ ತಮ್ಮ ಇಡೀ ಜೀವಮಾನವನ್ನೇ ಮುಡಿಪಾಗಿಟ್ಟವರು. ಅವರು ಮೈಸೂರಿನ ಜನರ ಹಿತಕ್ಕಾಗಿ ಮಾಡಿದ ಅದ್ಭುತ ಸೇವೆಗಾಗಿ ಹಾಗೂ ಅನಾಥ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಗಾಗಿ ಕಟ್ಟಿಸಿದ ಅನಾಥಾಲಯದ ಗೌರವದ ಕುರುಹಾಗಿ ತಾತಯ್ಯನವರ ಪ್ರತಿಮೆಯನ್ನು ಸಿಟಿ ಬಸ್ ಸ್ಟಾಂಡ್ ಎದುರಿಗೆ ಸ್ಮಾರಕವಾಗಿ ತಾತಯ್ಯ ಪಾರ್ಕ್‌ನಲ್ಲಿ ನಿಲ್ಲಿಸಲಾಗಿದೆ.

ಆದರೆ ಅವರು ಫ್ರೀಡಂ ಫೈಟರ್ಸ್ ಪಾರ್ಕ್ ಎದುರಿಗೆ ಕಟ್ಟಿಸಿದ ಅನಾಥಾಲಯ (ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಹಾಸ್ಟೆಲ್) ಸುತ್ತಲಿನ ಚರಂಡಿಗಳು ಕೊಳಚೆ ನೀರು, ತ್ಯಾಜ್ಯ, ಕೊಚ್ಚೆಗಳಿಂದ ತಿಂಗಳುಗಟ್ಟಲೇ ತುಂಬಿದ್ದು ಹಾಸ್ಟೆಲ್ ವಿದ್ಯಾರ್ಥಿಗಳಿಗೆ, ಚರಂಡಿ ಪಕ್ಕದಲ್ಲೇ ಇರುವ ಕಚೇರಿಗಳಿಗೆ ಹಾಗೂ ಇದರ ಹತ್ತಿರದಲ್ಲೇ ವಾಸ ಮಾಡುವ ನಮ್ಮಂಥ ನಿವಾಸಿಗಳಿಗೆ ಅಸಹ್ಯ, ಅನಾರೋಗ್ಯಕರ ವಾತಾವರಣ ಸೃಷ್ಟಿಸಿದೆ. ಇದರ ಬಗ್ಗೆ ಸಂಬಂಧಪಟ್ಟ ಪಾಲಿಕೆ ಸದಸ್ಯರಿಗೆ ಬಹಳ ಹಿಂದೆಯೇ ದೂರು ನೀಡಿ ಚರಂಡಿಗಳನ್ನು ಕೂಡಲೇ ಸ್ವಚ್ಛಗೊಳಿಸಿ ಸೊಳ್ಳೆ ನಾಶಕ ಔಷಧಿಗಳನ್ನು ಸಿಂಪಡಿಸಿ ಎಂದು ಮನವಿ ಮಾಡಲಾಗಿತ್ತು. ಈ ಅನಾಥಾಲಯಕ್ಕೆ ಬಹಳ ಹತ್ತಿರದಲ್ಲೇ ಹಳೆಯ ಚಾಮುಂಡೇಶ್ವರಿ ಹೆರಿಗೆ ಆಸ್ಪತ್ರೆ ಕೂಡ ಇದೆ. ಅಲ್ಲಿರುವ ಬಾಣಂತಿ, ಹಸುಗೂಸುಗಳ ಆರೋಗ್ಯದ ಮೇಲೆ ಈ ಕೊಳೆತು ನಾರುತ್ತಿರುವ ಚರಂಡಿಗಳು ದುಷ್ಪರಿಣಾಮ ಬೀರುವುದಿಲ್ಲವೇ? ಮಳೆಗಾಲದಲ್ಲಿ ಮಳೆ ನೀರಿನ ಸಮೇತ, ಈ ಚರಂಡಿ ಒಳಗಿನ ಎಲ್ಲಾ ಬಗೆಯ ಕಟ್ಟಿಕೊಂಡ ತ್ಯಾಜ್ಯಗಳು ಸುತ್ತಲಿನ ನಾಲ್ಕೂ ರಸ್ತೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದು ರಸ್ತೆಗಳಲ್ಲಿ ಜನಗಳ, ವಾಹನ ಸಂಚಾರಕ್ಕೂ ಕಂಟಕವಾಗಿವೆ. ಇದು ನಮಗಿಂತಲೂ ಜಾಸ್ತಿ, ಧರ್ಮಧುರೀಣ ತಾತಯ್ಯನವರಿಗೆ ನಮ್ಮ ಜನಪ್ರತಿನಿಧಿಗಳು ತೋರಿಸುತ್ತಿರುವ ಅಗೌರವ, ಅಪಮಾನ, ತಿರಸ್ಕಾರದ ಧೋರಣೆಯಾಗಿದೆ. ಈ ಹಾಸ್ಟೆಲ್ ಬೇರೆ ಬೇರೆ ಜನಾಂಗಗಳ ಹಾಸ್ಟೆಲ್ ಆಗಿದ್ದರೆ, ನಾವ್ಯಾರೂ ದೂರು ಕೊಡದೇ ಇದ್ದರೂ, ಮುತುವರ್ಜಿ ವಹಿಸಿ ಕೂಡಲೇ ಚರಂಡಿಗಳನ್ನು ಸ್ವಚ್ಛ ಮಾಡಿಸಿ ಸಿಮೆಂಟ್ ಸ್ಲಾಬ್‌ಗಳಿಂದ ಮುಚ್ಚಿಸುತ್ತಿದ್ದರೇನೋ? ಮಹಾನಗರ ಪಾಲಿಕೆಯ ಉತ್ಸಾಹೀ, ಕಾರ್ಯಶೀಲ ಮೇಯರ್ ಅವರು ವೃದ್ಧ ಪಿತಾಮಹ, ಧರ್ಮಕಾರ್ಯ ಪ್ರವೀಣ, ಪೂಜ್ಯ ತಾತಯ್ಯ ಅವರ ಆತ್ಮಕ್ಕೆ ಗೌರವಕೊಟ್ಟು, ಅವರು ಕಟ್ಟಿಸಿದ ಈ ಹಾಸ್ಟೆಲ್ ಸುತ್ತಲಿನ ಚರಂಡಿಗಳನ್ನು ಸ್ವಚ್ಛಗೊಳಿಸಲು ಕಳಕಳಿಯ ಮನವಿ.

–ಪ್ರೊ. ಎಂ.ಎಸ್.ಎಸ್. ಶರ್ಮ, ಸಮಾಜ ಸೇವಕರು, ಮೈಸೂರು.

ಪಾಲಕರ ಪ್ರೀತಿ, ಆರೈಕೆಯೇ ಮಕ್ಕಳಿಗೆ ದಾರಿದೀಪ

ಮಾನ್ಯರೇ,

ಬಾಲ್ಯವು ಮಗುವಿಗೆ ಒಂದು ಸುಂದರಘಟ್ಟ, ಪೋಷಕರು ಮಗುವಿನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಪೋಷಣೆ ಹಾಗೂ ಕಾಳಜಿ ವಹಿಸುವುದು ಅತ್ಯಾವಶ್ಯಕ.

ಮಕ್ಕಳ ರೋಗ ನಿರೋಧಕ ವ್ಯವಸ್ಥೆಯನ್ನು ಬಲಪಡಿಸಬೇಕು. ಮಗುವಿನ ಆರೋಗ್ಯಕ್ಕೆ ದಿನಚರಿ ಬಹುಮುಖ್ಯವಾಗಿದೆ. ಅದರಲ್ಲಿ ನಿದ್ರೆಯ ದಿನಚರಿ, ನೈರ್ಮಲ್ಯ ಮತ್ತು ದೈಹಿಕ ಚಟುವಟಿಕೆ.

ಕಾರ್ಬೋಹೈಡ್ರೇಟ್, ಪ್ರೋಟೀನ್, ಕೊಬ್ಬು, ವಿಟಮಿನ್ ಮತ್ತು ಮಿನರಲ್ಸ್ ಒಳಗೊಂಡ ಎಲ್ಲಾ ಬಗೆಯ ಸೊಪ್ಪು ಮತ್ತು ಹಸಿ ತರಕಾರಿ, ಹಣ್ಣು, ಹಾಲು, ಮೊಟ್ಟೆ ಒಳಗೊಂಡ ಸಮತೋಲಿತ ಆಹಾರವನ್ನು ಮಗುವಿಗೆ ನೀಡಬೇಕು. ಮಕ್ಕಳ ಬೆಳವಣಿಗೆಗೆ ಪೌಷ್ಟಿಕ ಆಹಾರ ಅತ್ಯಗತ್ಯವಾಗಿರುತ್ತದೆ.

ಕರಿದ ಆಹಾರ ಪದಾರ್ಥಗಳು, ಬೇಕರಿಯ ತಿನಿಸುಗಳು, ಫ್ರಿಡ್ಜ್‌ನಲ್ಲಿ ಇಟ್ಟ ಆಹಾರ ಪದಾರ್ಥಗಳು ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ ಹಾಗೂ ಚಿಕ್ಕ ವಯಸ್ಸಿನಲ್ಲಿಯೇ ಬೊಜ್ಜು ಬರಲು ಪ್ರಾರಂಭಿಸುತ್ತದೆ.

ಉತ್ತಮ ಪ್ರೋಟಿನ್‌ಗಳನ್ನು ಒಳಗೊಂಡ ಮೊಳಕೆ ಕಾಳುಗಳು ಹಾಗೂ ನಟ್ಸ್‌ಗಳನ್ನು ಮಗುವಿಗೆ ನೀಡಬೇಕು. ತರಕಾರಿ, ಹಣ್ಣುಗಳಿಂದ ಸಲಾಡ್ ಮಾಡಿ ನೀಡುವುದರಿಂದ ಮಗುವಿನ ಮಾನಸಿಕ, ಬೌದ್ಧಿಕ, ದೈಹಿಕ, ವಿಕಾಸ ಸರಿಯಾಗಿ ಆಗಲು ಸಾಧ್ಯವಾಗುತ್ತದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಗಾದೆಯಂತೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಇಚ್ಛಾ ಬಲ, ಮನೋಬಲ ಹಾಗೂ ದೇಹ ಬಲ ಎಲ್ಲವೂ ಬೇಕು.

ಈಗಿನ ಮಕ್ಕಳು ಬಿಸ್ಕೆಟ್, ಚಾಕಲೇಟ್, ಕರಿದ ಪದಾರ್ಥಗಳನ್ನು ತಿನ್ನುವುದರಿಂದ ಊಟ ಮಾಡಲು ಹಿಂಜರಿಯುತ್ತಾರೆ. ಕೆಲವು ಚಿಕ್ಕ ಮಕ್ಕಳಿಗೆ ಊಟ ಮಾಡಿಸಬೇಕಾದರೆ ಮೊಬೈಲ್ ಕೊಡಲೇಬೇಕು. ಇಂತಹ ದುಶ್ಚಟಗಳಿಂದ ಮಕ್ಕಳನ್ನು ದೂರವಿರಿಸಿದರೆ ಒಳಿತು. ಮಕ್ಕಳ ಉಜ್ವಲ ಭವಿಷ್ಯ ಹಾಗೂ ಆರೋಗ್ಯಯುತ ಜೀವನಕ್ಕಾಗಿ ಪೋಷಕರ ಪಾತ್ರ ಅತಿ ಮುಖ್ಯವಾದದ್ದು.

–ಕೆಂಡಗಣ್ಣ ಸ್ವಾಮಿ, ಶಿಕ್ಷಕರು, ಬಿದರಹಳ್ಳಿಹುಂಡಿ

ಹುಚ್ಚು ಕುದುರೆ!

ಮಾನ್ಯರೆ,

ಬರುತಿದೆ, ಬರುತಿದೆ ಬಿರುಗಾಳಿಯ ತರ,
ಭರದಲಿ ಬರುತಿದೆ
ಚುನಾವಣೆಯ ಹುಚ್ಚು ಕುದುರೆ!
(ಹಿಡಿದೇರಲಿ ಕಸುವಿದ್ದವರೆ)
ಏನೇ ಬರಲಿ, ಏನೇ ಹೋಗಲಿ
ಬರಿದೋ ಬರಿದು ಶ್ರೀ/ಸ್ತ್ರೀ ಸಾಮಾನ್ಯರ
ಹಣೆ: ತಪ್ಪದ ಬವಣೆ!
(ಆಹಾ! ಚುನಾವಣೆ)

–ಸಿಪಿಕೆ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಜೀವನದಲ್ಲಿ ವಿನಯದ ಪಾತ್ರ

ಗರ್ವ ಮತ್ತು ವಿನಯ ಪರಸ್ಪರ ವಿರುದ್ಧವಾದ ಧರ್ಮಗಳು. ತನ್ನಲ್ಲಿ ಹಣವೋ ವಿದ್ಯೆಯೋ ಬಲವೋ ಕುಲವೋ ಇದೆಯೆಂದು ಅಹಂಕಾರವನ್ನು ಮೆರೆಸುವುದು ಗರ್ವ. ನನಗೆ ಸಮಾನರಿಲ್ಲ, ನನ್ನಿಂದಲೇ ಈ ಲೋಕ ನಡೆಯುತ್ತಿದೆ, ನನ್ನ ಪ್ರಭಾವ ಶಾಶ್ವತ ಎಂದು ಭಾವಿಸಿ ಬೀಗುವುದು, ಬಿಗುಮಾನ ತೋರಿಸುವುದು ಗರ್ವ. ವಸ್ತುತಃ ಗರ್ವಕ್ಕೆ ಕಾರಣವಿರುವುದಿಲ್ಲ. ಒಂದು ಹಳ್ಳಿಯಲ್ಲಿ ಒಬ್ಬನು ಹಣವಂತನೆಂದು ಪರಿಗಣಿಸಲ್ಪಟ್ಟಿರಬಹುದು. ಅವನು ನಗರಕ್ಕೆ ಬಂದು ನೋಡಿದರೆ ತನಗಿಂತ ಹತ್ತು ಪಟ್ಟು, ನೂರು ಪಟ್ಟು ಹೆಚ್ಚು ಹಣವುಳ್ಳವರಿರುತ್ತಾರೆ. ಪ್ರಪಂಚದಲ್ಲಿ ಲೆಕ್ಕ ಹಾಕಿದರೆ ಅವನಿಗಿಂತ ಸಾವಿರ ಪಟ್ಟು, ಲಕ್ಷ ಪಟ್ಟು ಹೆಚ್ಚು ಹಣವಿದ್ದ ವರೂ ಇರುತ್ತಾರೆ. ವಿದ್ಯೆಯಲ್ಲೂ ಅಷ್ಟೆ. ಜಗತ್ತಿನ ಮಹಾಮೇಧಾವಿಗಳನ್ನು ನೋಡಿದರೆ ತಾನು ವಿದ್ಯೆಯಲ್ಲಿ ಏನೋ ಸಾಧಿಸಿದ್ದೇನೆಂದು ಭಾವಿಸಿದವನ ಗರ್ವ ಜರ್ರನೆ ಜಾರಿ ಹೋಗುತ್ತದೆ. ರೂಪ, ಶರೀರದ ಬಲ ಎಲ್ಲರಲ್ಲೂ ತಾತ್ಕಾಲಿಕ. ಅನಿರೀಕ್ಷಿತ ರೋಗರುಜಿನಗಳು ಬಂದರೆ ವಿಶ್ವ ಸುಂದರಿ ಕುರೂಪಿಯಾಗುತ್ತಾಳೆ. ಜಗಜಟ್ಟಿ ಗಾಮ ನಡೆಯುವುದಕ್ಕೂ ಪರಾವಲಂಬಿ ಆಗುತ್ತಾನೆ ಎಂಬುದನ್ನು ಬದುಕಿನ ನಾನಾ ಹಂತಗಳಲ್ಲಿ ನೋಡುತ್ತಲೇ ಇದ್ದೇವೆ. ಅಧಿಕಾರ, ಪ್ರಭಾವ ಎಷ್ಟು ಅಶಾಶ್ವತ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅಧಿಕಾರದಲ್ಲಿದ್ದಾಗ ನೂರು ಜನ ಸುತ್ತಲೂ ಇರುತ್ತಾರೆ. ಕಾಲನ್ನು ಒತ್ತುತ್ತಾರೆ. ಅಧಿಕಾರ ಹೋದ ಮರುದಿನ ಜನರಿರಲಿ, ಬೀದಿಯ ನಾಯಿಯೂ ಆ ಅಧಿಕಾರಿಗೆ ಹೆದರುವುದಿಲ್ಲ. ನೆನ್ನೆ ಹಾಗೆ ಮೆರೆದ, ಇವತ್ತು ನೋಡು ಹೇಗೆ ಹೀನಾಯಕ್ಕೆ ಒಳಗಾಗಿದ್ದಾನೆ ಎಂದು ಎಲ್ಲರೂ ತಿರಸ್ಕರಿಸುತ್ತಾರೆ.

ತನ್ನ ಹೆಚ್ಚುಗಾರಿಕೆಯನ್ನು ಮೆರೆಸದೆ ನಮ್ರತೆಯಿಂದ ನಡೆದುಕೊಳ್ಳುವುದು ವಿನಯ. ಗರ್ವ ಪಡುವವನ್ನು ಕಂಡು ಯಾರೂ ಇಷ್ಟ ಪಡುವುದಿಲ್ಲ. ವಿನಯವಂತನನ್ನು ನೋಡಿ ಲೋಕವು ಇಷ್ಟಪಡುವುದಷ್ಟೇ ಅಲ್ಲ, ಗೌರವಿಸುತ್ತದೆ. ವಿದ್ಯೆಯ ಮುಖ್ಯ ಫಲವೇ ವಿನಯ. **ವಿದ್ಯಾ ದದಾತಿ ವಿನಯಂ** ಎಂಬ ಮಾತನ್ನು ಹಿರಿಯರು ಹೇಳಿರುವುದು ಈ ಕಾರಣದಿಂದ ಇಂದು ಇಡೀ ಪ್ರಪಂಚವು ಬಸವಣ್ಣನವರನ್ನು ವಿಶ್ವಗುರು ಎಂದು ಗೌರವಿಸುವುದೇಕೆ? ಎನಗಿಂತ ಕಿರಿಯರಿಲ್ಲ ಎಂಬ ಭಾವನೆ ಅವರಲ್ಲಿತ್ತು. ಅದರಿಂದಲೇ ಅವರು ದೊಡ್ಡವರಾದರು.

ಮುದ್ದುರಾಮನ ಬದುಕು–ಬೆಳಕು ಎಂಬ ಮುಕ್ತಕ ಸಂಗ್ರಹದಲ್ಲಿ ಕೆ.ಸಿ. ಶಿವಪ್ಪನವರು ವಿನಯದ ಶ್ರೇಷ್ಠತೆಯನ್ನು ಹೃದಯಂಗಮ ಶೈಲಿಯಲ್ಲಿ ಹೇಳಿದ್ದಾರೆ–

ಉನ್ಮತ್ತನಾಗದಿರು ಸಿರಿಯೊಲಿದ ಸಮಯದಲಿ
ಹುಚ್ಚನಂತಾಡದಿರು ಏರಿ ಅಂಬಾರಿ
ಕಣಜ ತುಂಬಿದೆಯೆಂದು ಬೀಗಿ
ಮೆರೆದಾಡದಿರು
ಸುಗ್ಗಿಯೆಂದರೆ ವಿನಯ–ಮುದ್ದುರಾಮ

ಇಲ್ಲಿರುವ ಒಂದೊಂದು ಸಾಲೂ ಅರ್ಥವತ್ತಾಗಿದೆ. ಸಿರಿಯೊಲಿದ ಕಾಲದಲ್ಲಿ ಉನ್ಮತ್ತರಾಗುವವರು ಬಹುಮಂದಿ. ನಾನೇ ಸರ್ವಜ್ಞ, ಇತರರೆಲ್ಲ ಮೂರ್ಖರು, ಏನನ್ನೂ ತಿಳಿಯದವರು ಎಂಬ ಭ್ರಾಂತಿ ಐಶ್ವರ್ಯವಂತನಿಗೆ ಆವರಿಸುತ್ತದೆ. ಅನೇಕರು ಸ್ವಾರ್ಥಿಗಳು ಹೊಗಳಿ ಹೊಗಳಿ ಸಿರಿವಂತನನ್ನು ಅಟ್ಟಕ್ಕೇರಿಸುತ್ತಾರೆ. ಅವರ ಮಾತೆಲ್ಲ ಸತ್ಯವೆಂದು ನಂಬುತ್ತಾನೆ. ಆ ಸಿರಿವಂತ. ತನ್ನ ನಿಜಸ್ಥಿತಿಯನ್ನು ಮರೆತು ತಾನು ಅಸಾಮಾನ್ಯ, ತನ್ನ ಬುದ್ಧಿ ಅಸಾಧಾರಣ ಎಂದುಕೊಂಡು ಅವನು ಅಂಬಾರಿಯನ್ನು ಏರಿ ಓಡಾಡಲು ಆರಂಭಿಸಿ ಹುಚ್ಚನಾಗುತ್ತಾನೆ. ವಿವೇಕಿಯಾದವನು ಹೀಗಾಗಬಾರದೆಂಬುದು ಕವಿಯ ಆಶಯ. ನನ್ನ ಮನೆಯ ಕಣಜ ಧಾನ್ಯಗಳಿಂದ ತುಂಬಿದೆ ಎಂದು ಬೀಗಿ ಮೆರೆದಾಡಬೇಡ ಎಂದು ಕವಿ ಎಚ್ಚರಿಸಿದ್ದಾನೆ. ಸುಗ್ಗಿಯ ಕಾಲದಲ್ಲಿ ಮಿತಿ ಮೀರಿ ಹಿಗ್ಗಿ ಮೆರೆದಾಡಿದರೆ ಮುಂದೆ ಕುಗ್ಗಿ ಕೊರಗಬೇಕಾದೀತು. ಆದ್ದರಿಂದ ಸುಗ್ಗಿಯಿಂದ ಕಣಜ ತುಂಬಿದ್ದಾಗಲೂ ವಿನಯವನ್ನು ರಕ್ಷಿಸಿಕೊಂಡರೆ ಮುಂದೆ ಹುಗ್ಗಿ ಇಲ್ಲದೆ ಉಪವಾಸ ಬೀಳುವುದು ತಪ್ಪುತ್ತದೆ ಎಂಬುದು ತಾತ್ಪರ್ಯ.

ನಿಜವಾದ ವಿನಯವೂ ತೋರಿಕೆಯ ಶಿಷ್ಟಾಚಾರವೂ ಬೇರೆ ಬೇರೆ. ಅನೇಕರು ಮನಸ್ಸಿನಲ್ಲಿ ಗರ್ವವನ್ನು ತುಂಬಿಕೊಂಡು ಕೃತಕ ವಿನಯವನ್ನು ಪ್ರದರ್ಶಿಸುತ್ತಾ ನಡೆದಾಡುತ್ತಾರೆ. ಇವರು ನಟನಾಪ್ರವೀಣರು. ನಾಟಕದಲ್ಲಿ ಮಂತ್ರಿಯ ಪಾತ್ರವನ್ನು ಧರಿಸಿದ ನಟನು ರಾಜನ ಪಾತ್ರದಲ್ಲಿರುವ ನಟನಿಗೆ ವಿನಯವನ್ನು ತೋರಿಸಿ ನಟಿಸುವಂತೆ ಇವರೂ ನಟಿಸುತ್ತಾರೆ. ಈ ಶಿಷ್ಟಾಚಾರದ ಕೃತ್ರಿಮ ವಿನಯ ಎಷ್ಟು ಟೊಳ್ಳು ಎಂಬುವುದು ಎಲ್ಲರಿಗೂ ತಿಳಿದಿರುತ್ತದೆ. ನಿಜವಾದ ವಿನಯ ಮತ್ತು ಕೃತ್ರಿಮ ವಿನಯದ ಅಂತರವನ್ನು ಮುದ್ದುರಾಮ ಸೂಕ್ಷ್ಮವಾಗಿ ಒಂದು ಪದ್ಯದಲ್ಲಿ ಸೂಚಿಸಿದ್ದಾನೆ–

ವಿನಯ ಬಾಳಿನಲೆಂದು ಗಾಳಿ
ಪಾಲಾಗುವುದೊ
ಸಜ್ಜನಿಕೆ ಅಂದಿರದೆ ಈ ಜೀವ ಬರಡು.
ಇರಲಿ ಶಿಷ್ಟಾಚಾರ ಸದ್ಭಾವ ಪಸರಿಕೆಗೆ
ವಿನಯ ಸಂಪನ್ನತೆಯೊ ಮುದ್ದುರಾಮ

ಬಾಳಿನಲ್ಲಿ ವಿನಯ ಎಂದು ಗಾಳಿ ಪಾಲಾಗುವುದೋ ಎಂದರೆ ಇಲ್ಲವಾಗಿ ಅದೃಶ್ಯವಾಗುವುದೋ ಆಗ ಸಜ್ಜನಿಕೆ ಇರುವುದಿಲ್ಲ. ಸಜ್ಜನಿಕೆ ಮತ್ತು ವಿನಯಗಳದು ಅವಿನಾಭಾವ ಸಂಬಂಧ. ಒಂದಿಲ್ಲದಿದ್ದರೆ ಇನ್ನೊಂದೂ ಇರುವುದಿಲ್ಲ. ದುರ್ಯೋಧನನಲ್ಲಿ ವಿನಯವೂ ಇರಲಿಲ್ಲ, ಸಜ್ಜನಿಕೆಯೂ ಇರಲಿಲ್ಲ. ಸದಾ ಗರ್ವದಿಂದಲೇ ಅವನು ನಡೆದುಕೊಂಡ. ಭೀಷ್ಮ, ದ್ರೋಣ ಮುಂತಾದ ಹಿರಿಯರಿಗಾಗಲಿ ಗುರುಗಳಿಗಾಗಲಿ ಅವನು ಗೌರವವನ್ನು ತೋರಿಸಲಿಲ್ಲ. ಸಾಕ್ಷಾತ್ ಶ್ರೀ ಕೃಷ್ಣನು ಬಂದಾಗಲೂ ವಿನಯದಿಂದ ನಡೆದುಕೊಳ್ಳಲಿಲ್ಲ. ಆದ್ದರಿಂದಲೇ ಅವನ ಜೀವ ಬರಡಾಯಿತು. ಕೇವಲ ಸದ್ಭಾವನೆಯ ಪಸರಿಕೆಗಾಗಿ ಶಿಷ್ಟಾಚಾರ. ಅಯೋಗ್ಯರಿಗೂ ಅನರ್ಹರಿಗೂ ಶಿಷ್ಟಾಚಾರಕ್ಕಾಗಿ ಗೌರವವನ್ನು ತೋರಿಸುವ ಪ್ರಸಂಗಗಳಿರುತ್ತವೆ. ಆದರೆ ನಿಜವಾದ ವಿನಯ ಸಂಪನ್ನತೆಯ ಲಕ್ಷಣ. ಅದರಲ್ಲಿ ತೋರಿಕೆ ಅಥವಾ ಪ್ರದರ್ಶನ ಮುಖ್ಯವಲ್ಲ. ಕೆಲವರು ಸಭೆಯಲ್ಲಿ, ಕ್ಯಾಮೆರಾ ಎದುರು ತಲೆ ಬಗ್ಗಿಸಿ ಕೈಜೋಡಿಸಿ ಹಲ್ಲು ಕಿರಿದು ವಿನಯವನ್ನು ತೋರಿಸುತ್ತಾರೆ. ಅದು ವಿನಯ ಸಂಪನ್ನತೆ ಅಲ್ಲ. ತಂದೆ ತಾಯಿಯರು ಹೇಳಿದ ಮಾತಿಗೆ ವಿರುದ್ಧವಾಗಿ ನಡೆದು ಫೋಟೋಗಾಗಿ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದರೆ ಅದು ವಿನಯವಲ್ಲ.

ನಿಜವಾದ, ಸತ್ಯವಾದ ವಿನಯ ಏಳ್ಗೆಗೆ ಏಣಿ, ವಿನಯವೇ ಉನ್ನತಿಗೆ ಕಾರಣ. ಇದರ ಅಂತಸತ್ತ್ವವನ್ನು ಮುದ್ದುರಾಮ ಇನ್ನೊಂದು ಪದ್ಯದಲ್ಲಿ ತಿಳಿಸಿದ್ದಾನೆ–

ಬೀಗಿದರೆ ಅದೆ ಬೇಗೆ, ಬಾಗಿದರೆ ಅದೆ ಭಾಗ್ಯ
ಅಹಮಿಕೆಯ ಮರೆತರಿದೆ ಸಾರಸರ್ವಸ್ವ
ಇರುವಿಕೆಗೆ ಲವಲವಿಕೆ ವರ್ತನೆಯ ಬಲದಿಂದ
ವಿನಯ ಗೆಲುವಿನ ಸೂತ್ರ–ಮುದ್ದುರಾಮ

ಬೀಗುವುದು, ತಾನೇ ಮೇಲು, ಇತರರು ಕೀಳು ಎಂಬ ಭಾವನೆಯನ್ನು ವಾಚ್ಯವಾಗಿ ಅಥವಾ ಸೂಚ್ಯವಾಗಿ ಪ್ರಕಟಿಸುವುದು ಬೇಗೆಗೆ, ಬೇಸರಕ್ಕೆ, ವೈರಕ್ಕೆ, ವಿರಸತೆಗೆ, ದ್ವೇಷಕ್ಕೆ ಕಾರಣ. ಬಾಗಿದರೆ, ಎಂದರೆ ನಮ್ರತೆಯಿಂದ ನಡೆದುಕೊಂಡರೆ, ಎಲ್ಲರೊಡನೆ ಸ್ನೇಹ, ವಿಶ್ವಾಸ. ಅದು ಭಾಗ್ಯದ ಕಾರಣ. ಜನರ ವಿಶ್ವಾಸದಿಂದಲೇ ಸುಖ ಶಾಂತಿ ಸಮೃದ್ಧಿಗಳು. ಅಹಮಿಕೆ ಎಂದರೆ ಅಹಂಕಾರ, ತಾನೇ ಎಲ್ಲ ಇತರರಿಗಿಂತ ಶ್ರೇಷ್ಠ ಎಂಬ ಗರ್ವ. ಅದು ಹೆಚ್ಚಾದಾಗ ದರ್ಪ, ಅದರಿಂದ ಸರ್ವನಾಶ. ಅಹಮಿಕೆಯನ್ನು ಮರೆತರೆ ಸಾರ ಸರ್ವಸ್ವವೂ ಇದೆ. ಲೋಕದಲ್ಲಿ ಇರಬೇಕು. ಆ ಇರುವಿಕೆಗೆ ಲವಲವಿಕೆ ತುಂಬಬೇಕಾದರೆ ಅದು ಅಹಮಿಕೆಯಿಲ್ಲದ, ನಮ್ರತೆಯಿಂದ ಕೂಡಿದ ವರ್ತನೆಯಿಂದ ಮಾತ್ರ. ಅಂತಹ ವರ್ತನೆಯನ್ನೇ ವಿನಯ ಎನ್ನುವುದು. ಈ ವಿನಯವೇ ಗೆಲುವನ್ನು ತರುವುದು. ಆದ್ದರಿಂದ ವಿನಯವೇ ವಿಜಯದ ಕಾರಣ ಎಂಬುದು ಮುದ್ದುರಾಮನು ಕಲಿಸಿಕೊಡುವ ಜೀವನಸೂತ್ರ. ಅವಿನೀತನು ತಂದೆತಾಯಿಗಳಿಗೂ ಅನಿಷ್ಟನಾಗುತ್ತಾನೆ, ಬಂಧುಗಳಿಗೂ ಅಪ್ರಿಯನಾಗುತ್ತಾನೆ. ಹಾಗಿರುವಾಗ ಇತರರು ಅವನನ್ನು ಇಷ್ಟಪಡುವುದೆಲ್ಲಿಂದ ಬಂತು? ಎಲ್ಲರಿಗೂ ಅವನು ದ್ವಿಷ್ಟ (ದ್ವೇಷಪಾತ್ರ)ನೇ ಆಗುತ್ತಾನೆ. ಆದ್ದರಿಂದ ಅವನಿಗೆ ಬದುಕಿನಲ್ಲಿ ಗೆಲುವು ಇಲ್ಲ. ವಿನಯವೇ ಗೆಲುವಿನ ಸೂತ್ರ.

ಕೆಲವರಿಗೆ ತಾವು ಎಲ್ಲರಿಗೂ ಕಾಣಿಸಿಕೊಳ್ಳಬೇಕೆಂಬ ಹಂಬಲ. ಯಾವ ಸಭೆಯಾದರೂ ಸರಿ, ತಾವು ವೇದಿಕೆಯ ಮೇಲೆ ಕುಳಿತು ಎಲ್ಲರನ್ನೂ ಆಶೀರ್ವದಿಸುವ, ಅನುಗ್ರಹಿಸುವ ಪರಿಯಲ್ಲಿ ಮೆರೆಯಬೇಕು ಎಂದು ಅವರ ಅಪೇಕ್ಷೆ. ಸಾಮಾನ್ಯರೊಡನೆ ಕುಳಿತು ಕಾರ್ಯಕ್ರಮವನ್ನು ನೋಡುವುದೆಂದರೆ ಅವರಿಗಾಗದು. ಮಾನ್ಯರೊಡನೆ ಕುಳಿತು ಮಾನ್ಯತೆ ಪಡೆಯಬೇಕೆಂಬ ಆಕಾಂಕ್ಷೆ. ಆದರೆ ವೇದಿಕೆಯ ಮೇಲೆ ಎಷ್ಟು ಆಸನಗಳಿರುವುದು ಸಾಧ್ಯ? ಹೋಗಲಿ. ಶ್ರೋತೃಗಳಲ್ಲಿ ಮೊದಲನೆಯ ಸಾಲಿನಲ್ಲಾದರೂ ಕುಳಿತು ಅತಿಮುಖ್ಯ ವ್ಯಕ್ತಿ (ವಿಐಪಿ) ಎಂದಾದರೂ ಎನಿಸಿಕೊಳ್ಳಬೇಕಲ್ಲ? ಅದಕ್ಕಾಗಿ ಪ್ರಯತ್ನ. ಅಂತಹವರಿಗೆ ವಿನಯದ ಪರಿಚಯವೇ ಇರುವುದಿಲ್ಲ. ಅವರನ್ನು ಕುರಿತು ಕವಿ ಕೆ.ಸಿ. ಶಿವಪ್ಪನವರು ಹೀಗೆಂದಿದ್ದಾರೆ–

ಮುಂದಿರುವ ಸಾಲಿನಲಿ ಆಸೀನ ಸೀಮಿತವೊ!
ಎದ್ದೆದ್ದು ಓಡೋಡಿ ಕೂರದಿರು ಅಲ್ಲಿ.
ಕುಳಿತ ಮೇಲೇಳುವುದು ಇನ್ನಷ್ಟು ಅವಮಾನ
ವಿನಯ ಮನದಲ್ಲಿರಲಿ ಮುದ್ದುರಾಮ.

ಇವರು ಮುಂದಿನ ಸಾಲಿನಲ್ಲಿ ಕುಳಿತಿರುತ್ತಾರೆ. ಮಂತ್ರಿಗಳೋ ಮುಖ್ಯ ಅತಿಥಿಗಳೋ ಕೊನೆಯ ಘಳಿಗೆಯಲ್ಲಿ ಬರುತ್ತಾರೆ. ಅವರ ಜೊತೆಯಲ್ಲಿ ಅವರ ಮನೆಯವರು, ಮಿತ್ರರು, ಉನ್ನತಾಧಿಕಾರಿಗಳು ಬಂದಿರುತ್ತಾರೆ. ಅವರಿಗೆ ಮೊದಲನೆಯ ಸಾಲಿನಲ್ಲಿ ಜಾಗ ಕೊಡಲೇಬೇಕು. ಆಗ ವ್ಯವಸ್ಥಾಪಕರು ಬಂದು 'ಇವರನ್ನು' "ದಯೆಯಿಟ್ಟು ಹಿಂದೆ ಖಾಲಿ ಇರುವ ಆಸನದಲ್ಲಿ ಕುಳಿತುಕೊಳ್ಳಿ. ಮುಖ್ಯ ವ್ಯಕ್ತಿಗಳಿಗೆ ಸ್ಥಳವನ್ನು ಬಿಟ್ಟುಕೊಡಿ" ಎಂದು ಹೇಳಿ ಎಬ್ಬಿಸುತ್ತಾರೆ. ವಿಧಿ ಇಲ್ಲದೆ ಎದ್ದು ಹಿಂದೆ ಹೋಗಿ ಯಾವುದೋ ಸ್ಥಳದಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಹತ್ತಾರು ಜನರು ಇವರನ್ನೇ ನೋಡುತ್ತಿರುತ್ತಾರೆ. ಇದಕ್ಕಿನ್ನ ಅವಮಾನ ಬೇಕೆ? ಮನದಲ್ಲಿ ವಿನಯವಿದ್ದರೆ ಮುಂದಿನ ಸಾಲಿನ ಮೋಹವನ್ನು ಬಿಟ್ಟು ಬೇರೆ ಎಲ್ಲಾದರೂ ಕುಳಿತಿರಬಹುದು. ಮುಂದಿನ ಸಾಲಿನಲ್ಲಿ ಕುಳಿತು, ಸ್ವಾಗತ ಭಾಷಣ ಮಾಡುವವರಿಗೆ ಕಾಣಿಸಿಕೊಂಡು ತಮ್ಮ ಹೆಸರೂ ಅವರ ಭಾಷಣದಲ್ಲಿ ಸೇರಿ ಕೊಳ್ಳುವಂತೆ ಮಾಡಬೇಕು ಎಂಬ ಚಪಲತೆ ಏಕೆ ಎಂದು ಮಾರ್ಮಿಕವಾಗಿ ಎಚ್ಚರಿಸಿದ್ದಾನೆ ಮುದ್ದುರಾಮ.

ಮುದ್ದುರಾಮನ ಪದ್ಯಗಳು ಜೀವನಾನುಭವದಿಂದ ತುಂಬಿವೆ. ಅಲ್ಲಿ ಕಲಿಯಬೇಕಾದುದು ಸಾಕಷ್ಟಿದೆ.

ಬದುಕಿನನುಭವವನ್ನು ತುಂಬಿಕೊಟ್ಟಿಹೆ ನೀನು
ಮುದವ ಕೊಡುವಾಗಲೇ ಬುದ್ಧಿ ಪೇಳ್ವೆ.
ಸದಮಲಾತ್ಮನೆ ನಿನ್ನ ನುಡಿಮುತ್ತುಗಳ ಕೇಳಿ
ಹೃದಯ ನಲಿಯುತ್ತಿದೆಯಾ ಮುದ್ದುರಾಮ.

ಮೈಸೂರು ಪಾಲಿಕೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ಹಿಡಿಯುವ ಸಂಬಂಧ ಜೆಡಿಎಸ್ ಸಭೆ



ಜಿ.ಟಿ.ದೇವೇಗೌಡ, ಸಾರಾ ನೇತೃತ್ವದಲ್ಲಿ ಪಾಲಿಕೆ ಸದಸ್ಯರ ಚರ್ಚೆ


ಮೈಸೂರು, ಫೆ.28(ಎಂಕೆ)– ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ನಗರಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷ ಸ್ಥಾನ ಪಡೆಯುವ ಸಂಬಂಧ ಜೆಡಿಎಸ್‌ನ ಪಾಲಿಕೆ ಸದಸ್ಯರೊಂದಿಗೆ ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ಸಾ.ರಾ.ಮಹೇಶ್ ಮಂಗಳವಾರ ಸಭೆ ನಡೆಸಿದರು.

ನಗರ ಪಾಲಿಕೆಯ ಹಣಕಾಸು, ಆರೋಗ್ಯ, ಲೆಕ್ಕಪರಿಶೋಧನೆ ಹಾಗೂ ಪಟ್ಟಣ ಮತ್ತು ಯೋಜನೆ (ವರ್ಕ್ ಕಮಿಟಿ) ಸ್ಥಾಯಿ ಸಮಿತಿಗಳಿಗೆ ಜೆಡಿಎಸ್ ಸದಸ್ಯರೇ ಅಧ್ಯಕ್ಷರಾಗಬೇಕು. ಇದಕ್ಕೆ ಬಿಜೆಪಿ ಬೆಂಬಲವನ್ನು ಕೋರುವುದು ಹಾಗೂ ಸದ್ಯದಲ್ಲಿಯೇ ಸ್ಥಾಯಿ ಸಮಿತಿ ಚುನಾವಣೆ ನಡೆಸುವಂತೆ ಮೇಯರ್‌ಗೆ ಮನವಿ ಮಾಡಿರುವ ಬಗ್ಗೆ ಚರ್ಚಿಸಲಾಯಿತು.

ಈ ವೇಳೆ ಯಾರ್‍ಯಾರಿಗೆ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನೀಡಬೇಕು ಎಂಬದರ ಕುರಿತು ಪಾಲಿಕೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಲಾಯಿತು. ಸಭೆಯಲ್ಲಿ ಮಾಜಿ ಮೇಯರ್ ಲಿಂಗಪ್ಪ, ಜೆಡಿಎಸ್ ನಗರ ಪಾಲಿಕೆ ಸದಸ್ಯರು, ಮಾಜಿ ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

ಧರ್ಮ, ಜಾತಿ ಪ್ರಜಾಪ್ರಭುತ್ವಕ್ಕೆ ಮಾರಕ

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಆತಂಕ



ಮೈಸೂರು, ಫೆ.28(ಎಂಕೆ)– ಧರ್ಮ ಮತ್ತು ಜಾತಿಯೆಂಬುದು ಪ್ರಜಾಪ್ರಭುತ್ವ, ಜನಪರ ನಾಯಕತ್ವ ಹಾಗೂ ಅಭಿವೃದ್ಧಿಯನ್ನು ನಾಶ ಮಾಡುತ್ತದೆ ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಆತಂಕ ವ್ಯಕ್ತಪಡಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಟಿ.ನರಸೀಪುರ ವಿಧಾನಸಭಾ ಕ್ಷೇತ್ರದ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಹಾಗೂ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕಾರ್ಡ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನಪರವಾಗಿ ಕೆಲಸ ಮಾಡುವವರು ಸೋಲುವುದು, ಪ್ರಜಾಪ್ರಭುತ್ವ ನಾಶವಾಗುವುದು ಧರ್ಮ ಮತ್ತು ಜಾತಿಯೆಂಬುದು ತಲೆಗೆ ಹೊಕ್ಕಾಗ. ಆದ್ದರಿಂದ ಕಾಂಗ್ರೆಸ್ ಪಕ್ಷ ಎಲ್ಲಾ ಜಾತಿ–ಧರ್ಮದವರನ್ನು ಸಮಾನವಾಗಿ ಕಾಣುವ ಮೂಲಕ ದೇಶದಲ್ಲಿ ಅಧಿಕಾರ ನಡೆಸುತ್ತಾ ಬಂದಿದೆ ಎಂದರು.

2013ರಲ್ಲಿ ಜನತೆ ಆಶೀರ್ವಾದ ಮಾಡಿ ಅಧಿಕಾರಕ್ಕೆ ಬಂದು ಜನಪರ ಕಾರ್ಯಕ್ರಮಗಳನ್ನು ನೀಡಿಯೂ ಸೋತಿರುವುದರಲ್ಲಿ ನಮ್ಮೆಲ್ಲರ ವೈಫಲ್ಯತೆಗಳು ಇವೆ. ನೀಡಿದ ಜನಪ್ರಿಯ ಕಾರ್ಯಕ್ರಮಗಳನ್ನು ಅರ್ಥ ಮಾಡಿಸುವಲ್ಲಿ ನಾವುಗಳು ಹಿಂದೆಬಿದ್ದೆವು ಎನಿಸುತ್ತಿದೆ ಎಂದರಲ್ಲದೆ ಕಾರ್ಯಕರ್ತರು ಪಕ್ಷ ಹಾಗೂ ಮತದಾರರ ನಡುವೆ ಸಂಪರ್ಕದ ಕೊಂಡಿಯಾಗಿರಬೇಕು. ಮತದಾರರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಶಾಸಕ, ಸಂಸದರು ಅಥವಾ ಚುನಾವಣಾ ಆಕಾಂಕ್ಷಿಗಳು ತಮ್ಮನ್ನು ಮಾತನಾಡಿಸಲಿಲ್ಲ. ಸರಿಯಾಗಿ ಗಮನಿಸಿಕೊಂಡಿಲ್ಲ ಎಂಬ ಸಣ್ಣ ಕಾರಣಗಳಿಗೆ ಮುನಿಸಿಕೊಂಡರೆ ವಿರೋಧ ಪಕ್ಷಗಳಿಗೆ ನಾವೇ ಗೆಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಸದಾ ಒಗ್ಗಟ್ಟಾಗಿರಬೇಕು ಎಂದು ಕಿವಿಮಾತು ಹೇಳಿದರು.

ಸುಳ್ಳನ್ನು ಸತ್ಯವನ್ನಾಗಿಸುವ ಪ್ರಯತ್ನ: ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಸದಾ ಸುಳ್ಳು ಹೇಳುತ್ತಾ ಸುಳ್ಳನ್ನು ಸತ್ಯವನ್ನಾಗಿ ಮಾಡುವ ಪ್ರಯತ್ನ ಮಾಡುತ್ತಿದೆ. ಉದಾಹರಣೆಗೆ ಮೈಸೂರು–ಬೆಂಗಳೂರು ದಶಪಥ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಣೆಯಾಗಿದ್ದು ಯಾರ ಕಾಲದಲ್ಲಿ ಎಂಬುದನ್ನು ಮರೆತು ನಾವೇ ಮಾಡಿದ್ದು, ಎಲ್ಲಾ ಅಭಿವೃದ್ಧಿಯೂ ನಮ್ಮದೆ ಎಂದು ಸುಳ್ಳು ಹೇಳುತ್ತಿದ್ದಾರೆ. ಆದ್ದರಿಂದ ಬಿಜೆಪಿಯ ಸುಳ್ಳು ಮಾತುಗಳನ್ನು ಜನರಿಗೆ ಅರ್ಥ ಮಾಡಿಸುವುದು ಕಾಂಗ್ರೆಸ್ ಕಾರ್ಯಕರ್ತರ ಪ್ರಮುಖ ಜವಾಬ್ದಾರಿಯಾಗಿದೆ ಎಂದರು.

ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ಮುಖಂಡರಾದ ಸುನಿಲ್ ಬೋಸ್, ಡಾ.ಜ್ಞಾನಪ್ರಕಾಶ್, ಪ್ರೊ. ಶಿವ ಕುಮಾರ್, ಮಲಿಕ್, ಚೆಲುವರಾಜು, ಸಿದ್ದರಾಜು ಮತ್ತಿತರರಿದ್ದರು.

ಎಂ.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ಕೋರ್ಸ್ ಪ್ರವೇಶ ಪರೀಕ್ಷೆ ಅವಧಿ ವಿಸ್ತರಣೆ

ಮೈಸೂರು, ಫೆ.28– 2022–23ನೇ ಸಾಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಂ.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ PGCET ಬರೆಯದೆ ಇರುವ ಬಿಇ, ಮೆಕ್ಯಾನಿಕಲ್ ಅಭ್ಯರ್ಥಿಗಳಿಗೆ ಎಐಸಿಟಿಇ ಮತ್ತು ವಿ.ಟಿ.ಯು ಇಂದ ಅನುಮೋದನೆ ಪಡೆದ ಎರಡು ವರ್ಷ ಅವಧಿಯ ಎಂ.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ಕೋರ್ಸ್ ಪ್ರವೇಶ ಪರೀಕ್ಷೆಯನ್ನು ಮಾ.6 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಪ್ಲಾಟ್ ನಂ.93 ಮತ್ತು 94, ಬೆಳಗೊಳ ಕೈಗಾರಿಕಾ ಪ್ರದೇಶ, ಕೆ.ಆರ್.ಎಸ್ ರಸ್ತೆ, ಮೈಸೂರು–16. ದೂ.ಸಂ: 87621–40256, 9243989954, 9141630300 ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವಿಜ್ಞಾನ ಗ್ಯಾಲರಿ ಸದ್ಯದಲ್ಲೇ ಲೋಕಾರ್ಪಣೆ

ಬೆಂಗಳೂರು, ಫೆ.28(ಕೆಎಂಶಿ)– ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಸರ್ಕಾರ ಕೈಗೊಂಡಿರುವ 'ವಿಜ್ಞಾನ ಗ್ಯಾಲರಿ' ನಿರ್ಮಾಣ ಕಾರ್ಯ ಮುಗಿಯುವ ಹಂತಕ್ಕೆ ಬಂದಿದ್ದು ಇನ್ನು ಕೆಲವೇ ದಿನಗಳಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿಎನ್ ಅಶ್ವತ್ಥನಾರಾಯಣ ಮಂಗಳವಾರ ಹೇಳಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು ಮಲ್ಲೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಜ್ಞಾನದ ಬದುಕಿನ ಕುತೂಹಲ ಉತ್ತೇಜಿಸಲು ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳಿಗಾಗಿ 210 ಕೋಟಿ ರೂಪಾಯಿಗಳನ್ನು ಸರ್ಕಾರ ನೀಡಿದೆ. ಜೊತೆಗೆ, ರಾಜ್ಯದ 11 ಕಡೆ ವಿಜ್ಞಾನ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪದವಿ ಪೂರ್ವ ವಿಜ್ಞಾನ ಪ್ರತಿಭೆಗಳಿಗೆ ವಿದ್ಯಾರ್ಥಿ ವೇತನ ಕೊಡಲಾಗುತ್ತಿದೆ ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸಲು 'ಪ್ರಯೋಗ' ಸಂಸ್ಥೆ ಮೂಲಕ ನಾಗರಾಜ ಮತ್ತು ಅವರ ತಂಡವು ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿದರು. ಯಾವುದೇ ಸರ್ಕಾರಿ ಶಿಕ್ಷಣ ಸಂಸ್ಥೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಯವರು ವಿದ್ಯಾರ್ಥಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಲು ಬಯಸಿದರೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡಲಾಗುವುದು ಎಂದು ನಾರಾಯಣ ನುಡಿದರು.

ವಿಜ್ಞಾನಿ ಸರ್ ಸಿ.ವಿ. ರಾಮನ್ ಅವರು ರಾಮನ್ ಎಫೆಕ್ಟ್ ಆವಿಷ್ಕರಿಸಿದ್ದನ್ನು ಗೌರವಿಸಿ ವಿಜ್ಞಾನ ದಿನಾಚರಣೆ ಆಚರಿಸಲಾಗುತ್ತಿದೆ. ಶ್ರೇಷ್ಠ ವಿಜ್ಞಾನಿಯಾದ ನೊಬೆಲ್ ಪುರಸ್ಕೃತ ಸರ್ ಸಿ.ವಿ ರಾಮನ್‌ರವರು ಮಲ್ಲೇಶ್ವರದಲ್ಲೇ ಇದ್ದವರು. ವಿಜ್ಞಾನಕ್ಕೆ ಬದುಕನ್ನು ಅರ್ಪಿಸಿಕೊಂಡು ಸಮಾಜಕ್ಕೆ ಅವರು ನೀಡಿದ ಕೊಡುಗೆ ನಮಗೆಲ್ಲಾ ಯಾವತ್ತಿಗೂ ಪ್ರೇರಣೆಯಾಗಬೇಕು ಎಂದು ಆಶಿಸಿದರು. ಇದೇ ವೇಳೆ, ಮಲ್ಲೇಶ್ವರದ ಸರ್ಕಾರಿ ಶಾಲೆಯ ಮಕ್ಕಳು 'ಪುನೀತ್ ಉಪಗ್ರಹ ವಿನ್ಯಾಸ ಹಾಗೂ ಉಡಾವಣೆ' ಕಾರ್ಯಕ್ರಮದಲ್ಲಿ ತೊಡಗಿರುವುದರ ಬಗ್ಗೆ ಪ್ರಸ್ತಾಪಿಸಿದರು.

ಸ್ವಾಮಿ ವಿವೇಕಾನಂದರು, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜೆಆರ್‌ಡಿ ಟಾಟಾ ಅವರ ಒಳನೋಟದ ಫಲವಾಗಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಸ್ಥಾಪನೆಯಾದ ಭಾರತೀಯ ವಿಜ್ಞಾನ ಸಂಸ್ಥೆ ಈಗ ದೇಶದ ಅಗ್ರಮಾನ್ಯ ಸಂಸ್ಥೆಯಾಗಿದೆ. ಈ ಸಂಸ್ಥೆಯು ಬೆಂಗಳೂರು ವಿಜ್ಞಾನ, ತಂತ್ರಜ್ಞಾನ ಹಾಗೂ ಸ್ಟಾರ್ಟ್ ಅಪ್ ನಗರಿಯಾಗಿ ಬೆಳೆಯಲು ಹೆಚ್ಚಿನ ಕೊಡುಗೆ ನೀಡಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ ಬಸವರಾಜ್, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಅಯ್ಯಪ್ಪನ್, ವಿಜ್ಞಾನ ಕೌನ್ಸಿಲ್ ಕಾರ್ಯದರ್ಶಿ ಅಶೋಕ್, ಪ್ರಯೋಗ ಸಂಸ್ಥೆ ನಿರ್ದೇಶಕ ನಾಗಭೂಷಣ್, ಪ್ರಾಂಶುಪಾಲ ರತ್ನಾಕರ ಶೆಟ್ಟಿ, ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರತಿಮಾ ಮತ್ತಿತರರು ಇದ್ದರು.

ಮುಡಾ ಅದಾಲತ್‌ನಲ್ಲಿ 30ಕ್ಕೂ ಅಧಿಕ ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರ

ಹಲವು ಜ್ವಲಂತ ಸಮಸ್ಯೆಗಳಿಗೆ ಅಧ್ಯಕ್ಷರಿಂದ ಪರಿಹಾರದ ಭರವಸೆ

ಮೈಸೂರು, ಫೆ.28(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಅದಾಲತ್‌ನಲ್ಲಿ ಸಲ್ಲಿಕೆಯಾದ 46 ಅರ್ಜಿಗಳ ಪೈಕಿ ಸ್ಥಳದಲ್ಲಿಯೇ 30ಕ್ಕೂ ಹೆಚ್ಚು ಅರ್ಜಿಗಳಿಗೆ ಪರಿಹಾರ ಕಲ್ಪಿಸಲಾಯಿತು.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ನಡೆದ ಅದಾಲತ್‌ನಲ್ಲಿ ಭಾಗವಹಿಸಿದ್ದ ಅರ್ಜಿದಾರರಿಗೆ ಮೊದಲೇ ಟೋಕನ್ ನೀಡಿ ವ್ಯವಸ್ಥಿತವಾಗಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಾಯಿತು. ಕೆಲ ಬಡಾವಣೆಗಳ ನಿವಾಸಿಗಳು ಕುಡಿಯುವ ನೀರಿನ ವ್ಯವಸ್ಥೆ ಹಾಗೂ ರಸ್ತೆ–ಚರಂಡಿ ಅಭಿವೃದ್ಧಿ ಮಾಡುವಂತೆಯೂ ಮನವಿ ಮಾಡಿದರು.

ನಾಚನಹಳ್ಳಿಪಾಳ್ಯದ ರಾಮಯ್ಯ ಎಂಬುವರು ಸರ್ವೆ ನಂ 145ರಲ್ಲಿ ಮುಡಾಗೆ ಮೂರೂವರೆ ಎಕರೆ ಜಾಗ ನೀಡಲಾಗಿದೆ. ಆದರೆ ಇದುವರೆಗೂ ಪರಿಹಾರ ನೀಡಿಲ್ಲ. ಕೂಡಲೇ ಭೂ ಸ್ವಾಧೀನ ಪರಿಹಾರ ನೀಡುವಂತೆ ಮನವಿ ಮಾಡಿದರು. ಈರಪ್ಪನಕೊಪ್ಪಲು ಗ್ರಾಮದ ಚಾಮರಾಜ ಎಂಬುವರು ಬನ್ನೂರು ಮುಖ್ಯರಸ್ತೆಯಲ್ಲಿರುವ ವಸಂತನಗರ ಬಡಾವಣೆಯಲ್ಲಿ ನಿವೇಶನ ಸಂಖ್ಯೆ–1184ರ ಸ್ಥಳ ಗುರ್ತಿಸಿಕೊಂಡುವಂತೆ ಕೋರಿದರು. ಅಲ್ಲದೆ ಹಲವರು ತಮ್ಮ ಸಮಸ್ಯೆಗಳ ಕುರಿತು ಅರ್ಜಿ ಸಲ್ಲಿಸಿ ಸಮಸ್ಯೆ ಬಗೆಹರಿಸಿಕೊಂಡರು.

ಸ್ಥಳದಲ್ಲೇ 30ಕ್ಕೂ ಹೆಚ್ಚು ಅರ್ಜಿಗಳಿಗೆ ಪರಿಹಾರ: ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಮುಡಾ ಅದಾಲತ್‌ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಅದರಂತೆ ಮುಡಾ ಅಧಿಕಾರಿ, ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸಲ್ಲಿಕೆಯಾದ 46 ಅರ್ಜಿಗಳಲ್ಲಿ ಸುಮಾರು 30ಕ್ಕೂ ಹೆಚ್ಚು ಅರ್ಜಿದಾರರಿಗೆ ಸ್ಥಳದಲ್ಲಿಯೇ ಪರಿಹಾರ ನೀಡಲಾಗಿದೆ ಎಂದರು.

ತನಿಖೆಗೆ ಸೂಚನೆ: ಅದಾಲತ್ ವೇಳೆ ವಿಜಯ ನಗರ ನಿವಾಸಿಯೊಬ್ಬರು ತಮ್ಮ ನಿವೇಶನದ ಮೇಲೆ ಸಾಲ ಪಡೆಯಲು ಬ್ಯಾಂಕ್‌ನಲ್ಲಿ ಅರ್ಜಿ ಸಲ್ಲಿಸುವ ವೇಳೆ 'ಇಸಿ'ಯಲ್ಲಿ ಅನ್ಯ ವ್ಯಕ್ತಿಯ ಹೆಸರು ಇರುವುದು ಕಂಡು ಬಂದಿದೆ. ಈ ಕುರಿತು ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ. ಈ ಸಂಬಂಧ ಸಂಬಂಧಪಟ್ಟ ಠಾಣೆಯಲ್ಲಿ ದೂರು ದಾಖಲಿಸುವಂತೆ ಆಯುಕ್ತರಿಗೆ ಸೂಚಿಸಿದ್ದೇನೆ. ಮೂಲ ವಾರಸುದಾರರ ಜೊತೆಗೆ ತಮ್ಮ ಬೇರೆಯವರ ಹೆಸರು ಸೇರ್ಪಡೆಯಾಗಿದೆ. ಈ ಕುರಿತು ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆ ಮಾಡಲಾಗುವುದು ಎಂದು ತಿಳಿಸಿದರು.

ಮುಡಾ ಸದಸ್ಯರಾದ ಲಕ್ಷ್ಮಿದೇವಿ, ಎಸ್‌ಬಿಎಂ ಮಂಜು, ನವೀನ್‌ಕುಮಾರ್, ಮುಡಾ ಆಯುಕ್ತ ದಿನೇಶ್ ಕುಮಾರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಚನ್ನಕೇಶವ ಮತ್ತಿತರರು ಉಪಸ್ಥಿತರಿದ್ದರು.



ಮುಡಾದಲ್ಲಿ ಹಗಲು ದರೋಡೆ ದೂರು...

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾನೂನುಬಾಹಿರವಾಗಿ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ. ಕಮಿಷನ್ ಆಸೆಗಾಗಿ ಬೇಕಾಬಿಟ್ಟಿ ಲೆಕ್ಕ ತೋರಿಸಿ ಸಾರ್ವಜನಿಕರನ್ನು ವಂಚಿಸುತ್ತಿದ್ದಾರೆ ಎಂದು ನಿವೃತ್ತ ಮುಡಾ ಸಹಾಯಕ ನಿರ್ದೇಶಕ ಪಿ.ಎಸ್.ನಟರಾಜ್ ದೂರಿದರು.

ಅದಾಲತ್ ವೇಳೆ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಭೇಟಿ ಮಾಡಿದ ಅವರು, 2022–23ನೇ ಸಾಲಿನ ಮುಡಾ ಬಜೆಟ್‌ನಲ್ಲಿ ನಿರೀಕ್ಷಿತ ಅಂದಾಜು ಆದಾಯ 874.55 ಕೋಟಿ ರೂ.ಗಳು ಎಂದು ಹೇಳಲಾಗಿದೆ. ಆದರೆ 1976.42 ಕೋಟಿ ರೂ.ವೆಚ್ಚದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಆದಾಯ ಮಾಡುತ್ತೇವೆಂದು ಕಾನೂನು ಬಾಹಿರವಾಗಿ ಕಮಿಷನ್ ಆಸೆಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ–ಪುಟ್ಟ ಕಾಮಗಾರಿಗಳನ್ನು ಮಾಡಿಸಲಾಗುತ್ತಿದೆ. ಈ ಕುರಿತು ತನಿಖೆಯಾಗಬೇಕು. ಇಲ್ಲದಿದ್ದರೆ ನ್ಯಾಯಾಂಗ ತನಿಖೆಗೆ ಹೋರಾಡುವುದಾಗಿ ಎಚ್ಚರಿಸಿದರು. ಇದಕ್ಕೆ ಪ್ರತಿಕ್ರಿಯಿಸಿ, ಮುಡಾ ಅಧ್ಯಕ್ಷರು, ಮಾ.3ರ ನಂತರ ನಿಮ್ಮ ಜೊತೆ ಚರ್ಚಿಸಲಾಗುವುದು. ಆದಾಯ–ಖರ್ಚುಗಳ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿ ಸಮಾಧಾನ ಪಡಿಸಿದರು.

ಜಿ–20 ಸಭೆಯಲ್ಲಿ ಚೀನಾ ವಿದೇಶಾಂಗ ಸಚಿವ ಕಿನ್ ಗ್ಯಾಂಗ್ ಭಾಗಿ

ನವದೆಹಲಿ, ಫೆ.28– ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆಯಲಿರುವ ಜಿ–20 ವಿದೇಶಾಂಗ ಸಚಿವರ ಸಭೆಯಲ್ಲಿ ಚೀನಾ ವಿದೇಶಾಂಗ ಸಚಿವ ಕಿನ್ ಗ್ಯಾಂಗ್ ಭಾಗವಹಿಸಲಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್ ಈ ವಿಷಯ ದೃಢಪಡಿಸಿದ್ದಾರೆ. ಜಿ–20 ಜಾಗತಿಕ ಆರ್ಥಿಕತೆಯ ಪ್ರಮುಖ ಸವಾಲುಗಳ ಮೇಲೆ ಕೇಂದ್ರೀಕರಿಸಬೇಕು. ವಿದೇಶಾಂಗ ಸಚಿವರ ಸಭೆಯು ಬಹುಪಕ್ಷೀಯತೆಯ ಬಗ್ಗೆ ಸಕಾರಾತ್ಮಕ ಸಂಕೇತವನ್ನು ಕಳುಹಿಸುವುದನ್ನು ಖಚಿತಪಡಿಸಿಕೊಳ್ಳಲು ಚೀನಾ ಎಲ್ಲಾ ರಾಷ್ಟ್ರಗಳೊಂದಿಗೆ ಕೆಲಸ ಮಾಡಲು ಸಿದ್ಧವಾಗಿದೆ ಎಂದರು.

ಭಾರತದ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಮಾರ್ಚ್ 1–2 ರಂದು ಭೌತಿಕ ರೂಪದಲ್ಲಿ ಜಿ–20 ವಿದೇಶಾಂಗ ಸಚಿವರ ಸಭೆ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ, ಜಿ–20 ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರನ್ನು ಉದ್ದೇಶಿಸಿ ಮಾತನಾಡುವ ನಿರೀಕ್ಷೆಯಿದ್ದು, ಜಾಗತಿಕವಾಗಿ ಬೆಳೆಯುತ್ತಿರುವ ಭಾರತದ ಪ್ರಭಾವದ ಬಗ್ಗೆ ಮಾತನಾಡಲಿದ್ದಾರೆ ಎನ್ನಲಾಗಿದೆ.

ನವದೆಹಲಿಯ ಸಭೆಯಲ್ಲಿ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್, ಯುಎಸ್ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ಮತ್ತು ಯುಕೆ ವಿದೇಶಾಂಗ ಕಾರ್ಯದರ್ಶಿ ಜೇಮ್ಸ್ ಕ್ಲೇವರ್ಲಿ ಭಾಗವಹಿಸಲಿದ್ದಾರೆ. ಒಟ್ಟಾರೆಯಾಗಿ, ಭಾರತದಿಂದ ಆಹ್ವಾನಿಸಲಾದ ಜಿ20 ಸದಸ್ಯರಲ್ಲದ ಸದಸ್ಯರು ಮತ್ತು ಬಹುಪಕ್ಷೀಯ ಸಂಸ್ಥೆಗಳು ಸೇರಿದಂತೆ 40 ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಸಚಿವ ಸ್ಥಾನಕ್ಕೆ ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್ ರಾಜೀನಾಮೆ

ಸಿಎಂ ಕೇಜ್ರಿವಾಲ್ ಅಂಗೀಕಾರ

ನವದೆಹಲಿ, ಫೆ.28– ಸಚಿವ ಸ್ಥಾನಕ್ಕೆ ಮನೀಶ್ ಸಿಸೋಡಿಯಾ ಮತ್ತು ಸತ್ಯೇಂದ್ರ ಜೈನ್ ರಾಜೀನಾಮೆ ನೀಡಿದ್ದು, ಅವರ ರಾಜೀನಾಮೆಗಳನ್ನು ಸಿಎಂ ಅರವಿಂದ್ ಕೇಜ್ರಿವಾಲ್ ಅಂಗೀಕರಿಸಿದ್ದಾರೆ ಎಂದು ತಿಳಿದುಬಂದಿದೆ



ಅಬಕಾರಿ ಹಗರಣದಲ್ಲಿ ಬಂಧನಕ್ಕೀಡಾಗಿರುವ ಮನೀಶ್ ಸಿಸೋಡಿಯಾ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧನಕ್ಕೊಳಗಾಗಿರುವ ಎಎಪಿ ಸರ್ಕಾರದ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ತಿಹಾರ್ ಜೈಲಿನಲ್ಲಿದ್ದಾರೆ. ಇದೀಗ ಇಬ್ಬರೂ ಸಚಿವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದ ಈ ಇಬ್ಬರು ಸಚಿವರ ರಾಜೀನಾಮೆಗೆ ಬಿಜೆಪಿಯಿಂದ ನಿರಂತರ ಬೇಡಿಕೆ ಇತ್ತು. ಏತನ್ಮಧ್ಯೆ, ದೆಹಲಿ ಸರ್ಕಾರದಲ್ಲಿ ಈ ದೊಡ್ಡ ಪುನಾರಚನೆ ನಡೆದಿದ್ದು, ಮಾಹಿತಿ ಪ್ರಕಾರ ಮನೀಶ್ ಸಿಸೋಡಿಯಾ ಅವರ ಇಲಾಖೆಗಳನ್ನು ಕೈಲಾಶ್ ಗೆಹ್ಲೋಟ್ ಮತ್ತು ರಾಜ್‌ಕುಮಾರ್ ಆನಂದ್ ಅವರಿಗೆ ನೀಡುವ ಸಾಧ್ಯತೆ ಇದೆ.

ಸಿಸೋಡಿಯಾ ಅವರು 18 ಸಚಿವಾಲಯಗಳ ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದರು. ಗಮನಾರ್ಹವಾಗಿ, ಮನೀಶ್ ಸಿಸೋಡಿಯಾ ಅವರು ಶಿಕ್ಷಣ, ಹಣಕಾಸು, ಯೋಜನೆ, ಭೂಮಿ ಮತ್ತು ಕಟ್ಟಡ, ಸೇವೆಗಳು, ಪ್ರವಾಸೋದ್ಯಮ, ಕಲೆ–ಸಂಸ್ಕೃತಿ ಮತ್ತು ಭಾಷೆ, ಜಾಗೃತಿ, ಕಾರ್ಮಿಕ ಮತ್ತು ಉದ್ಯೋಗ, ಆರೋಗ್ಯ, ಕೈಗಾರಿಕೆ, ವಿದ್ಯುತ್, ಗೃಹ, ನಗರಾಭಿವೃದ್ಧಿ, ನೀರಾವರಿ ಜೊತೆಗೆ ಲೋಕೋಪಯೋಗಿ ಇಲಾಖೆಯನ್ನು ಹೊಂದಿದ್ದಾರೆ. ಪ್ರವಾಹ ನಿಯಂತ್ರಣ ಮತ್ತು ಜಲ ಇಲಾಖೆ ಸೇರಿದಂತೆ ಒಟ್ಟು 18 ಸಚಿವಾಲಯಗಳನ್ನು ಅವರು ನಿರ್ವಹಿಸುತ್ತಿದ್ದರು. ಅಂತೆಯೇ ಎಎಪಿ ಪಕ್ಷದಲ್ಲಿ ಸಿಸೋಡಿಯಾ ಕೇಜ್ರಿವಾಲ್ ಬಳಿಕ ಎರಡನೇ ಹಂತದ ಪ್ರಮುಖ ನಾಯಕರಾಗಿದ್ದು, ಸಚಿವ ಸತ್ಯೇಂದ್ರ ಜೈನ್ ಈಗಾಗಲೇ ಜೈಲಿನಲ್ಲಿದ್ದು, ಅಂದಿನಿಂದ ಸತ್ಯೇಂದ್ರ ಜೈನ್ ಅವರ ಇಲಾಖೆಗಳ ಕೆಲಸವನ್ನೂ ಸಿಸೋಡಿಯಾ ನಿರ್ವಹಿಸುತ್ತಿದ್ದರು. ಇದೀಗ ಅವರ ಬಂಧನದ ಹಿನ್ನಲೆಯಲ್ಲಿ ಮತ್ತು ಹಾಲಿ ಬೆಳವಣಿಗೆಗಳು ರಾಜ್ಯದಲ್ಲಿ ಆಡಳಿತಾರೂಢ ಪಕ್ಷಕ್ಕೆ ತೀವ್ರ ಮುಜುಗರಕ್ಕೀಡಾಗಿದೆ.



ಮೈಸೂರು ನಗರ ಪಾಲಿಕೆ ವಾರ್ಡ್ ನಂ. 19ರ ವ್ಯಾಪ್ತಿಯ ಜಯಲಕ್ಷ್ಮೀಪುರಂ, ಗೋಕುಲಂ ಮತ್ತು ವಿನಾಯಕನಗರದಲ್ಲಿ ಸೋಮವಾರ 24.10 ಅನುದಾನದಡಿ ಪರಿಶಿಷ್ಟ ಜಾತಿ, ಪಂಗಡದ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯರಾದ ಶ್ರೀಮತಿ ಭಾಗ್ಯ ಮಹದೇಶ್, ವಲಯ 4ರ ಉಪ ಆಯುಕ್ತೆ ಚಂದ್ರಮ್ಮ, ಕಂದಾಯ ನಿರೀಕ್ಷಕ ನಾಗೇಶ್, ಆರೋಗ್ಯಾಧಿಕಾರಿ ಪ್ರಕಾಶ್, ಇಂಜಿನಿಯರ್ ರಾಮಣ್ಣ, ಜೆಡಿಎಸ್ ಮುಖಂಡರಾದ ಶ್ರೀಮತಿ ನಳಿನ ಮಂಜು, ಮದನ್ ಮಹದೇಶ್, ಶ್ರೀನಿವಾಸ್, ನಾಗು, ಪಾಪಣ್ಣ, ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಚಂದ್ರಯಾನ-3ರ ಮಿಷನ್‌ನಲ್ಲಿ ಇಸ್ರೋದ ಮತ್ತೊಂದು ಸಾಧನೆ

ಕ್ರಯೋಜೆನಿಕ್ ಎಂಜಿನ್ ಪರೀಕ್ಷೆ ಯಶಸ್ವಿ

ಬೆಂಗಳೂರು, ಫೆ.28– ಚಂದ್ರಯಾನ–3 ಮಿಷನ್ ವಿಚಾರದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಒಂದು ಹೆಜ್ಜೆ ಮುಂದಡಿಯಿಟ್ಟಿದ್ದು, ಯೋಜನೆಯ ಕ್ರಯೋಜೆನಿಕ್ ಎಂಜಿನ್ ಪರೀಕ್ಷೆ ಯಶಸ್ವಿಯಾಗಿದೆ.



ಚಂದ್ರಯಾನ–3 ಮಿಷನ್ ಉಡಾವಣಾ ವಾಹನದ ಕ್ರಯೋಜೆನಿಕ್ ಮೇಲಿನ ಹಂತಕ್ಕೆ ಶಕ್ತಿ ತುಂಬುವ ಸಿಇ–20 ಕ್ರಯೋಜೆನಿಕ್ ರಾಕೆಟ್ ಎಂಜಿನ್‌ನ ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಇಸ್ರೋ ತಿಳಿಸಿದೆ. ಫೆ.24 ರಂದು ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೋ ಪ್ರೊಪಲ್ಷನ್ ಕಾಂಪ್ಲೆಕ್ಸ್‌ನ ಹೈ ಆಲ್ಟಿಟ್ಯೂಡ್ ಟೆಸ್ಟ್ ಫೆಸಿಲಿಟಿಯಲ್ಲಿ ಯೋಜಿತ ಅವಧಿಗೆ 25 ಸೆಕೆಂಡುಗಳ ಕಾಲ ನಡೆದ ಪರೀಕ್ಷೆಯಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ಇಸ್ರೋ ಅಧಿಕಾರಿಗಳು ತಿಳಿಸಿದ್ದಾರೆ.

ಪರೀಕ್ಷೆಯ ಸಮಯದಲ್ಲಿ ಎಲ್ಲಾ ಪ್ರೊಪಲ್ಷನ್ ಪ್ಯಾರಾಮೀಟರ್‌ಗಳು ತೃಪ್ತಿಕರವಾಗಿರುವುದು ಕಂಡುಬಂದಿವೆ ಮತ್ತು ಮುನ್ನೋಟಗಳೊಂದಿಗೆ ನಿಕಟವಾಗಿ ಹೊಂದಾಣಿಕೆಯಾಗಿದೆ. ಸಂಪೂರ್ಣ–ಸಂಯೋಜಿತ ಫ್ಲೈಟ್ ಕ್ರಯೋಜೆನಿಕ್ ಹಂತವನ್ನು ಅರಿತುಕೊಳ್ಳಲು ಕ್ರಯೋಜೆನಿಕ್ ಎಂಜಿನ್ ಅನ್ನು ಪ್ರೊಪಲ್ಲೆಂಟ್ ಟ್ಯಾಂಕ್‌ಗಳು, ಸ್ಟೇಜ್ ಸ್ಟ್ರಕ್ಚರ್‌ಗಳು ಮತ್ತು ಸಂಬಂಧಿತ ದ್ರವ ರೇಖೆಗಳೊಂದಿಗೆ ಮತ್ತಷ್ಟು ಸಂಯೋಜಿಸಲಾಗುವುದು ಎಂದು ಇಸ್ರೋ ಹೇಳಿಕೆಯಲ್ಲಿ ತಿಳಿಸಿದೆ.

ಈ ವರ್ಷದ ಆರಂಭದಲ್ಲಿ ಚಂದ್ರಯಾನ–3 ಲ್ಯಾಂಡರ್ ಯು ಆರ್ ರಾವ್ ಉಪಗ್ರಹ ಕೇಂದ್ರದಲ್ಲಿ ಇಎಂಐ, ಇಎಂಸಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತ್ತು. ಬಾಹ್ಯಾಕಾಶ ಪರಿಸರದಲ್ಲಿ ಉಪಗ್ರಹ ಉಪವ್ಯವಸ್ಥೆಗಳ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ನಿರೀಕ್ಷಿತ ವಿದ್ಯುತ್ಕಾಂತೀಯ ಮಟ್ಟಗಳೊಂದಿಗೆ ಅವುಗಳ ಹೊಂದಾಣಿಕೆಯನ್ನು ಖಚಿತಪಡಿಸಿಕೊಳ್ಳಲು ಉಪಗ್ರಹ ಕಾರ್ಯಾಚರಣೆಗಳಿಗಾಗಿ ಎಲೆಕ್ಟ್ರೋ–ಮ್ಯಾಗ್ನೆಟಿಕ್ ಇಂಟರ್‌ಫರೆನ್ಸ್, ಎಲೆಕ್ಟ್ರೋ–ಮ್ಯಾಗ್ನೆಟಿಕ್ ಹೊಂದಾಣಿಕೆ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಪರೀಕ್ಷೆಯು ಬಾಹ್ಯಾಕಾಶ ಕ್ಷೇತ್ರದ ಸಂಶೋಧನೆಗಳಲ್ಲಿ ಪ್ರಮುಖ ಮೈಲಿಗಲ್ಲು ಎಂದು ಇಸ್ರೋ ಹೇಳಿದೆ.

ಸಿಬಿಐ ಬಂಧನ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಸಿಸೋಡಿಯಾಗೆ ಹಿನ್ನಡೆ

ನವದೆಹಲಿ, ಫೆ.28– ದೆಹಲಿ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮನ್ನು ಬಂಧಿಸಿರುವ ಸಿಬಿಐ ನಡೆ ಪ್ರಶ್ನಿಸಿ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ಮನವಿ ಮಾಡುವಂತೆ ಮನೀಶ್ ಸಿಸೋಡಿಯಾ ಅವರಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ ಎಂದು ಸುದ್ದಿಸಂಸ್ಥೆ ಎಎನ್‌ಐ ಟ್ವೀಟ್ ಮಾಡಿದೆ.


ತುರ್ತು ವಿಚಾರಣೆ ನಡೆಸುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠದ ಎದುರು ಹಿರಿಯ ವಕೀಲ ಎ.ಎಂ. ಸಿಂಘ್ವಿ ಮನವಿ ಮಾಡಿದ್ದರು.

ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 482ರ ಅಡಿಯಲ್ಲಿ ಅರ್ಜಿದಾರರು ಹೈಕೋರ್ಟ್‌ಗೆ ಹೋಗಬಹುದು ಎಂದು ನ್ಯಾಯಾಲಯವು ಆರಂಭದಲ್ಲಿ ಸೂಚಿಸಿತ್ತು. ಆದರೆ, ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ಸಲ್ಲಿಸಲಾಗಿರುವ ರಿಟ್ ಅರ್ಜಿಯು ವಿನೋದ್ ದುವಾ ಪ್ರಕರಣದ ತೀರ್ಪಿನ ಅಡಿಯಲ್ಲಿ ಬರುತ್ತದೆ ಎಂದು ವಕೀಲರು ನ್ಯಾಯಾಲಯದ ಗಮನ ಸೆಳೆದಿದ್ದರು.

ಫೆಬ್ರವರಿ 26ರಂದು ಸಿಸೋಡಿಯಾ ಅವರನ್ನು 8 ಗಂಟೆಗಳ ವಿಚಾರಣೆ ಬಳಿಕ ಸಿಬಿಐ ಅಧಿಕಾರಿಗಳು ಬಂಧಿಸಿದ್ದರು.ನಿನ್ನೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಕೆ.ನಾಗ್ಪಾಲ್, ಸಿಸೋಡಿಯಾ ಅವರನ್ನು 5 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಿದ್ದರು.

ಆಸ್ಪತ್ರೆಗೆ ದಾಖಲಾದ ಪ್ರಧಾನಿ ನರೇಂದ್ರ ಮೋದಿ ಅವರ ಸಹೋದರ ಪ್ರಹ್ಲಾದ್ ಮೋದಿ

ಚೆನ್ನೈ, ಫೆ.28– ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಕಿರಿಯ ಸಹೋದರ ಪ್ರಹ್ಲಾದ್ ಮೋದಿ ಅವರು ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹೆಚ್ಚಿನ ವಿವರಗಳನ್ನು ನೀಡದೆ, ಅವರ ಸ್ಥಿತಿ ಸ್ಥಿರವಾಗಿದೆ ಎಂದು ಅಯನಂಬಾಕ್ಕಂನ ಆಸ್ಪತ್ರೆಯ ಮೂಲಗಳು ಸುದ್ದಿಸಂಸ್ಥೆ ಐಎಎನ್‌ಎಸ್‌ಗೆ ತಿಳಿಸಿವೆ. ಅಖಿಲ ಭಾರತ ನ್ಯಾಯಬೆಲೆ ಅಂಗಡಿ ಡೀಲರ್ಸ್ ಫೆಡರೇಶನ್‌ನ ಉಪಾಧ್ಯಕ್ಷರೂ ಆಗಿರುವ ಪ್ರಹ್ಲಾದ್ ಮೋದಿ ಅವರು ತಮ್ಮ ಕುಟುಂಬದೊಂದಿಗೆ ಆಧ್ಯಾತ್ಮಿಕ ಪ್ರವಾಸದಲ್ಲಿದ್ದು, ಮಧುರೈ ಮೀನಾಕ್ಷಿ ದೇವಸ್ಥಾನ, ರಾಮೇಶ್ವರಂ ದೇವಸ್ಥಾನ ಮತ್ತು ಕನ್ನಿಯಾಕುಮಾರಿ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಅವರ ಆರೋಗ್ಯ ಸ್ಥಿತಿಯ ಕುರಿತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ.



ಸಿಎಂ ಕೇಜ್ರಿವಾಲ್‌ಗೆ ಶಾಕ್: ಎಎಪಿ ತೊರೆದು ಬಿಜೆಪಿ ಸೇರಲು ಭಾಸ್ಕರ್ ರಾವ್ ನಿರ್ಧಾರ

ಬೆಂಗಳೂರು, ಫೆ.28– ಮಾರ್ಚ್ 4ರಂದು ರಾಜ್ಯಕ್ಕೆ ಎಎಪಿ ಸಂಸ್ಥಾಪಕ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಆಗಮಿಸುತ್ತಿದ್ದು ಇದಕ್ಕೂ ಮೊದಲೇ ಅವರಿಗೆ ಶಾಕ್ ನೀಡಿರುವ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಅವರು ಎಎಪಿಗೆ ಗುಡ್ ಬೈ ಹೇಳಿದ್ದಾರೆ.



ನಿವೃತ್ತಿ ಪಡೆದು ಆಮ್ ಆದ್ಮಿ ಪಕ್ಷ ಸೇರಿದ್ದ ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರು ನಾಳೆ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಗೊಳ್ಳಲಿದ್ದಾರೆ. ಇಂದು ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಭೇಟಿ ಮಾಡಿದ ಭಾಸ್ಕರ್ ರಾವ್ ಅವರು ನಂತರ ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ಅಣ್ಣಾಮಲೈ ಸೇರಿ ಹಲವು ನಾಯಕ ಜೊತೆ ಮಾತುಕತೆ ನಡೆಸಿದರು.

ಭಾಸ್ಕರ್ ರಾವ್ ಅವರು ಎಎಪಿ ಪಕ್ಷದಿಂದ ಬಸವನಗುಡಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸುವ ಇಚ್ಛೆ ಹೊಂದಿದ್ದು, ಅದಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಇದೀಗ ಅವರು ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂಬ ಸುದ್ದಿ ಅಚ್ಚರಿ ಮೂಡಿಸಿದೆ.

ಭೋಪಾಲ್–ಉಜ್ಜೈನ್ ರೈಲು ಸ್ಫೋಟ; 7 ಅಪರಾಧಿಗಳಿಗೆ ಮರಣದಂಡನೆ


ಮೋದಿ ರ್‍ಯಾಲಿಯಲ್ಲಿಯೂ ಸ್ಫೋಟಕ್ಕೆ ಸಂಚು ಹೂಡಿದ್ದ ಉಗ್ರರು

ನವದೆಹಲಿ, ಫೆ.28– ಭೋಪಾಲ್–ಉಜ್ಜೈನ್ ಪ್ಯಾಸೆಂಜರ್ ರೈಲಿನಲ್ಲಿ 2017ರಲ್ಲಿ ಬಾಂಬ್ ಸ್ಫೋಟಿಸಿದ್ದ ಪ್ರಕರಣದ 8 ಮಂದಿ ಅಪರಾಧಿಗಳ ಪೈಕಿ 7 ಮಂದಿಗೆ ಉತ್ತರ ಪ್ರದೇಶದ ಎನ್‌ಐಎ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿ ಮಂಗಳವಾರ ತೀರ್ಪು ನೀಡಿದೆ. ಮತ್ತೊಬ್ಬ ಅಪರಾಧಿಗೆ ಜೀವಾವಧಿ ಶಿಕ್ಷೆ ನೀಡಲಾಗಿದೆ. ಅಪರಾಧಿಗಳಾದ ಮೊಹಮ್ಮದ್ ಫೈಸಲ್, ಗೌಸ್ ಮೊಹಮ್ಮದ್, ಅಝರ್, ಆತಿಫ್ ಮುಜಾಫರ್, ಡ್ಯಾನಿಶ್, ಮಿರ್ ಹುಸೇನ್ ಮತ್ತು ಆಸಿಫ್ ಇಕ್ಬಾಲ್‌ಗೆ ಮರಣದಂಡನೆ ವಿಧಿಸಲಾಗಿದೆ. ಮತ್ತೊಬ್ಬ ಅಪರಾಧಿ ಆತಿಫ್ ಇರಾಕಿಗೆ ಜೀವಾವಧಿ ಶಿಕ್ಷೆ ಪ್ರಕಟಿಸಲಾಗಿದೆ. ಅಪರಾಧಿಗಳು ಪ್ರಧಾನಿ ನರೇಂದ್ರ ಮೋದಿ ಅವರ ರ್‍ಯಾಲಿಯಲ್ಲಿಯೂ ಸ್ಫೋಟಕ್ಕೆ ಸಂಚು ಹೂಡಿದ್ದರು ಎನ್ನಲಾಗಿದೆ.

2017ರ ಮಾರ್ಚ್ 7ರಂದು ಭೋಪಾಲ್–ಉಜ್ಜೈನ್ ಪ್ಯಾಸೆಂಜರ್ ರೈಲಿನಲ್ಲಿ ಬಾಂಬ್ ಸ್ಫೋಟ ಸಂಭವಿಸಿ 10 ಮಂದಿ ಗಾಯಗೊಂಡಿದ್ದರು. ಇಸ್ಲಾಮಿಕ್ ಸ್ಟೇಟ್ ಬೆಂಬಲಿತ ಉಗ್ರರು ಭಾರತದಲ್ಲಿ ನಡೆಸಿದ ಮೊದಲ ದಾಳಿ ಇದು ಎನ್ನಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿ ಒಬ್ಬ ಶಂಕಿತ ಉಗ್ರರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಉಳಿದವರನ್ನು ಬಂಧಿಸಲಾಗಿತ್ತು. ನಂತರ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಪ್ರಕರಣದ ತನಿಖೆ ಕೈಗೆತ್ತಿಕೊಂಡಿತ್ತು. ಉಗ್ರರು ಸ್ವಯಂಪ್ರೇರಿತರಾಗಿ ದಾಳಿ ನಡೆಸಿದ್ದಾರೆ, ಇಸ್ಲಾಮಿಕ್ ಸ್ಟೇಟ್‌ನಿಂದ ಹಣಕಾಸು ನೆರವು ಪಡೆದಿಲ್ಲ ಎಂದು ತನಿಖಾಧಿಕಾರಿಗಳು ತಿಳಿಸಿದ್ದರು. ಬಂಧಿತ ಉಗ್ರರು ಪ್ರಧಾನಿ ನರೇಂದ್ರ ಮೋದಿ ಅವರ ರ್‍ಯಾಲಿಯಲ್ಲಿಯೂ ಸ್ಫೋಟಕ್ಕೆ ಸಂಚು ಹೂಡಿದ್ದರು ಎಂದು ಎನ್‌ಐಎ ನಂತರ ತಿಳಿಸಿತ್ತು. ಅಲ್ಲದೆ, ದಾಳಿಯಲ್ಲಿ ಶಾಮೀಲಾದ ಉಗ್ರರು ಸಿರಿಯಾ ಮತ್ತು ಇರಾಕ್‌ಗೆ ಪಲಾಯನ ಮಾಡಲು ಯತ್ನಿಸಿದ್ದರು ಎಂದು ಹೇಳಿದ್ದರು.

ನರೆಡ್ಕೋ ಮೈಸೂರು ಘಟಕದಿಂದ ಸಾಧಕರಿಗೆ 'ನರೆಡ್ಕೋ ಪ್ರಶಸ್ತಿ ಪ್ರದಾನ'

ಮೈಸೂರು, ಫೆ.28(ಎಂಕೆ)– ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್ (ನರೆಡ್ಕೋ) ಮೈಸೂರು ಘಟಕದ ವತಿಯಿಂದ 2023ನೇ ಸಾಲಿನ 'ನರೆಡ್ಕೋ ಪ್ರಶಸ್ತಿ ಪ್ರದಾನ' ಸಮಾರಂಭ ನಡೆಯಿತು.



ಈ ವೇಳೆ ಕಟ್ಟಡ ನಿರ್ಮಾಣದ ವಿಭಾಗಗಳಲ್ಲಿ ಗಮನಾರ್ಹ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಅಪಾರ್ಟ್‌ಮೆಂಟ್‌ಗಳಲ್ಲಿ ಟ್ರೆಂಡ್ಸ್ ಅಪಾರ್ಟ್‌ಮೆಂಟ್‌ನ ಸಂದೀಪ್ ಸುಬ್ರಹ್ಮಣ್ಯ, ಬಜೆಟ್ ಗ್ರೂಪ್ ಹೌಸಿಂಗ್‌ನಲ್ಲಿ ನಿರಂತರ ಹೌಸಿಂಗ್‌ನ ಎಸ್.ಫಣಿರಾಜ್, ಸ್ವತಂತ್ರ ಮನೆಗಳ ನಿರ್ಮಾಣದಲ್ಲಿ ಸ್ಕಿಲ್ ಟೆಕ್ ಇಂಜಿನಿಯರ್ಸ್‌ನ ಶಿವಶಂಕರ್, ಹೊಸ ತಂತ್ರಜ್ಞಾನದಲ್ಲಿ ಇಂಜಿನಿಯರ್ ವಿ.ಮೋಹನ್‌ಕುಮಾರ್, ವಸತಿ ಲೇಔಟ್ ಅಭಿವೃದ್ಧಿ ವಿಭಾಗದಲ್ಲಿ ಸ್ಕಿಲ್ ಟೆಕ್ ಇಂಜಿನಿಯರ್ಸ್ ಆರ್.ವೀರೇಶ್, ಯಶ್ ಡೆವಲಪರ್ಸ್‌ನ ಎಂ.ಮನೋಜ್ ಲೋಧಾ, ಫಾರ್ಮ್ ಸೈಟ್‌ಗಳಲ್ಲಿ ಎನ್.ದಿವ್ಯೇಶ್ ಅವರಿಗೆ ಪ್ರಶಸ್ತಿ ನೀಡಲಾಯಿತು.

ಆಂತರಿಕ ವಿನ್ಯಾಸ ಮತ್ತು ಕಾರ್ಯಗತಗೊಳಿಸುವಿಕೆ ಹಾಗೂ ಆರ್ಕಿಟೆಕ್ ವಿನ್ಯಾಸ ವಿಭಾಗದಲ್ಲಿ ನಕ್ಷಾ ಬಿಲ್ಡರ್ಸ್‌ನ ಪಿ.ವಿನಯ್ ಶಂಕರ್, ಸಿವಿಲ್ ಕಂಟ್ರ್ಯಾಕ್ಟರ್ ವಿಭಾಗದಲ್ಲಿ ರಕ್ಷಾ ಇಂಜಿನಿಯರ್ಸ್‌ನ ಸಿ.ರಾಘವೇಂದ್ರ, ನಮ್ಮನೆ ಕನ್‌ಸ್ಟ್ರಕ್ಷನ್‌ನ ಪಿ.ಶ್ರೀನಿವಾಸ್, ನಕ್ಷಾ ಬಿಲ್ಡರ್ಸ್‌ನ ಪಿ.ವಿನಯ್ ಶಂಕರ್ ಪಡೆದುಕೊಂಡರು. ಲೇಔಟ್ ರಚನೆಯಲ್ಲಿ ರಕ್ಷಾ ಇಂಜಿನಿಯರ್ಸ್ ಸಿ.ರಾಘವೇಂದ್ರ ಮೆಟೀರಿಯಲ್ ಸಪ್ಲೈಯರ್ಸ್ ವಿಭಾಗದಲ್ಲಿ ಸೋಲಾರ್ ಅಸೋಸಿಯೆಟ್ಸ್‌ನ ಆರ್.ಮೋಹನ್ ಕುಮಾರ್, ಆರ್‌ಕೆಬಿ ಬಿಲ್ಡ್ ಪ್ರೋ ಪಿ.ಎಸ್.ಗಗನ್ ದೀಪ್, ಸ್ವಸ್ತಿಕ್ ಎಂಟರ್‌ಪ್ರೈಸರ್‌ನ ಟಿ.ಸಿ.ದೀರಜ್ ಜೈನ್, ಆಂತರಿಕ ವಿನ್ಯಾಸ ಮತ್ತು ಕಾರ್ಯಗತಗೊಳಿಸುವಿಕೆ ಹಾಗೂ ವಾಸ್ತುಶಿಲ್ಪ ವಿನ್ಯಾಸ ವಿಭಾಗದಲ್ಲಿ ನಕ್ಷಾ ಬಿಲ್ಡರ್ಸ್‌ನ ಪಿ.ವಿನಯ್ ಶಂಕರ್, ಸ್ಟ್ರಕ್ಚರ್ ಇಂಜಿನಿಯರ್ ವಿಭಾಗದಲ್ಲಿ ಸಿಜಿಎಂ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್‌ನ ಮೋಹನ್ ಗುರುಮೂರ್ತಿ, ಪ್ರಾಜೆಕ್ಟ್ ಮಾರ್ಕೆಟಿಂಗ್ ಕಂಪನಿ ವಿಭಾಗದಲ್ಲಿ ಅಮಾಕ್ಸ್ ಇಂಡಿಯಾದ ಎಂ.ಎಲ್.ನಾಗೇಶ್ ಅವರಿಗೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೇಯರ್ ಶಿವಕುಮಾರ್, ಮೈಸೂರನ್ನು ಸಾಂಸ್ಕೃತಿಕ, ಪಾರಂಪರಿಕ, ಸ್ವಚ್ಛನಗರ ಇವೆಲ್ಲದಕ್ಕೂ ಪ್ರಮುಖ ಕಾರಣ ಮೈಸೂರು ಒಡೆಯರ್ ಕುಟುಂಬ. ಆದ್ದರಿಂದ ಅವರನ್ನು ಸ್ಮರಿಸುವುದು ಮುಖ್ಯವಾಗಿದೆ. ಬೆಂಗಳೂರನ್ನು ಬಿಟ್ಟರೆ ಮೈಸೂರು ಇಂದು 2ನೇ ದೊಡ್ಡನಗರವಾಗಿ ಬೆಳೆಯುತ್ತಿದೆ. ಮೈಸೂರು–ಬೆಂಗಳೂರು ನಡುವೆ ದಶಪಥ ಹೆದ್ದಾರಿ ನಿರ್ಮಾಣವಾಗಿದ್ದು, ಕಡಿಮೆ ಸಮಯದಲ್ಲಿ ಎರಡು ನಗರಗಳನ್ನು ಸಂಪರ್ಕಿಸಬಹುದಾಗಿದೆ. ಭವಿಷ್ಯದ ದೂರದೃಷ್ಟಿಯಿಂದ ಮೈಸೂರನ್ನು ಅಭಿವೃದ್ಧಿ ಮಾಡಬೇಕು. ಮುಂದಿನ ದಿನಗಳಲ್ಲಿ ಉತ್ತಮ ಯೋಜನೆಗಳ ಕುರಿತು ವಿಚಾರ ವಿನಿಮಯ ಮಾಡೋಣ ಎಂದು ಹೇಳಿದರು.

ವೃತ್ತಗಳ ಅಭಿವೃದ್ಧಿಗೆ ಮೇಯರ್ ಮನವಿ....

ಮೈಸೂರು ಅಭಿವೃದ್ಧಿ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ನಗರದ ಯಾವುದಾದರೂ ಎರಡು ಪ್ರಮುಖ ವೃತ್ತಗಳನ್ನು ನರೆಡ್ಕೋ ವತಿಯಿಂದ ಅಭಿವೃದ್ಧಿ ಮಾಡಿಕೊಡುವಂತೆ ಮೇಯರ್ ಶಿವಕುಮಾರ್ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೈಸೂರು ಘಟಕದ ಅಧ್ಯಕ್ಷ ಆದಿಶೇಷನ್‌ಗೌಡ, ಯಾವ ಎರಡು ವೃತ್ತಗಳನ್ನು ಅಭಿವೃದ್ಧಿ ಮಾಡಿಕೊಡಬೇಕು ಎಂದು ತಿಳಿಸಿದರೆ ಸಾಕು ನರೆಡ್ಕೋ ಅಭಿವೃದ್ಧಿ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ರಾಜವಂಶಸ್ಥೆ ಕಾಮಾಕ್ಷಿ ದೇವಿ ಒಡೆಯರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್ ಸೋಮಶೇಖರ್, ನರೆಡ್ಕೋ ಅಧ್ಯಕ್ಷ ರಾಜನ್ ಬಂಡೆಲ್ಕರ್, ಮೈಸೂರು ಘಟಕದ ಮುಖ್ಯಸ್ಥ ಎನ್.ದಿವ್ಯೇಶ್, ಅಧ್ಯಕ್ಷ ಆದಿಶೇಷನ್ ಗೌಡ, ಕಾರ್ಯದರ್ಶಿ ಎಂ.ಎಲ್. ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಮನೀಶ್ ಸಿಸೋಡಿಯಾ ಬಂಧನಕ್ಕೆ ಖಂಡನೆ

ಮಂಡ್ಯ, ಫೆ.28– ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿರುವ ಕ್ರಮವನ್ನು ಎಎಪಿ ಮುಖಂಡ ಬೂದನೂರು ಬೊಮ್ಮಯ್ಯ ಖಂಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಸಿಬಿಐ ಅನ್ನು ತನ್ನ ಕೈಗೊಂಬೆ ಮಾಡಿಕೊಂಡಿದೆ. ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿಲ್ಲ ಎಂಬ ಕಾರಣಕ್ಕೆ ದೆಹಲಿ ಡಿಸಿಎಂ ಸಿಸೋಡಿಯಾರನ್ನು ಬಂಧಿಸಿದ್ದು, ಕೂಡಲೇ ಅವರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು. ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ವಿಪಕ್ಷಗಳನ್ನು ಟಾರ್ಗೆಟ್ ಮಾಡುತ್ತಿರುವ ಬಿಜೆಪಿ, ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ಅಂತಹ ಪಕ್ಷಕ್ಕೆ ಮುಂದಿನ ಚುನಾವಣೆಯಲ್ಲಿ ಜನ ತಕ್ಕ ಪಾಠ ಕಲಿಸಬೇಕೆಂದು ಮನವಿ ಮಾಡಿದರು.

ಪಂಚರತ್ನ ಯೋಜನೆ ಬಗ್ಗೆ ಮನೆ ಮನೆಗೆ ತಿಳಿಸಿ

ಜೆಡಿಎಸ್ ಎಸ್ಸಿ-ಎಸ್ಟಿ ಘಟಕದ ರಾಜ್ಯಾಧ್ಯಕ್ಷ, ಶಾಸಕ ಅನ್ನದಾನಿ ಸಲಹೆ



ಮಂಡ್ಯ, ಫೆ.28– ಮುಂಬರುವ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ಬರಲಿದ್ದು, ಪಂಚರತ್ನ ಯೋಜನೆಗಳ ಬಗ್ಗೆ ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ಕಾರ್ಯಕರ್ತರು ದಲಿತ ಸಮುದಾಯದ ಮನೆ ಮನೆಗಳಿಗೆ ತಿಳಿಸಬೇಕು ಎಂದು ಶಾಸಕ ಹಾಗೂ ಜೆಡಿಎಸ್ ಎಸ್ಸಿ–ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಡಾ.ಕೆ.ಅನ್ನದಾನಿ ಸಲಹೆ ನೀಡಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ ಪದಾಧಿಕಾರಿಗಳ ಮತ್ತು 2023ರ ಸಾರ್ವತ್ರಿಕ ವಿಧಾನಸಭೆ ಚುನಾವಣೆ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರದಲ್ಲಿ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಹುನ್ನಾರ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ದಲಿತರ ಮೀಸಲಾತಿ ಕಿತ್ತುಕೊಳ್ಳುವ ಪಿತೂರಿ ನಡೆಯುತ್ತಿದೆ. ಅದಕ್ಕಾಗಿ ದಲಿತ ಸಮುದಾಯ ಎಚ್ಚರ ವಹಿಸುವ ಅವಶ್ಯಕತೆ ಇದೆ. ಇಂತಹ ಸಂದರ್ಭ ನೊಂದವರ ಪರ ನಿಂತುಕೊಳ್ಳುವ ನಾಯಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಉಳಿಸಿಕೊಳ್ಳಬೇಕಾದರೆ ಜೆಡಿಎಸ್ ಪಕ್ಷ ಉಳಿಯಬೇಕು. ಈ ನಿಟ್ಟಿನಲ್ಲಿ ದಲಿತ ಸಮುದಾಯ ಪಕ್ಷದ ಪರವಾಗಿ ಗಟ್ಟಿಯಾಗಿ ನಿಂತರೆ ಮಾತ್ರ ನಾವೆಲ್ಲರೂ ಉಳಿಯಬಹುದು ಎಂದರು.

ಜಿಲ್ಲೆಯಲ್ಲಿ ಒಕ್ಕಲಿಗ ಸಮಾಜದ ನಂತರದ ಸ್ಥಾನದಲ್ಲಿ ದಲಿತ ಸಮುದಾಯವಿದೆ. ದಲಿತ ಸಮಾಜದವರು ಅತೀ ಹೆಚ್ಚು ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದಾರೆ. ದಲಿತ ಸಮುದಾಯದವರು ತಮ್ಮಲ್ಲಿರುವ ಭಿನ್ನಾಭಿಪ್ರಾಯ ಬಿಟ್ಟು ಪಕ್ಷ ಕಟ್ಟುವ ಕೆಲಸ ಮಾಡಬೇಕು. ದಲಿತರು ಜೆಡಿಎಸ್ ಪಕ್ಷಕ್ಕೆ ಬೆಂಬಲ ಸೂಚಿಸಿದರೆ ಜಿಲ್ಲೆಯ ಏಳು ಸ್ಥಾನಗಳನ್ನು ಗೆಲ್ಲಬಹುದು ಎಂದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆ ಜಾರಿಗೆ ತರಲು ನಿರ್ಧರಿಸಿದ್ದು, ಒಂದು ಎಕರೆಗೆ ರೈತರಿಗೆ 10 ಸಾವಿರ, ಸ್ತ್ರೀಶಕ್ತಿ ಸಾಲ ಜೊತೆಗೆ ಸಂಪೂರ್ಣವಾಗಿ ಎಸ್ಸಿ ಎಸ್ಟಿ ಅಭಿವೃದ್ಧಿ ನಿಗಮದ ಸಾಲಮನ್ನಾ ಮಾಡಲು ಹೆಚ್.ಡಿ. ಕುಮಾರಸ್ವಾಮಿಗೆ ಮನವಿ ಮಾಡುವ ಜೊತೆಗೆ ಪ್ರಣಾಳಿಕೆಯಲ್ಲಿ ಸೇರಿಸುವ ಕೆಲಸ ಮಾಡಲಾಗುವುದು ಎಂದರು.

ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಜಯರಾಮು ಮಾತನಾಡಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಉಪಾಧ್ಯಕ್ಷ ಸಿ.ಕೆ.ಪಾಪಯ್ಯ, ಮುಖಂಡರಾದ ಕಾಳಯ್ಯ, ಯೋಗೇಶ್, ಸಿದ್ದರಾಜು, ಸೋಮಶೇಖರ್ ಸೇರಿದಂತೆ ಇತರ ಪದಾಧಿಕಾರಿಗಳು ಸಭೆಯಲ್ಲಿದ್ದರು.

ಅಗ್ರಹಾರಬಾಚಹಳ್ಳಿ ಗ್ರಾಪಂಗೆ ಜಯಂತಿ ರವೀಂದ್ರ ಅಧ್ಯಕ್ಷೆ



ಕೆ.ಆರ್.ಪೇಟೆ, ಫೆ.28– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಜಯಂತಿ ರವೀಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಸಾವಿತ್ರಮ್ಮ ಗೋವಿಂದಶೆಟ್ಟಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಜಯಂತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಸತೀಶ್ ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್‌ಬಾಬು, ಪಿಡಿಓ ಕೆ.ದೇವೇಗೌಡ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷೆ ಜಯಂತಿ ಮಾತನಾಡಿ, ಗ್ರಾಪಂನ ಎಲ್ಲಾ ಸದಸ್ಯರು ಹಾಗೂ ನೌಕರರ ಸಹಕಾರದಿಂದ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ನೂತನ ಅಧ್ಯಕ್ಷೆ ಜಯಂತಿ ಅವರನ್ನು ತಾಪಂ ಮಾಜಿ ಅಧ್ಯಕ್ಷ ವಿ.ಎನ್.ಮಹದೇವೇಗೌಡ, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಬಿ.ವಿ.ನಾಗೇಶ್, ಟಿಎಪಿಸಿಎಂಎಸ್ ನಿರ್ದೇಶಕ ಅಶೋಕ್, ರಘು, ಪಟೇಲ್ ನಾಗೇಗೌಡ, ಸಿಆರ್‌ಪಿ ಕುಮಾರ್, ವಿ.ಡಿ.ಜಯಪ್ರಕಾಶ್, ವಿಎಸ್‌ಎಸ್‌ಎನ್ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಡಿ.ಮಹದೇವೇಗೌಡ, ಎ.ಜಿ.ಸಂತೋಷ್, ಎ.ವಿ.ಪ್ರದೀಪ್, ಗ್ರಾಪಂ ಉಪಾಧ್ಯಕ್ಷ ಕುಮಾರಗೌಡ, ಸದಸ್ಯರಾದ ರಮಾನಂದ್, ಆರ್.ರಮೇಶ್, ದಿವಿಕುಮಾರ್, ಚನ್ನೇಗೌಡ, ಫಯಾಜ್ ಉಲ್ಲಾಖಾನ್, ನೇತ್ರಾವತಿ, ಶಶಿರೇಖಾ, ಭಾಗ್ಯಮ್ಮ, ಚಿಲ್ಲದಹಳ್ಳಿ ಆರ್.ಶ್ರೀನಿವಾಸ್, ರೇಣುಕಾ, ನಂಜೇಗೌಡ, ದಿನೇಶ್ ಮತ್ತಿತರರಿದ್ದರು.

ನಾನು ಕಾಂಗ್ರೆಸ್ ಪ್ರಬಲ ಟಿಕೆಟ್ ಆಕಾಂಕ್ಷಿ: ಪಾಲಹಳ್ಳಿ ಚಂದ್ರಶೇಖರ್



ಶ್ರೀರಂಗಪಟ್ಟಣ, ಫೆ.28– ಮುಂಬರುವ ಚುನಾವಣೆಯಲ್ಲಿ ನಾನು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್‌ನ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಕಾಂಗ್ರೆಸ್ ಹಿರಿಯ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಅಭಿಮಾನಿಗಳು, ಹಿತೈಷಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದಲೂ ಕಾಂಗ್ರೆಸ್ ಸಂಘಟನೆಗೆ ಶ್ರಮಿಸಿದ್ದೇನೆ. ಈ ಬಾರಿ ಕ್ಷೇತ್ರದ ಜನತೆ ಹೊಸಮುಖ ನೋಡಲು ಬಯಸಿರುವುದರಿಂದ ಕಾಂಗ್ರೆಸ್ ಹೈಕಮಾಂಡ್ ಮುಂದಿನ ಚುನಾವಣೆಯಲ್ಲಿ ನನಗೆ ಟಿಕೆಟ್ ನೀಡುವ ಮೂಲಕ ಕ್ಷೇತ್ರದ ಜನತೆ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ಹೊರಗಿನಿಂದ ಬಂದವರು ಯಾವುದೇ ಕೊಡುಗೆ ನೀಡಿಲ್ಲ. 2018ರಲ್ಲೂ ಹೊರಗಿನಿಂದ ಬಂದವರಿಗೆ ಮಣೆ ಹಾಕಲಾಗಿತ್ತು ಆದರೆ ಪಕ್ಷ ಹೀನಾಯವಾಗಿ ಸೋತಿತು. ಕಳೆದ 3 ಚುನಾವಣೆಯಿಂದಲೂ ಕಾಂಗ್ರೆಸ್ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದೇನೆ. ಆದರೆ ಹೈಕಮಾಂಡ್ ಒಂದೊಂದು ಕಾರಣ ಹೇಳಿ ಟಿಕೆಟ್ ತಪ್ಪಿಸಿತು. ಈ ಬಾರಿ ಕಾರ್ಯಕರ್ತರ ಒತ್ತಡ ಹೆಚ್ಚಾಗಿದ್ದು, ಅವರ ಅಪೇಕ್ಷೆ ಮೇರೆಗೆ ನಾನೂ ಕೂಡ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದು, ಕ್ಷೇತ್ರದ ಕಾರ್ಯಕರ್ತನ್ನು ಭೇಟಿ ಮಾಡಿ ಸಂಘಟನೆಯಲ್ಲಿದ್ದೇನೆ ಎಂದರು.

ನಾನು ಕೂಡ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದೇನೆ. ಈ ಹಿಂದೆ ಪಕ್ಷದಿಂದ ಟಿಕೆಟ್ ಪಡೆದವರು 45 ಸಾವಿರ ಮತಗಳ ಅಂತರದಿಂದ ಸೋಲುವ ಮೂಲಕ ಪಕ್ಷವನ್ನು ಹೀನಾಯ ಸ್ಥಿತಿಗೆ ತಂದಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ತಮಗೆ ಟಿಕೆಟ್ ನೀಡುವಂತೆ ಮನವಿ ಮಾಡಿದರು.

ಶ್ರೀರಂಗಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಮಾತನಾಡಿ, ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದ ಜನತೆ ಬೇಸತ್ತಿದ್ದು, ಕಾಂಗ್ರೆಸ್ ಪರ ಒಲವು ತೋರಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮನೆ ಒಡತಿಗೆ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆ, ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ನೀಡಲಾಗುವುದು. ಕಾರ್ಯಕರ್ತರು ಮನೆ ಮನೆಗೆ ತೆರಳಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾರಿಯಾದ ಯೋಜನೆಗಳನ್ನು ಜನರಿಗೆ ತಿಳಿಸುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು. ಮುಖಂಡರಾದ ಮರಿಸ್ವಾಮಿ, ಹೊನ್ನೇಗೌಡ, ಬಾಲು, ವಿಜಯ ಕುಮಾರ್, ಗೋಪಾಲ್, ಬಿ.ಟಿ.ಮಂಜು, ರಾಜು ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರಿದ್ದರು.

ಭಾರತದ ಐಕ್ಯತೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖ

ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಅಭಿಪ್ರಾಯ



ಮಂಡ್ಯ, ಫೆ.28– ಭಾರತದ ಐಕ್ಯತೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖ ಎಂದು ಎಂಎಲ್ಸಿಯೂ ಆದ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಮಧು ಜಿ. ಮಾದೇಗೌಡ ತಿಳಿಸಿದರು.

ಭಾರತ ಸರ್ಕಾರ ಕೇಂದ್ರ ಸಂವಹನ ಇಲಾಖೆ ಮೈಸೂರು, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಮಹಾತ್ಮ ಗಾಂಧೀ ಸ್ಮಾರಕ ಟ್ರಸ್ಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಛಾಯಾಚಿತ್ರ ಪ್ರದರ್ಶನ ಮತ್ತು ವಿಶೇಷ ಮಾಹಿತಿ ಕಾರ್ಯಕ್ರಮವನ್ನು ಮಂಡ್ಯ ನಗರದ ಗಾಂಧಿಭವನದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮಹಾತ್ಮ ಗಾಂಧೀಜಿ ಕುರಿತ ಜೀವನ ಚರಿತ್ರೆ, ಸ್ವಾತಂತ್ರ್ಯ ಹೋರಾಟದ ಮಾಹಿತಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಛಾಯಾಚಿತ್ರ ಪ್ರದರ್ಶನ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ಸಾಧಕ ಮಹಿಳೆಯರ ಸಾಧನೆಯ ಮಾಹಿತಿಗಳನ್ನು ಒಳಗೊಂಡಂತೆ ಛಾಯಾಚಿತ್ರ ಪ್ರದರ್ಶಿಸುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿರುವ ಕೇಂದ್ರ ಸಂವಹನ ಇಲಾಖೆ ಕಾರ್ಯ ಶ್ಲಾಘನೀಯ ಎಂದರು.

ಮಹಿಳೆಯರಿಗಾಗಿ ಇಂತಹ ಹತ್ತು ಹಲವು ಕಾರ್ಯಕ್ರಮವನ್ನು ಆಯೋಜಿಸಿ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಿದೆ ಎಂದರು. ಇಂದಿನ ಯುಗದಲ್ಲಿ ಮಹಿಳೆಯರು ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಧನೆ ಮಾಡಿರುವವರು ಸಾಕಷ್ಟಿದ್ದಾರೆ. ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸಬೇಕಿದೆ ಎಂದರು.

ಕ್ಷೇತ್ರ ಸಂವಹನ ಕಾರ್ಯಾಲಯದ ಉಪ ನಿರ್ದೇಶಕಿ ಡಾ.ಟಿ.ಸಿ ಪೂರ್ಣಿಮಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ನಿರ್ದೇಶಕ ಎ.ಪಿ.ರಮೇಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಎಸ್.ಎಚ್ ನಿರ್ಮಲ, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಂಬಿಕಾ, ಮೇಲ್ವಿಚಾರಕಿ ಲಕ್ಷ್ಮೀ, ಕ್ಷೇತ್ರ ಪ್ರಚಾರ ಸಹಾಯಕ ಪಿ.ದರ್ಶನ್ ಸೇರಿದಂತೆ ಇತರರಿದ್ದರು.

ಮತಗಟ್ಟೆಗಳ ಮೂಲಸೌಲಭ್ಯ ಪರಿಶೀಲಿಸಿ: ಜಿಲ್ಲಾಧಿಕಾರಿ ಗೋಪಾಲಕೃಷ್ಣ



ಮಂಡ್ಯ, ಫೆ.28– ವಿಧಾನಸಭಾ ಚುನಾವಣೆ–2023ಕ್ಕೆ ಸಂಬಂಧಿಸಿದಂತೆ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಮತಗಟ್ಟೆಗಳಿಗೆ ಭೇಟಿ ನೀಡಿ ಮೂಲಸೌಲಭ್ಯಗಳನ್ನು ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್ ಗೋಪಾಲಕೃಷ್ಣ ತಿಳಿಸಿದರು.

ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಬಹಳಷ್ಟು ಮತಗಟ್ಟೆಗಳು ಶಾಲೆ ಹಾಗೂ ಅಂಗನವಾಡಿಗಳಲ್ಲಿದೆ. ಮತಗಟ್ಟೆಗಳಲ್ಲಿ ಮತದಾನದ ಕೆಲಸಕ್ಕಾಗಿ ಟೇಬಲ್, ಚೇರ್, ವಿದ್ಯುತ್ ದೀಪಗಳು, ಶೌಚಾಲಯ ವ್ಯವಸ್ಥೆ, ನೀರಿನ ವ್ಯವಸ್ಥೆ ಪರಿಶೀಲಿಸಿ ಸಣ್ಣಪುಟ್ಟ ರಿಪೇರಿಗಳಿದ್ದಲ್ಲಿ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಗಮನಕ್ಕೆ ತಂದು ಸರಿಪಡಿಸಿಕೊಳ್ಳಿ. ಮತದಾನದಂದು ಗ್ರಾಪಂನಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ಮತಗಟ್ಟೆಗಳಲ್ಲಿ ನೆರಳಿನ ವ್ಯವಸ್ಥೆ ಇಲ್ಲದಿದ್ದರೆ ಶಾಮಿಯಾನದ ವ್ಯವಸ್ಥೆ ಮಾಡಬೇಕು. ಶಾಲೆಗಳಲ್ಲಿರುವ ಬೆಂಚ್‌ಗಳನ್ನು ಸರಣಿ ಸಾಲಿನಲ್ಲಿ ಜೋಡಿಸಿದರೆ ಮತದಾರರು ಕುಳಿತುಕೊಳ್ಳಲು ಸಹಾಯವಾಗುತ್ತದೆ ಎಂದರು.

ಮತಗಟ್ಟೆ ವ್ಯಾಪ್ತಿಯ ವಿಕಲಚೇತನರಿಗೆ ರ್‍ಯಾಂಪ್ ವ್ಯವಸ್ಥೆ , ವ್ಹೀಲ್‌ಚೇರ್, ಮ್ಯಾಗ್ನಿಫೈಯಿಂಗ್ ಗ್ಲಾಸ್ ಸೇರಿದಂತೆ ಇನ್ನಿತರೆ ವ್ಯವಸ್ಥೆ ಬಗ್ಗೆ ವರದಿ ನೀಡುವಂತೆ ತಿಳಿಸಿದರು. ಸಭೆಯಲ್ಲಿ ಎಸ್ಪಿ ಎನ್ ಯತೀಶ್, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಜಿಪಂ ಉಪ ಕಾರ್ಯದರ್ಶಿ ಸಂಜೀವಪ್ಪ ಸೇರಿದಂತೆ ಇನ್ನಿತರಿದ್ದರು.

ಒಂದನೇ ಪುಟದಿಂದ

ನೌಕರರ ಮುಷ್ಕರ

ಸವಲತ್ತು ಮತ್ತು 7ನೇ ವೇತನ ಆಯೋಗದ ಮಧ್ಯಂತರ ವರದಿಗೆ ಹಣ ಬಿಡುಗಡೆ ಸಂಬಂಧ ಈಗಾಗಲೇ ಘೋಷಣೆ ಮಾಡಿದ್ದಾರೆ. ಅನುಷ್ಠಾನಗೊಳಿಸಲು ಒಂದಷ್ಟು ಸಮಯಾವಕಾಶ ಬೇಕು. ತಮ್ಮ ನಿರ್ಧಾರದಿಂದ ಹಿಂದೆ ಸರಿಯುವಂತೆ ಮನವಿ ಮಾಡಿದ್ದರು. ನೌಕರರು ತಮ್ಮ ನಿಲುವಿನಿಂದ ಒಂದಿಂಚು ಹೊರಬರದ ಕಾರಣ ಮಾತುಕತೆ ವಿಫಲಗೊಂಡು ನಾಳೆಯಿಂದ ಸರ್ಕಾರಿ ಸೇವೆ ಬಂದ್ ಆಗಲಿದೆ. 5.11 ಲಕ್ಷ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಅನಿರ್ದಿಷ್ಟ ಅವಧಿ ಮುಷ್ಕರ ನಡೆಯಲಿದೆ.

ಶಾಲಾ ಕಾಲೇಜು, ತ್ಯಾಜ್ಯ ವಿಲೇವಾರಿ, ಕಂದಾಯ ಮತ್ತು ಆರೋಗ್ಯ ಸೇವೆ ಸೇರಿದಂತೆ ಎಲ್ಲವೂ ಸ್ಥಗಿತಗೊಳ್ಳಲಿದೆ. ಈ ಮುಷ್ಕರಕ್ಕೆ ಗ್ರಾಮ ಪಂಚಾಯಿತಿ ಸಿಬ್ಬಂದಿ ನಗರ ಸ್ಥಳೀಯ ಸಂಸ್ಥೆಗಳು, ಮಹಾನಗರ ಪಾಲಿಕೆಯ ಖಾಯಂ ಪೌರಕಾರ್ಮಿಕರು, ಈ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಷ್ಟೇ ಅವಕಾಶವಿರುತ್ತದೆ.

ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ತಹಶೀಲ್ದಾರ್ ಹಾಗೂ ನೋಂದಣಿ ಕಚೇರಿಗಳು ಬಂದ್ ಆಗಲಿವೆ. ಈ ಮಧ್ಯೆ ರಾಜ್ಯ ಸರ್ಕಾರಿ ನೌಕರರ ಏಳನೇ ವೇತನ ಆಯೋಗದ ಶಿಫಾರಸ್ಸುಗಳನ್ನು ನಮ್ಮ ಸರ್ಕಾರ ಬಂದರೆ ಜಾರಿಗೊಳಿಸುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಎಲ್ಲಾ ಸೇವೆ ಬಂದ್: 7ನೇ ವೇತನ ಆಯೋಗ ವರದಿ ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ನಾಳೆ (ಮಾರ್ಚ್ 01)ಯಿಂದ ಮುಷ್ಕರಕ್ಕೆ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನಾಳೆಯಿಂದ ಎಲ್ಲಾ ಸರ್ಕಾರಿ ಸೇವೆಗಳಲ್ಲಿ ವ್ಯತ್ಯಯವಾಗಲಿದೆ. ಈ ಬಗ್ಗೆ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ಬಜೆಟ್‌ನಲ್ಲಿ 7ನೇ ವೇತನ ಆಯೋಗ ಬಗ್ಗೆ ಪ್ರಸ್ತಾಪ ಮಾಡಿಲ್ಲ. ನಾಳೆಯಿಂದ(ಮಾ.01) ಸಾಮೂಹಿಕವಾಗಿ ಸರ್ಕಾರಿ ನೌಕರರು ಮುಷ್ಕರಕ್ಕೆ ಇಳಿಯಲಿದ್ದೇವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಸೇವೆಗಳು ಏಕಕಾಲದಲ್ಲಿ ಬಂದ್ ಆಗುತ್ತವೆ. ಸರ್ಕಾರ ಯಾವುದೇ ಕ್ರಮ ಕೈಗೊಂಡರೂ ನಾವು ಸ್ವಾಗತಿಸುತ್ತೇವೆ. ಯಾವುದೇ ಸಂಧಾನಕ್ಕೆ ನಾವು ಬಗ್ಗುವುದಿಲ್ಲ. 7ನೇ ವೇತನ ಆಯೋಗ ವರದಿ ಜಾರಿಯಾದರೆ ಮಾತ್ರ ಮುಷ್ಕರ ಹಿಂದಕ್ಕೆ ಪಡೆಯಲಾಗುವುದು ಎಂದು ಸ್ಪಷ್ಟಪಡಿಸಿದರು.

ಕಳೆದ ವರ್ಷ ಸಿಎಂ ವೇತನ ಪರಿಷ್ಕರಣೆ ಭರವಸೆ ನೀಡಿದ್ದರು. ಆದರೆ ಈ ತನಕ ಸಿಎಂ ಭರವಸೆ ಈಡೇರಿಸಿಲ್ಲ. ವೇತನ ಆಯೋಗ ಪರಿಶೀಲನೆ ಭರವಸೆ ನೀಡಿದೆ. ಆದರೆ ಎಲ್ಲವೂ ಚರ್ಚೆ ಹಂತದಲ್ಲಿ ಇದೆ. ನಾವು ಸರ್ಕಾರಕ್ಕೆ ಪ್ರತಿಭಟನೆ ಬಗ್ಗೆ ಗಮನಕ್ಕೆ ತಂದಿದ್ದೇವೆ. ಆದರೂ ಸರ್ಕಾರ ನಮ್ಮ ಬೇಡಿಕೆ ಬಗ್ಗೆ ಯಾವುದೇ ರೀತಿಯಲ್ಲಿ ಸ್ಪಂದಿಸಿಲ್ಲ. ನಾಳೆಯಿಂದ ರಾಜ್ಯದ ಎಲ್ಲಾ ಸರ್ಕಾರಿ ನೌಕರರು ಒಗ್ಗಟ್ಟಾಗಿ ಅನಿರ್ದಿಷ್ಟ ಅವಧಿ ಹೋರಾಟ ಮಾಡಬೇಕು. ಎಲ್ಲ ವೃಂದ ಸಂಘಗಳು ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸಾಮೂಹಿಕ ನಾಯಕತ್ವದಲ್ಲಿ ಇದನ್ನು ಮಾಡುತ್ತಿದ್ದೇವೆ. ನಾಳೆಯಿಂದ ರಾಜ್ಯದ ಎಲ್ಲಾ ಸರ್ಕಾರಿ ನೌಕರರು ಯಾವುದೇ ಗೊಂದಲ ಇಲ್ಲದೆ ಅನಿರ್ಧಾವಧಿ ಗೈರಾಗುತ್ತೇವೆ. ಮೊದಲು ಸ್ವಲ್ಪ ಗೊಂದಲ ಇತ್ತು. ಆದರೆ ಈಗ ಎಲ್ಲಾ ಸಂಘಗಳಿಂದ ಈ ಹೋರಾಟ ಮಾಡುತ್ತಿದ್ದೇವೆ. ಬಸವರಾಜ ಬೊಮ್ಮಾಯಿಯವರು ಏನೂ ಘೋಷಣೆ ಮಾಡಲಿಲ್ಲ. 2022ರಲ್ಲಿ ವೇತನ ಆಯೋಗ ರಚನೆ ಮಾಡಬೇಕು ಎಂದು ಹೇಳುತ್ತಾರೆ. ಅದಾದ ಮೇಲೆ ವೇತನ ಆಯೋಗ ರಚನೆಯಾಗಲಿಲ್ಲ. 9 ತಿಂಗಳ ಬಳಿಕ ಆಯೋಗ ರಚನೆಯಾಗಿದೆ. ಆದರೆ ಮಧ್ಯಂತರ ವರದಿ ತೆಗೆದುಕೊಂಡು ನಮಗೆ ವೇತನ ಇಂಪ್ಲಿಮೆಂಟ್ ಮಾಡಿ ಎಂದು ವಿನಂತಿ ಮಾಡಿದ್ದೆವು. ಆಗಲೂ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಆಗಿನಿಂದ ಬರೀ ಚರ್ಚೆಯಲ್ಲಿದೆ. ಬದಲಿಗೆ ಯಾವುದೇ ನಿರ್ಣಯಕ್ಕೆ ಬಂದಿಲ್ಲ ಇಡೀ ದೇಶದಲ್ಲಿ ಕಡಿಮೆ ಕನಿಷ್ಠ ವೇತನ ಪಡೆಯುವವರು ಕರ್ನಾಟಕ ರಾಜ್ಯದವರು. ಬೇರೆ ರಾಜ್ಯಗಳಲ್ಲಿ ವೇತನ ಹೆಚ್ಚಾಗಿದೆ ಇಂದು 39% ಹುದ್ದೆ ಖಾಲಿ ಇದೆ. ಇಷ್ಟೆಲ್ಲ ಕೆಲಸ ಮಾಡಿ ಅಭಿವೃದ್ಧಿಯಲ್ಲಿ 5ನೇ ಸ್ಥಾನದಲ್ಲಿದ್ದೇವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಉಪಾಧ್ಯಕ್ಷ ರುದ್ರಪ್ಪ, ರಾಜ್ಯ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ವಿವೇಕ್ ದೊರೆ, ರಾಜ್ಯ ಸರ್ಕಾರಿ ಶಾಲಾ ಕಾಲೇಜುಗಳು ಸಂಘದ ಅಧ್ಯಕ್ಷ ಶಂಭುಲಿಂಗಗೌಡ ಭಾಗಿಯಾಗಿದ್ದರು.

ಸಾರ್ವಜನಿಕ ಸೇವೆಯಲ್ಲಿ ಭಾರೀ ವ್ಯತ್ಯಯ ಸಾಧ್ಯತೆ

ಕಳೆದ ಜೂನ್ ತಿಂಗಳಿಂದಲೂ ನಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುತ್ತಾ ಬಂದಿದ್ದು, ಹಲವು ಭಾರೀ ಮುಖ್ಯಮಂತ್ರಿಗಳನ್ನೂ ಭೇಟಿ ಮಾಡಿ ಮನವಿ ಮಾಡಿದರೂ ಸರ್ಕಾರ ಪ್ರತಿಕ್ರಿಯಿಸದಿರುವುದರಿಂದ ಅನಿವಾರ್ಯವಾಗಿ ನಾವು ಮುಷ್ಕರಕ್ಕಿಳಿಯಬೇಕಾಗಿದೆ. ವೇತನ ಹೆಚ್ಚಳ ಮತ್ತು ಈ ಹಿಂದೆ ಇದ್ದಂತೆ ನಿವೃತ್ತಿ ನಂತರ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಿ ಆದೇಶ ಹೊರಡಿಸುವವರೆಗೂ ನಾವು ಮುಷ್ಕರ ಕೈಬಿಡುವುದಿಲ್ಲ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ತಿಳಿಸಿದ್ದಾರೆ.

ಜುಲೈ ತಿಂಗಳಲ್ಲಿ ಸರ್ಕಾರ ನೀಡಿದ್ದ ಭರವಸೆಯನ್ನು ಇದುವರೆಗೂ ಈಡೇರಿಸಿಲ್ಲವಾದ್ದರಿಂದ ನಾವು ಕಚೇರಿಗಳಿಗೆ ಹೋಗದೆ ಅನಿರ್ದಿಷ್ಟಾವಧಿ ಮುಷ್ಕರ ಮಾಡುತ್ತೇವೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಜೆ.ಗೋವಿಂದರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದವರೆಗೆ ಎಲ್ಲಾ ಇಲಾಖೆ, ನಗರಪಾಲಿಕೆ, ಪ್ರಾಧಿಕಾರ, ನಿಗಮ, ಮಂಡಳಿ, ನಿಗಮ, ಸ್ಥಳೀಯ ಸಂಸ್ಥೆ ಸೇರಿದಂತೆ ಮೈಸೂರು ಜಿಲ್ಲೆಯ ಗ್ರೂಪ್ 3 ಯಿಂದ ಗ್ರೂಪ್ ಡಿ ವರೆಗಿನ ಎಲ್ಲಾ 22 ಸಾವಿರ ಮಂದಿ ಸರ್ಕಾರಿ ನೌಕರರು ರಾಜ್ಯ ಸಂಘದ ಕರೆಯ ಮೇರೆಗೆ ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿದ್ದು, ಬುಧವಾರದಿಂದ ಕಚೇರಿಗಳಿಗೆ ಹಾಜರಾಗುವುದಿಲ್ಲ ಎಂದಿರುವ ಗೋವಿಂದರಾಜು, ಎಲ್ಲಾ ಇಲಾಖಾ ಮುಖ್ಯಸ್ಥರುಗಳ ಮೂಲಕ ನೌಕರರಿಗೆ ಮಾಹಿತಿ ರವಾನಿಸಿರುವುದಲ್ಲದೆ, ಜಿಲ್ಲಾ ಸಂಘದ ಪದಾಧಿಕಾರಿಗಳೊಂದಿಗೆ ಮುಷ್ಕರದ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿದೆ ಎಂದಿದ್ದಾರೆ. ಮುಷ್ಕರಕ್ಕೆ ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘವು ಬೆಂಬಲ ಸೂಚಿಸಿದ್ದು, ನಾಳೆ (ಮಾ.1) ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿ ಮುಂದೆ ಸಾಂಕೇತಿಕ ಮುಷ್ಕರ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಬಿ.ವೆಂಕಟರಾಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಓಪಿಡಿ ಬಂದ್ ಸಾಧ್ಯತೆ: ಅಪಘಾತ ಇನ್ನಿತರ ತುರ್ತು ಚಿಕಿತ್ಸೆ ಅಗತ್ಯವುಳ್ಳ ರೋಗಿಗಳು ಮತ್ತು ಒಳರೋಗಿಗಳನ್ನು ಹೊರತುಪಡಿಸಿ ಸರ್ಕಾರಿ ಆಸ್ಪತ್ರೆಗಳ ಓಪಿಡಿ ಸ್ಥಗಿತಗೊಳ್ಳಲಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು, ಕೇವಲ ತುರ್ತು ಸೇವೆ ಹೊರತುಪಡಿಸಿ ಉಳಿದೆಲ್ಲಾ ಸೇವೆಗಳನ್ನು ಸ್ಥಗಿತಗೊಳಿಸಬೇಕು. ಎಲ್ಲಾ ವೈದ್ಯಾಧಿಕಾರಿಗಳೂ ಹಾಜರಾತಿ ಹಾಕದೆ ಕೇಂದ್ರ ಸ್ಥಾನದಲ್ಲಿರಬೇಕು. ತುರ್ತು ಸೇವೆಗೆ ನಿಯೋಜಿಸಿದ ವೈದ್ಯಾಧಿಕಾರಿಗಳು ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸುವಂತೆ ಸೂಚನೆ ನೀಡಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಂಪೂರ್ಣ ಬಂದ್ ಆಗಲಿದ್ದು, ಸಮುದಾಯ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ತುರ್ತು ಸೇವೆ ಲಭ್ಯವಾಗಲಿದೆ. 108 ಆಂಬುಲೆನ್ಸ್ ಸೇವೆ ಎಂದಿನಂತೆ ಇರಲಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಎಂದಿನಂತೆ ಮೈಮುಲ್: ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳ ನೌಕರರೂ ಮುಷ್ಕರಕ್ಕೆ ಬೆಂಬಲ ನೀಡಿದ್ದಾರೆ. ಆದರೆ ಮೈಮುಲ್ ನೌಕರು ಎಂದಿನಂತೆ ಕಾರ್ಯ ನಿರ್ವಹಿಸುವ ಸಾಧ್ಯತೆ ಇದೆ. ಹಾಲು ಸರಬರಾಜು ಅತ್ಯವಶ್ಯ ಸೇವೆಯಾಗಿರುವುದರಿಂದ ಕಪ್ಪುಪಟ್ಟು ಧರಿಸಿ ಕರ್ತವ್ಯ ನಿರ್ವಹಿಸುವ ಸಾಧ್ಯತೆ ಇದೆ. ಈ ಸಂಬಂಧ ರಾಜ್ಯ ಸಂಘಟನೆಯಿಂದ ಯಾವುದೇ ಸೂಚನೆ ಬಂದಿಲ್ಲ. ಹಾಗಾಗಿ ಅತ್ಯವಶ್ಯ ಸೇವೆಯಾಗಿರುವ ಕಾರಣ ಎಂದಿನಂತೆ ಕಾರ್ಯ ನಿರ್ವಹಿಸಲಿದ್ದೇವೆ ಎಂದು ಮೈಮುಲ್ ನೌಕರು ಸಂಘದ ನಾಗರಾಜು ತಿಳಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳು: ಮೈಸೂರು ನಗರ ಪಾಲಿಕೆ ನೌಕರರು ನಾಳೆ(ಮಾ.1)ರಂದು ಕಚೇರಿ ಆವರಣದಲ್ಲಿ ಸಮಾವೇಶಗೊಳ್ಳಬೇಕು. ಆದರೆ ಯಾವುದೇ ಘೋಷಣೆ ಕೂಗದೆ ಶಾಂತಯುತವಾಗಿ ಮುಷ್ಕರಕ್ಕೆ ಬೆಂಬಲಿಸಬೇಕೆಂದು ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘ ಸೂಚನೆ ನೀಡಿದೆ. ಹಾಗೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಘವೂ ಬೆಂಬಲ ಸೂಚಿಸಿ, ಮುಷ್ಕರಕ್ಕೆ ಸಹಕಾರ ನೀಡುವಂತೆ ಮುಡಾ ಆಯುಕ್ತರಿಗೂ ಮನವಿ ನೀಡಲಾಗಿದೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ಕಾರ್ಯದರ್ಶಿ ಉಮೇಶ್ ತಿಳಿಸಿದ್ದಾರೆ. ತಾಲೂಕು ಕಚೇರಿ, ಉಪನೋಂದಣಾಧಿಕಾರಿ ಕಚೇರಿ ಸೇರಿದಂತೆ ಕಂದಾಯ ಇಲಾಖೆ ವ್ಯಾಪ್ತಿಯ ಎಲ್ಲಾ ಕಚೇರಿಗಳ ನೌಕರರೂ ಸಾಮೂಹಿಕವಾಗಿ ಗೈರಾಗುವ ಮೂಲಕ ಬೆಂಬಲಿಸಲು ಒಪ್ಪಿದ್ದಾರೆ ಎಂದು ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಮಹೇಶ್ ತಿಳಿಸಿದ್ದಾರೆ.

ಶಾಲಾ–ಕಾಲೇಜು ಬಂದ್?: ಎಂದಿನಂತೆ ಶಾಲಾ–ಕಾಲೇಜು ತರಗತಿಗಳನ್ನು ನಡೆಸುವಂತೆ ಶಿಕ್ಷಣ ಇಲಾಖೆ ಮೇಲಧಿಕಾರಿಗಳು ಸೂಚನೆ ನೀಡಲಾಗಿದ್ದರೂ ಸಾಮೂಹಿಕ ಗೈರಾಗಲು ನಿರ್ಧರಿಸಿರುವ ಕಾರಣ ತರಗತಿ ನಡೆಯುವುದು ಅನುಮಾನ. ಜಿಲ್ಲೆಯಲ್ಲಿ ಸುಮಾರು 7 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರಿದ್ದು, ಎಲ್ಲರೂ ಗೈರಾಗಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸೋಮೇಗೌಡ ಪ್ರತಿಕ್ರಿಯಿಸಿ ಸಾಮೂಹಿಕ ಗೈರಾಗುವ ಮೂಲಕ ಮುಷ್ಕರ ಬೆಂಬಲಿಸಲಾಗುವುದು ಎಂದು ತಿಳಿಸಿದ್ದಾರೆ.

ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯುತ್ತಿದ್ದು ನಾಳೆ(ಮಾ.1) ಅಕೌಂಟೆನ್ಸಿ ಇನ್ನಿತರ ವಿಷಯಗಳ ಪರೀಕ್ಷೆ ನಿಗದಿಯಾಗಿದೆ. ಆದರೆ ಮುಷ್ಕರದ ಕಾರಣ ಪರೀಕ್ಷೆ ಮುಂದೂಡಲು ಈಗಾಗಲೇ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಮನವಿ ನೀಡಲಾಗಿದೆ. ಹಾಗೆಯೇ ಎಲ್ಲಾ ಉಪನ್ಯಾಸಕರೂ ಸಾಮೂಹಿಕವಾಗಿ ಗೈರಾಗಲಿದ್ದೇವೆ ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮಹದೇವ್ ಸ್ಪಷ್ಟಪಡಿಸಿದ್ದಾರೆ. ಪದವಿ ಕಾಲೇಜು ಅಧ್ಯಾಪಕರೂ ಮುಷ್ಕರಕ್ಕೆ ಬೆಂಬಲ ನೀಡಲಿದ್ದಾರೆ ಎಂದು ಕರ್ನಾಟಕ ರಾಜ್ಯ ಎನ್‌ಪಿಸಿ ನೌಕರರ ಸಂಘದ ನಗರಾಧ್ಯಕ್ಷ ಶಿವಕುಮಾರ್ ತಿಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘವೂ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಲು ನಿರ್ಣಯ ಕೈಗೊಂಡಿದೆ ಎಂದು ಸಂಘದ ಅಧ್ಯಕ್ಷ ಮೆರವಣ್ಣ ಹಾಗೂ ಕಾರ್ಯದರ್ಶಿ ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂಮಾಪನ, ಸರ್ಕಾರಿ ಇಲಾಖೆಗಳ ವಾಹನ ಚಾಲಕರು, ಮುಖ್ಯ ಶಿಕ್ಷಕರ ಸಂಘ, ಅಬಕಾರಿ, ವಾಣಿಜ್ಯ ತೆರಿಗೆ, ಪಶುಸಂಗೋಪನೆ, ಖಜಾನೆ ಇಲಾಖೆ, ಗ್ರೂಪ್ 'ಡಿ' ನೌಕರರ ಸಂಘ ಸೇರಿದಂತೆ 38 ವೃಂದ ಸಂಘದ ನೌಕರರೂ ಕೂಡ ಮುಷ್ಕರದಲ್ಲಿ ಭಾಗಿಯಾಗಲಿದ್ದಾರೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ತಿಳಿಸಿದ್ದಾರೆ.

ಸಾರಿಗೆ ನೌಕರರಿಂದ ಮುಷ್ಕರಕ್ಕೆ ಬಾಹ್ಯ ಬೆಂಬಲ: ಕೆಎಸ್‌ಆರ್‌ಟಿಸಿ ಬಸ್ ಚಾಲಕರು, ನಿರ್ವಾಹಕರು ಹಾಗೂ ಸಿಬ್ಬಂದಿಗಳೂ ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ರಾಜ್ಯ ಸರ್ಕಾರಿ ನೌಕರರ ಸಂಘವು ಮನವಿ ಮಾಡಿದೆಯಾದರೂ, ಅವರು ಭಾಗವಹಿಸುತ್ತಿಲ್ಲ. ಎಂದಿನಂತೆ ಕರ್ತವ್ಯ ನಿರ್ವಹಿಸುವ ಮೂಲಕ ಬಾಹ್ಯ ಬೆಂಬಲ ನೀಡುತ್ತಾರೆ ಎಂದು ಸಂಸ್ಥೆಯ ಹಿರಿಯ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮುಷ್ಕರದಿಂದಾಗಿ ಕಂದಾಯ, ನೀರಾವರಿ, ಕೃಷಿ, ಆರೋಗ್ಯ, ನಗರಾಭಿವೃದ್ಧಿ, ಶಿಕ್ಷಣ, ಸಮಾಜ ಕಲ್ಯಾಣ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆ ಕಚೇರಿ ಕೆಲಸದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಚುನಾವಣಾ ಪ್ರಕ್ರಿಯೆ ಪೂರ್ವ ತಯಾರಿ ಕೆಲಸಕ್ಕೂ ಹಿನ್ನಡೆಯಾಗುವ ಸಾಧ್ಯತೆ ಇದೆ.

> "ರಾಜ್ಯ ಸರ್ಕಾರಿ ನೌಕರರ ಸಂಘ ಕರೆ ನೀಡಿರುವ ಮುಷ್ಕರ ಬೆಂಬಲಿಸಿ, ಕರ್ತವ್ಯಕ್ಕೆ ಗೈರು ಹಾಜರಾಗುವುದಾಗಿ ಹಾಗೂ ಯಾವುದೇ ಶೈಕ್ಷಣಿಕ ಚಟುವಟಿಕೆಗಳಲ್ಲಿ ಅನಿರ್ದಿಷ್ಟಾವಧಿವರೆಗೆ ಪಾಲ್ಗೊಳ್ಳುವುದಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಲಿಖಿತ ಮನವಿ ಮಾಡಿದ್ದಾರೆ. ಆದರೆ, ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಅನುಮತಿ ನಿರಾಕರಿಸಿದ್ದು, ಎಂದಿನಂತೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ನಡೆಸಲು ಕ್ರಮ ಕೈಗೊಳ್ಳುವಂತೆ ಆಯಾಯ ಬಿಇಓಗಳಿಗೆ ಸೂಚಿಸಲಾಗಿದೆ. ಆದರೂ ಶಿಕ್ಷಕರು ನಾಳೆ(ಬುಧವಾರ)ಕರ್ತವ್ಯಕ್ಕೆ ಗೈರು ಹಾಜಾರಾದರೆ, ಈ ಕುರಿತು ನಮ್ಮ ಇಲಾಖೆ ಆಯುಕ್ತರಿಗೆ ವರದಿ ಮಾಡಲಾಗುವುದು. ಅಲ್ಲದೆ, ಮಾ.1ರಂದು ನಡೆಯಲಿರುವ 10ನೇ ತರಗತಿ ಪೂರ್ವ ಸಿದ್ಧತಾ ಪರೀಕ್ಷೆಯನ್ನು ಮಾಮೂಲಿನಂತೆ ನಡೆಸಲು ಸೂಚಿಸಲಾಗಿದೆ. –ರಾಮಚಂದ್ರರಾಜೇ ಅರಸ್
> ಡಿಡಿಪಿಐ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

7ನೇ ವೇತನ ಆಯೋಗದ ಮಧ್ಯಂತರ ವರದಿ ಅನುಷ್ಠಾನ



ಬೆಂಗಳೂರು, ಫೆ. 28(ಕೆಎಂಶಿ)– 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ಅನುಷ್ಠಾನ ಮಾಡಲಾಗುವುದು ಎಂದು ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಸುದ್ದಿ ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಈ ವರ್ಷದ ಬಜೆಟ್‌ನಲ್ಲಿ ನಾವು 7ನೇ ವೇತನ ಆಯೋಗದ ವರದಿಗಾಗಿಯೇ ಹಣ ಮೀಸಲಿಟ್ಟಿದ್ದೇವೆ. ಆಯೋಗದ ಮಧ್ಯಂತರ ವರದಿ ಪಡೆದುಕೊಂಡ ನಂತರ ಅದನ್ನು ಅನುಷ್ಠಾನ ಮಾಡುತ್ತೇವೆ ಎಂದು ಹೇಳಿದರು. ಬಸವರಾಜ ಬೊಮ್ಮಾಯಿ ಅವರು 7ನೇ ವೇತನ ಆಯೋಗದ ಜಾರಿಗೆ ತರುವುದಾಗಿ ಮತ್ತೊಮ್ಮೆ ಪುನರುಚ್ಚರಿಸಿದ್ದು, ನಾಳೆ ನಡೆಯುವ ಸರ್ಕಾರಿ ನೌಕರರ ಪ್ರತಿಭಟನೆ ತಡೆಯಲು ಮುಂದಾಗಿದ್ದಾರೆ. ಸರ್ಕಾರಿ ನೌಕರರು 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ಅದನ್ನು ಪರಿಷ್ಕರಣೆ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಸರ್ಕಾರಿ ನೌಕರರ ಒತ್ತಾಯವನ್ನು ನಮ್ಮ ಸರ್ಕಾರ ಒಪ್ಪಿದೆ. ಈ ಕೂಡಲೇ ನಾವು ಆಯೋಗ ಮಧ್ಯಂತರ ವರದಿ ಪಡೆದು ಅದರ ಅನುಷ್ಠಾನಕ್ಕೆ ಸಿದ್ಧರಿದ್ದೇವೆ ಎಂದು ಭರವಸೆಯ ಮಾತುಗಳನ್ನಾಡಿದರು.

ವೇತನ ಪರಿಷ್ಕರಣೆಗೆ ಆಗ್ರಹಿಸಿ ಸರ್ಕಾರಿ ನೌಕರರು ಬುಧವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ. ಜತೆಗೆ ಹೊಸ ಪಿಂಚಣಿ ನೀತಿ (ಎನ್‌ಪಿಎಸ್) ರದ್ಧತಿಗೆ ಆಗ್ರಹಿಸಿ 5.11 ಲಕ್ಷ ನೌಕರರು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಇಳಿಯಲಿದ್ದಾರೆ.

ಇದರಿಂದ ಸರ್ಕಾರಿ ಶಾಲೆ–ಕಾಲೇಜುಗಳು ಸೇರಿದಂತೆ ಅನೇಕ ಕಚೇರಿಗಳಿಗೆ ಬೀಗ ಬೀಳಲಿದೆ. ಈ ಮೂಲಕ ಸಾರ್ವಜನಿಕರ ಪಾಲಿಗೆ ನಾಳೆ 'ಸರ್ಕಾರಿ ರಜಾ ದಿನ' ಎನ್ನಲಾಗಿದೆ. ಆದರೆ, ಬಸವರಾಜ ಬೊಮ್ಮಾಯಿ ಅವರು 7ನೇ ವೇತನ ಆಯೋಗ ಜಾರಿಯ ಭರವಸೆ ನೀಡುವ ಮೂಲಕ ನೌಕರರ ಪ್ರತಿಭಟನೆ ತಪ್ಪಿಸುವ ಯತ್ನ ಮಾಡಿದ್ದಾರೆ.

40 ಕಿಲೋಮೀಟರ್ ಪ್ರಯಾಣಕ್ಕೆ 2 ಗಂಟೆ

ಲೋಕೋಪಯೋಗಿ ಸಚಿವರ ತವರಿನಲ್ಲೇ ರಸ್ತೆ ಸರಿಯಿಲ್ಲ: ಸಿದ್ದರಾಮಯ್ಯ ವಾಗ್ದಾಳಿ



ಗದಗ, ಫೆ.28– ರಸ್ತೆ ಸರಿಯಿಲ್ಲದ ಹಿನ್ನೆಲೆಯಲ್ಲಿ ನಾವು ತಡವಾಗಿ ಬಂದಿದ್ದೇವೆ ಕ್ಷಮಿಸಬೇಕು. ಲೋಕೋಪಯೋಗಿ ಸಚಿವರ ಕ್ಷೇತ್ರದಲ್ಲೇ ರಸ್ತೆ ಸರಿಯಿಲ್ಲ. 40 ಕಿಲೋಮೀಟರ್ ದೂರ ಪ್ರಯಾಣಿಸಲು 2 ಗಂಟೆ ಬೇಕಾಯಿತು. ಇನ್ನು ರಾಜ್ಯದ ರಸ್ತೆಗಳು ಯಾವ ರೀತಿ ಇರಬಹುದು ನೀವೇ ಊಹಿಸಿ ಎಂದು ಹೇಳುವ ಮೂಲಕ ಸಿ.ಸಿ.ಪಾಟೀಲ್ ಅವರನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಟೀಕಿಸಿದರು. ಪಾಟೀಲ್ ಕ್ಷೇತ್ರವಾಗಿರುವ ನರಗುಂದದಲ್ಲಿ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಮಾತನಾಡಿದ ಅವರು, ನಿಮ್ಮ ಕ್ಷೇತ್ರದ ರಸ್ತೆ ಸರಿಮಾಡಿಕೊಳ್ಳಿ ಎಂದು ಸಿ.ಸಿ.ಪಾಟೀಲ್‌ಗೆ ಹೇಳಿದ್ದೆ. ಆದರೆ ಸಚಿವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಚುನಾವಣೆ ಬಂದಿರುವುದರಿಂದ ಈಗ ರಸ್ತೆ ಕಾಮಗಾರಿ ಆರಂಭ ಮಾಡಿದ್ದಾರೆ. ಸಿ.ಸಿ.ಪಾಟೀಲ್ ತಮ್ಮ ಕಾರ್ಯಕರ್ತರಿಗೆ ಕಾಮಗಾರಿ ಗುತ್ತಿಗೆ ನೀಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಎಂದಿನಂತೆ 40% ಕಮಿಷನ್ ಬಗ್ಗೆ ಮಾತನಾಡಿದ ಸಿದ್ದರಾಮಯ್ಯ, ಕಳೆದ ಚುನಾವಣೆ ವೇಳೆ ಪ್ರಧಾನಿ ಮೋದಿ ಅವರು ಕಾಂಗ್ರೆಸ್ ಸರ್ಕಾರವನ್ನು 10 ಪರ್ಸೆಂಟ್ ಸರ್ಕಾರವೆಂದು ಆರೋಪಿಸಿದ್ದರು. ಆದರೆ, ಈಗ ರಾಜ್ಯದಲ್ಲಿರುವುದು 40 ಪರ್ಸೆಂಟ್ ಕಮಿಷನ್ ಸರ್ಕಾರ. ರಾಜ್ಯದಲ್ಲಿರುವುದು ಆಲಿಬಾಬಾ ಮತ್ತು 40 ಕಳ್ಳರ ಸರ್ಕಾರ. ಅದರಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಕೂಡ ಒಬ್ಬರು ಎಂದರು.

ರೈತರಿಗೆ 8 ಗಂಟೆ ತ್ರೀಫೇಸ್ ವಿದ್ಯುತ್: 2018ರ ಚುನಾವಣೆ ವೇಳೆ ಅಪಪ್ರಚಾರ ಮಾಡಿ ನಮ್ಮನ್ನು ಸೋಲಿಸಿದ್ದರು. ಆದರೆ ಈ ಬಾರಿ ಈ ಬಾರಿ ಅಪಪ್ರಚಾರಕ್ಕೆ ಒಳಗಾಗಬೇಡಿ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ರೈತರಿಗೆ 8 ಗಂಟೆ ತ್ರೀಫೇಸ್ ವಿದ್ಯುತ್ ನೀಡುವುದಾಗಿ ಸಿದ್ದರಾಮಯ್ಯ ಘೋಷಣೆ ಮಾಡಿದರು.

ರೋಣ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಜಿ.ಎಸ್.ಪಾಟೀಲ್‌ಗೆ ಫಿಕ್ಸ್: ರೋಣ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಜಿ.ಎಸ್.ಪಾಟೀಲ್‌ಗೆ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಜಿ.ಎಸ್.ಪಾಟೀಲ್ ಗೆಲ್ಲಿಸಿದರೆ ನನ್ನನ್ನು ಗೆಲ್ಲಿಸಿದಂತೆ. 50,000 ಮತಗಳ ಅಂತರದಲ್ಲಿ ಜಿ.ಎಸ್.ಪಾಟೀಲ್ ಗೆಲ್ಲಿಸುವಂತೆ ಮನವಿ ಮಾಡಿದರು. ಅಲ್ಲದೆ, ಕ್ಷೇತ್ರದಲ್ಲಿ ಕುರುಬ ಸಮುದಾಯದ ವೋಟ್ ಒಡೆಯಲು ಯತ್ನ ಆಗುತ್ತಿದೆ. ಅದಕ್ಕೆ ಅವಕಾಶ ನೀಡದೆ ಜಿ.ಎಸ್.ಪಾಟೀಲ್ ಅವರನ್ನು ಗೆಲ್ಲಿಸಬೇಕು. ಯಾರೋ ದೊಡ್ಡಯ್ಯ ಪಡ್ಡಯ್ಯಗೆ ಮತ ಹಾಕಬೇಡಿ. ಜಿಲ್ಲೆಯಲ್ಲಿ ನಾಲ್ಕು ಕ್ಷೇತ್ರಗಳನ್ನು ಗೆಲ್ಲಿಸಿಕೊಡಿ ಎಂದರು.

ಪಾಲಿಶ್ ನೆಪದಲ್ಲಿ ಚಿನ್ನ ಕರಗಿಸಿ ವಂಚಿಸುತ್ತಿದ್ದ ಮೂವರ ಬಂಧನ

ಬಿಹಾರ ಮೂಲದ ಬಂಧಿತರಿಂದ 15 ಗ್ರಾಂ ಚಿನ್ನ, ಪಾಲಿಶ್ ಸಾಮಗ್ರಿ ವಶ





ಕುಶಾಲನಗರ/ಮಡಿಕೇರಿ, ಫೆ.28– ಚಿನ್ನಾಭರಣ ಪಾಲಿಶ್ ಮಾಡುವ ನೆಪದಲ್ಲಿ ಸ್ವಲ್ಪ ಪ್ರಮಾಣದ ಚಿನ್ನವನ್ನು ಕರಗಿಸಿ ದೋಚುವ ಮೂಲಕ ಸಾರ್ವಜನಿಕರನ್ನು ವಂಚಿಸುತ್ತಿದ್ದ ಮೂವರನ್ನು ಕುಶಾಲನಗರ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಮಧೇಪುರ್ ಜಿಲ್ಲೆಯ ಲಾಟಗಾಂವ್ ಗ್ರಾಮದ ರಾಜಕುಮಾರ(29), ಬಿಹಾರದ ಪೂರ್ಣಿಯಾ ಜಿಲ್ಲೆಯ ಬಿಜುಡಿ ಗ್ರಾಮದ ಪ್ರವೀಣ್ ಕುಮಾರ(32) ಹಾಗೂ ಬಿಹಾರದ ಸಿಪೋರ್ ಜಿಲ್ಲೆಯ ಪ್ರತಾಪ್‌ಗಂಜ್ ಗ್ರಾಮದ ಲಲನ್ ಕುಮಾರ್(26) ಬಂಧಿತ ಆರೋಪಿಗಳು. ಆರೋಪಿಗಳಿಂದ 15 ಗ್ರಾಂ ಚಿನ್ನ ಹಾಗೂ ಪಾಲಿಶ್ ಮಾಡಲು ಬಳಸುತ್ತಿದ್ದ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ.

ಪ್ರಕರಣ ಹಿನ್ನೆಲೆ: ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಿನ್ನಾಭರಣ ಪಾಲಿಶ್ ಮಾಡುವ ನೆಪದಲ್ಲಿ ಮನೆ ಮನೆಗಳಿಗೆ ತೆರಳಿ ಆ್ಯಸಿಡ್ ಹಾಗೂ ಪಾಲಿಶ್ ಸಾಮಗ್ರಿಗಳನ್ನು ಬಳಸಿ ಸ್ವಲ್ಪ ಮಟ್ಟಿನ ಚಿನ್ನವನ್ನು ಕರಗಿಸಿ ದೋಚಿ ಮಾಡುತ್ತಿರುವ ಬಗ್ಗೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಕುರಿತು ಕುಶಾಲನಗರ ವೃತ್ತ ನಿರೀಕ್ಷಕ ಬಿ.ಜಿ. ಮಹೇಶ್, ಗ್ರಾಮಾಂತರ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಡಿ.ಎಸ್.ಪುನೀತ್, ದಿನೇಶ್ ಕುಮಾರ್ ಹಾಗೂ ಸಿಬ್ಬಂದಿಗಳನ್ನು ಒಳಗೊಂಡ ಒಂದು ತಂಡ ರಚಿಸಲಾಗಿತ್ತು.

ಫೆ.25ರಂದು ಕುಶಾಲನಗರದ ಹೆಬ್ಬಾಲೆ ಗ್ರಾಮದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ತಿರುಗಾಡುತ್ತಿದ್ದ 3 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಸಂದರ್ಭ ಪಾಲಿಶ್ ನೆಪದಲ್ಲಿ ಸಾರ್ವಜನಿಕರಿಗೆ ವಂಚಿಸಿ ಸ್ವಲ್ಪ ಪ್ರಮಾಣದ ಚಿನ್ನ ಕಳವು ಮಾಡುತ್ತಿದ್ದ ವಿಚಾರ ಬೆಳಕಿಗೆ ಬಂದಿದೆ. ಆರೋಪಿಗಳಿಂದ 15 ಗ್ರಾಂ ಚಿನ್ನ ಹಾಗೂ ಪಾಲಿಶ್ ಮಾಡುವ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಎಚ್ಚರ ಅಗತ್ಯ: ಮನೆ ಮನೆಗೆ ಆಗಮಿಸಿ ಚಿನ್ನಾಭರಣ ಪಾಲಿಶ್ ಮಾಡುವುದಾಗಿ ಹೇಳುವ ವ್ಯಕ್ತಿಗಳ ಬಗ್ಗೆ ಎಚ್ಚರ ವಹಿಸಬೇಕು. ಪಾಲಿಶ್ ಹಾಗೂ ಇತರೆ ಕಾರ್ಯಗಳಿಗೆ ಸ್ಥಳೀಯ ಅಧಿಕೃತ ಜ್ಯುವೆಲ್ಲರಿ ಅಂಗಡಿಗಳಲ್ಲಿ ಮಾಡಿಸುವಂತೆ ಪೊಲೀಸ್ ಇಲಾಖೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಚಿನ್ನಾಭರಣಗಳನ್ನು ಪಡೆದು ಪಾಲಿಶ್ ಮಾಡುವ ನೆಪದಲ್ಲಿ ಚಿನ್ನ ಕರಗಿಸಿ ವಂಚಿಸುವ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಸಹಕರಿಸುವಂತೆ ಇಲಾಖೆ ಪ್ರಕಟಣೆ ನೀಡಿದೆ.

ಕೊಡಗು ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ. ರಾಮರಾಜನ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರರಾಜು ಕೆ.ಎಸ್. ಅವರ ನಿರ್ದೇಶನದಂತೆ ಸೋಮವಾರಪೇಟೆ ಉಪವಿಭಾಗದ ಉಪ ಅಧೀಕ್ಷಕ ಆರ್.ವಿ. ಗಂಗಾಧರಪ್ಪನವರ ಮಾರ್ಗದರ್ಶನದಲ್ಲಿ ಕುಶಾಲನಗರ ವೃತ್ತ ನಿರೀಕ್ಷಕ ಮಹೇಶ್ ಬಿ.ಜಿ., ಪಿಎಸ್ಐ ಪುನೀತ್, ದಿನೇಶ್‌ಕುಮಾರ್, ಎಎಸ್ಐ ವೆಂಕಟೇಶ್, ಸಿಬ್ಬಂದಿಗಳಾದ ದಿನೇಶ್, ನಾಗರಾಜ್, ಪ್ರಕಾಶ್, ಸಂದೇಶ್, ಶಾಹಿನ್ ಅಹಮ್ಮದ್, ರಂಜಿತ್ ಅವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಈ ಪ್ರಕರಣವನ್ನು ಪತ್ತೆಹಚ್ಚಿದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಪೊಲೀಸ್ ಅಧೀಕ್ಷಕರು ನಗದು ಬಹುಮಾನವನ್ನು ಘೋಷಿಸಿದ್ದಾರೆ.

ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕಿಗೆ 100ರ ಸಂಭ್ರಮ

ಮಾ.6ರಂದು ಶತಮಾನೋತ್ಸವ ಸಮಾರಂಭ



ವಿರಾಜಪೇಟೆ, ಫೆ.28– ವಿರಾಜಪೇಟೆಯ ಪಟ್ಟಣ ಸಹಕಾರ ಬ್ಯಾಂಕಿನ ಸದಸ್ಯರು, ಆಡಳಿತ ಮಂಡಳಿ, ನಿರ್ದೇಶಕರು ಮತ್ತು ಸಿಬ್ಬಂದಿಗಳ ಸಹಕಾರದಿಂದ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಉತ್ತಮ ಪ್ರಗತಿ ಸಾಧಿಸಿದೆ. ಇದೀಗ ಈ ಬ್ಯಾಂಕ್ ನೂರು ವರ್ಷ ಪೂರೈಸಿದ್ದು, ಮಾ.6 ರಂದು ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಶತಮಾನೋತ್ಸವ ಆಚರಿಸಲಾಗುವುದು ಎಂದು ಪಟ್ಟಣ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಕರ್ನಂಡ ಸೋಮಯ್ಯ ತಿಳಿಸಿದ್ದಾರೆ.

ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅರ್‌ಜಿಎನ ನಿಯಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕ್ ಒಟ್ಟು 3804 ಸದಸ್ಯರನ್ನು ಹೊಂದಿದ್ದು, 2,18,75,530 ರೂ. ಬಂಡವಾಳ ಹೊಂದಿದೆ ಎಂದರು.

ಮಾಜಿ ಅಧ್ಯಕ್ಷ ಹಾಗೂ ನಿರ್ದೇಶಕ ಕೊಲತಂಡ ಬೋಪಯ್ಯ ಮಾತನಾಡಿ, 10.02.1922ರಲ್ಲಿ ಪಿ.ಎಫ್. ಪಿಂಟೋ ಪ್ರಥಮವಾಗಿ ಸಹಕಾರ ಸಂಘವನ್ನು ಪ್ರಾರಂಭಿಸಿದರು. ತದ ನಂತರದಲ್ಲಿ ಸದಸ್ಯರ ಹಾಗೂ ಗ್ರಾಹಕರ ಅನುಕೂಲಕ್ಕಾಗಿ ಬ್ಯಾಂಕಾಗಿ ಪರಿವರ್ತನೆ ಮಾಡಲಾಯಿತು ಎಂದರು.

ಬ್ಯಾಂಕ್ ನಿರ್ದೇಶಕ ಮಾದೇಯಂಡ ಸಂಪಿಪೊಣ್ಣಚ್ಚ ಮಾತನಾಡಿ, ಶತಮಾನೋತ್ಸವ ಸಮಾರಂಭದಲ್ಲಿ ಬ್ಯಾಂಕ್ ಅಧ್ಯಕ್ಷ ಕರ್ನಂಡ ಸೋಮಯ್ಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ನವೀಕೃತಗೊಂಡಿರುವ ಬ್ಯಾಂಕ್‌ನ ಕೋಣೆಯನ್ನು ಸಹಕಾರ ಸಚಿವ ಎಸ್.ಟಿ ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಸಭಾ ಕಾರ್ಯಕ್ರಮವನ್ನು ಶಾಸಕ ಕೆ.ಜಿ. ಬೋಪಯ್ಯ ನೆರವೇರಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ಸಹಕಾರ ಸಂಘಗಳ ಉಪನಿಬಂಧಕ ಎಂ.ಎಸ್ ಕೃಷ್ಣಪ್ರಸಾದ್, ಸಹಕಾರ ಸಂಘಗಳ ಸಹಾಯಕ ಎಂ.ಇ ಮೋಹನ್, ಸಹಕಾರ ಅಭಿವೃದ್ಧಿ ಅಧಿಕಾರಿ ಎಂ.ಎಸ್ ಮೋಹನ್ ಭಾಗವಹಿಸಲಿದ್ದಾರೆ. ಸಭೆಯಲ್ಲಿ ಹಾಲಿ ಅಧ್ಯಕ್ಷ ಕರ್ನಂಡ ಸೋಮಯ್ಯ, ಮಾಜಿ ಅಧ್ಯಕ್ಷ ಮೇರಿಯಂಡ ಪೂವಯ್ಯ ಹಾಗೂ ಕೊಲತಂಡ ಬೋಪಯ್ಯ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಕೆ.ಎಂ ಚರ್ಮಣ, ನಿರ್ದೇಶಕರುಗಳಾದ ಎಂ.ಎಂ. ನಂಜಪ್ಪ, ಎ.ಪಿ. ಪ್ರಸನ್ನ, ಕೆ.ಪಿ. ಪ್ರಕಾಶ್, ಪಿ.ಎಂ. ರಾಹ್, ಎಂ.ಪಿ. ಕಾವೇರಪ್ಪ ವಿ.ಪಿ. ರಮೇಶ್, ಎಂ.ಕೆ. ದೇವಯ್ಯ, ಪಿ.ಕೆ. ಅಬ್ದುಲ್‌ರೆಹಮಾನ್, ಹೆಚ್.ಸಿ. ಮುತ್ತಪ್ಪ ಎಸ್.ಜಿ ಜಮುನಾ, ಪಿ.ಎಂ. ಕಾವೇರಮ್ಮ, ವ್ಯವಸ್ಥಾಪಕ ಸಿ.ಕೆ. ಪೂವಯ್ಯ ಅವರುಗಳು ಭಾಗವಹಿಸಿದ್ದರು.

ನಾಳೆ ರೆಡ್‌ಕ್ರಾಸ್‌ನ ಸುಸಜ್ಜಿತ ಮೊಬೈಲ್ ಘಟಕಕ್ಕೆ ಚಾಲನೆ

ಮಡಿಕೇರಿ, ಫೆ.28– ಭಾರತೀಯ ರೆಡ್‌ಕ್ರಾಸ್‌ನ ಕೊಡಗು ಘಟಕದ ವತಿಯಿಂದ ಸುಸಜ್ಜಿತ ವೈದ್ಯಕೀಯ ತಪಾಸಣಾ ಬಸ್‌ನ್ನು ಮಾ.2ರಂದು ಗುರುವಾರ ಲೋಕಾರ್ಪಣೆ ಮಾಡಲಾಗುವುದು.

ಮಡಿಕೇರಿಯ ಗಾಂಧಿ ಮಂಟಪದ ಆವರಣದಲ್ಲಿ ಮಾ.2ರಂದು ಬೆಳಿಗ್ಗೆ 9 ಗಂಟೆಗೆ 75 ಲಕ್ಷ ರೂ. ಮೌಲ್ಯದ ಸುಸಜ್ಜಿತ ಮೊಬೈಲ್ ಘಟಕವನ್ನು ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮತ್ತು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ರೆಡ್‌ಕ್ರಾಸ್ ಸ್ಥಾಪಕ್ಷರೂ ಆಗಿರುವ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ನಗರಸಭಾಧ್ಯಕ್ಷೆ ಅನಿತಾ ಪೂವಯ್ಯ, ಜಿಪಂ ಸಿಇಒ ಡಾ. ಎಸ್.ಆಕಾಶ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸತೀಶ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಡಾ.ಕಾರ್ಯಪ್ಪ, ರೆಡ್‌ಕ್ರಾಸ್ ಕೊಡಗು ಘಟಕದ ಸಭಾಪತಿ ಬಿ.ಕೆ.ರವೀಂದ್ರ ರೈ, ಉಪಾಧ್ಯಕ್ಷ ಅನಿಲ್ ಎಚ್.ಟಿ, ಕಾರ್ಯದರ್ಶಿ ಮುರಳೀಧರ್ ಇತರರು ಪಾಲ್ಗೊಳ್ಳಲಿದ್ದಾರೆ.

ಮಾ.16ರಿಂದ ಹುಂಡಿಯಲ್ಲಿ ರಾಷ್ಟ್ರಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ



ಗೋಣಿಕೊಪ್ಪ, ಫೆ.28– ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಹಾಗೂ ಹುಂಡಿ ಯೂತ್ ಫ್ರೆಂಡ್ಸ್ ಸಹಯೋಗದಲ್ಲಿ ಮಾ.16 ಮತ್ತು 17 ರಂದು ಹುಂಡಿ ಗ್ರಾಮದಲ್ಲಿ ರಾಷ್ಟ್ರಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಟೂರ್ನಿ ಸಂಚಾಲಕ ಶಾಫಿ ತಿಳಿಸಿದ್ದಾರೆ.

ದೇಶದ 8 ತಂಡಗಳಿಗೆ ಮಾತ್ರ ಭಾಗವಹಿಸಲು ಅವಕಾಶ ನೀಡಲಾಗುತ್ತಿದ್ದು, ವೀಕ್ಷಕರಿಗೆ ಕುತೂಹಲ ಮೂಡಿಸಲಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 10ರೊಳಗೆ ಹೆಸರು ನೋಂದಾಯಿಸಿಕೊಳ್ಳಲು ಅವಕಾಶವಿದೆ. ರೊಟೇಶನ್ ನಿಯಮದಲ್ಲಿ ಪಂದ್ಯ ನಡೆಯಲಿದೆ. ಬಲಿಷ್ಠ ತಂಡಗಳ ರೋಚಕ ಹಣಾಹಣಿ ನಿರೀಕ್ಷೆ ಇದೆ. ಗ್ಯಾಲರಿಯಲ್ಲಿ ವೀಕ್ಷಕರಿಗೆ ಕೂರಲು ಅವಕಾಶ ಮಾಡಿಕೊಡಲಾಗಿದೆ. ಸುಮಾರು 3 ಸಾವಿರ ಕ್ರೀಡಾಭಿಮಾನಿಗಳ ಪಾಲ್ಗೊಳ್ಳಲಿದ್ದಾರೆ. ಒಟ್ಟು 1.50 ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಯುವಕರ ಶ್ರಮದಾನದಿಂದ ಸುಮಾರು 3.5 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದಲ್ಲಿ ಮೊದಲ ಬಾರಿಗೆ ನೂತನವಾಗಿ ಮೈದಾನ ಸಜ್ಜುಗೊಳಿಸಲಾಗಿದ್ದು, ಇದರಿಂದ ಮತ್ತಷ್ಟು ಕ್ರೀಡಾಕೂಟ ಆಯೋಜಿಸಲು ನೆರವಾಗಲಿದೆ ಎಂದು ತಿಳಿಸಿದರು. ಮಾಹಿತಿಗೆ 9148544300, 8296758762 ಸಂಖ್ಯೆ ಸಂಪರ್ಕಿಸಬಹುದಾಗಿದೆ.

ಗೋಷ್ಠಿಯಲ್ಲಿ ಮಾಲ್ದಾರೆ ಗ್ರಾಮ ಪಂಚಾಯಿತಿ ಸದಸ್ಯ ಟಿ. ಎಸ್. ಶಮೀರ್, ಹುಂಡಿ ಯೂತ್ ಫ್ರೆಂಡ್ಸ್ ಅಧ್ಯಕ್ಷ ರಫಿ ಇದ್ದರು.

ಇಂದಿನಿಂದ ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.28– ಬಾಳೆಲೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಮಾ.1 ರಿಂದ 4 ರವರೆಗೆ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಕಿರುಗೂರು, ನಲ್ಲೂರು, ಸುಳುಗೋಡು, ಬಾಳೆಲೆ, ನಿಟ್ಟೂರು, ಮತ್ತೂರು, ಬೆಸಗೂರು, ರಾಜಪುರ, ಪೊನ್ನಪ್ಪಸಂತೆ, ಕಾರ್ಮಾಡು, ದೇವನೂರು ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಣ ಕೊಡದ ತೋಟದ ಮಾಲೀಕರ ಮೇಲೆ ಮಾರಣಾಂತಿಕ ಹಲ್ಲೆ

ಕಾಕೂರು ಗ್ರಾಮದಲ್ಲಿ ಅಮಾನುಷ ಘಟನೆ

ಅಸ್ಸಾಂ ಮೂಲದ ಆರೋಪಿ ಬಂಧನ

ಮಡಿಕೇರಿ, ಫೆ.28– ಅಸ್ಸಾಂ ಮೂಲದ ವಲಸೆ ಕಾರ್ಮಿಕನೊಬ್ಬ ಹಣ ಕೊಡದ ತೋಟದ ಮಾಲೀಕರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕಾಕೂರು ಗ್ರಾಮದ ಚೋಕೀರ ಕವಿತಾ(49) ಎಂಬವರೇ ಹಲ್ಲೆಗೆ ಒಳಗಾದ ತೋಟದ ಮಾಲೀಕರಾಗಿದ್ದು, ಶ್ರೀಮಂಗಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾಕೂರು ಗ್ರಾಮದ ಎಂ.ಚಿಪ್ಪ ಅವರ ತೋಟದ ಲೈನ್‌ಮನೆಯಲ್ಲಿ ವಾಸವಿದ್ದ ರಾಜೀಬ್(27)ನನ್ನು ಚಿಪ್ಪ ಅವರು ತಮ್ಮ ಸಂಬಂಧಿಕರಾದ ಚೋಕೀರ ಕವಿತಾ ಅವರ ತೋಟಕ್ಕೆ ಕೆಲಸಕ್ಕೆ ಕಳುಹಿಸಿದ್ದರು. ರಾಜೀಬ್‌ಗೆ ಕವಿತಾ ಅವರ ತೋಟ ಹಾಗೂ ಮನೆ ಪರಿಚಯವಿದ್ದ ಹಿನ್ನೆಲೆಯಲ್ಲಿ ಕೆಲಸಕ್ಕೆ ತೆರಳಿದ್ದ. ಈ ವೇಳೆ ರಾಜೀಬ್, ಕವಿತಾ ಅವರ ಬಳಿ ಹಣ ಕೇಳಿದ್ದು, ಹಣ ನೀಡಲು ಮಾಲೀಕರು ನಿರಾಕರಿಸಿದ್ದಾರೆ.

ಈ ವಿಚಾರಕ್ಕೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಈ ಸಂದರ್ಭ ರಾಜೀಬ್ ಏಕಾಏಕಿ ತೋಟದ ಮಾಲೀಕರಾದ ಕವಿತಾ ಅವರ ಮೇಲೆ ತೀವ್ರ ಹಲ್ಲೆ ನಡೆಸಿದ್ದಾನೆ. ಹಲ್ಲೆಯಿಂದ ಕವಿತಾ ಅವರ ತಲೆ, ಮುಖದ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಶ್ರೀಮಂಗಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ರೀಮಂಗಲ ಪೊಲೀಸರು ಆರೋಪಿ ರಾಜೀಬ್‌ನನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಗೊಬ್ಬರದ ಲಾರಿ ಮಗುಚಿ ಚಾಲಕನಿಗೆ ಗಾಯ

ರಸ್ತೆ ಪಾಲಾದ ಗೊಬ್ಬರದ ಮೂಟೆಗಳು



ಮಡಿಕೇರಿ, ಫೆ.28– ಚಾಲಕನ ನಿಯಂತ್ರಣ ಕಳೆದುಕೊಂಡು ಗೊಬ್ಬರ ಸಾಗಿಸುತ್ತಿದ್ದ ಲಾರಿಯೊಂದು ರಸ್ತೆ ಬದಿಗೆ ಉರುಳಿ ಬಿದ್ದ ಪರಿಣಾಮ ಚಾಲಕ ಸಣ್ಣಪುಟ್ಟ ಗಾಯಗಳಿಂದ ಪಾರಾಗಿರುವ ಘಟನೆ ಮೇಕೇರಿ ಬಳಿ ನಡೆದಿದೆ.

ಮಂಗಳೂರು ಕಡೆಯಿಂದ ಪೊನ್ನಂಪೇಟೆ ತಾಲೂಕಿನ ಹಾತೂರಿಗೆ ಲಾರಿಯಲ್ಲಿ ಗೊಬ್ಬರ ಸಾಗಿಸಲಾಗುತ್ತಿತ್ತು. ಲಾರಿ ಚಾಲಕ ತಾಳತ್ತಮನೆ–ಮೇಕೇರಿ ಬೈಪಾಸ್ ರಸ್ತೆಯ ಮಾಹಿತಿ ಅರಿಯದೆ ಮಡಿಕೇರಿಗೆ ಆಗಮಿಸಿ ಜನರಲ್ ತಿಮ್ಮಯ್ಯ ವೃತ್ತದಿಂದ ವಿರಾಜಪೇಟೆ ಮಾರ್ಗವಾಗಿ ಹುದಿಕೇರಿ ಕಡೆಗೆ ಲಾರಿ ಚಲಾಯಿಸಿದ್ದಾನೆ. ಮೇಕೇರಿ ರಸ್ತೆ ತಿರುವುಗಳಿಂದ ಕೂಡಿದ್ದು, ಮೇಕೇರಿ ಮಸೀದಿ ಬಳಿಯ ಇಳಿಜಾರು ರಸ್ತೆಯಲ್ಲಿ ಲಾರಿ, ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆಬದಿಗೆ ಮಗುಚಿ ಬಿದ್ದಿದೆ. ಗೊಬ್ಬರದ ಚೀಲಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಗೊಬ್ಬರ ರಸ್ತೆ ಪಾಲಾಗಿದೆ.

ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಕ್ರೇನ್‌ಗಳ ಸಹಾಯದಿಂದ ಲಾರಿಯನ್ನು ಮೇಲೆತ್ತಲಾಗಿದೆ. ಕೆಲವು ದಿನಗಳ ಹಿಂದೆ ಇದೇ ಸ್ಥಳದಲ್ಲಿ ಸುಣ್ಣ ಸಾಗಿಸುತ್ತಿದ್ದ ಲಾರಿಯೊಂದು ಮಗುಚಿ ಬಿದ್ದಿದ್ದನ್ನು ಇಲ್ಲಿ ಸ್ಮರಿಸಬಹುದು.

ಇಂದು ಮಹದೇಶ್ವರ ಬೆಟ್ಟದಲ್ಲಿ ಬಿಜೆಪಿ ವಿಜಯ ಸಂಕಲ್ಪ ರಥಯಾತ್ರೆಗೆ ಚಾಲನೆ

ಚಾಮರಾಜನಗರ, ಫೆ.28– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಪಕ್ಷದ ಸಾಧನೆಗಳನ್ನು ತಿಳಿಸುವ ಬಿಜೆಪಿ ವಿಜಯ ಸಂಕಲ್ಪ ರಥಯಾತ್ರೆಗೆ ನಾಳೆ (ಮಾ.1) ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಚಾಲನೆ ದೊರೆಯಲಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ರಾಜ್ಯ ಹಾಗೂ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಾ.1ರಂದು ಮಾದಪ್ಪನಿಗೆ ಪೂಜೆ ಸಲ್ಲಿಸುವ ಮೂಲಕ ಆರಂಭವಾಗುವ ಯಾತ್ರೆಯು ಹನೂರು, ಕೊಳ್ಳೇಗಾಲದಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಮಾ.2ರಂದು ಚಾಮರಾಜನಗರ ಹಾಗೂ ಗುಂಡ್ಲುಪೇಟೆಯಲ್ಲಿ ಕಾರ್ಯಕ್ರಮ ನಡೆದು ಮೈಸೂರು ತಲುಪಲಿದೆ.

ಯಾತ್ರೆ ಸಂಬಂಧ ಜಿಲ್ಲೆಯ ಹನೂರು ಹಾಗೂ ಕೊಳ್ಳೇಗಾಲದಲ್ಲಿ ಬೃಹತ್ ವೇದಿಕೆ ನಿರ್ಮಾಣವಾಗುತ್ತಿದ್ದು, ರಾಷ್ಟ್ರೀಯ ಅಧ್ಯಕ್ಷರ ಅದ್ದೂರಿ ಸ್ವಾಗತಕ್ಕೆ ರಾಜ್ಯ ಹಾಗೂ ಜಿಲ್ಲಾ ನಾಯಕರು ತಯಾರಿ ನಡೆಸಿದ್ದಾರೆ.

ಹನೂರು ಹಾಗೂ ಕೊಳ್ಳೇಗಾಲದಲ್ಲಿ ಬಿಜೆಪಿ ಬಾವುಟ ರಾರಾಜಿಸುತ್ತಿದೆ. ಮೋದಿ, ನಡ್ಡಾ, ಬಸವರಾಜ್‌ಬೊಮ್ಮಾಯಿ, ಯಡಿಯೂರಪ್ಪ ಅವರ ಬೃಹತ್ ಗಾತ್ರದ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಎರಡು ಸಮಾವೇಶದಲ್ಲಿ ಅಂದಾಜು 15 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಮಾಡಲಾಗಿದೆ.

ಚಾ.ನಗರ ನಗರಸಭೆಯ 1.19 ಕೋಟಿ ಉಳಿತಾಯ ಬಜೆಟ್

• ಮೂರನೇ ಬಜೆಟ್ ಮಂಡಿಸಿದ ಅಧ್ಯಕ್ಷರಾದ ಆಶಾ ನಟರಾಜು • ವಿವಿಧ ಮೂಲಗಳಿಂದ 14.93 ಕೋಟಿ ಆದಾಯ ನಿರೀಕ್ಷೆ



ಚಾಮರಾಜನಗರ, ಫೆ.28– ಪಟ್ಟಣ ನಗರಸಭೆಯ 2023–24ನೇ ಸಾಲಿನ 1.19 ಕೋಟಿ ಉಳಿತಾಯ ಬಜೆಟ್ ಅನ್ನು ನಗರಸಭೆ ಅಧ್ಯಕ್ಷೆ ಆಶಾ ನಟರಾಜು ಮಂಡಿಸಿದರು.

ನಗರಸಭೆಯ ಸಭಾಂಗಣದಲ್ಲಿ ಮಂಗಳವಾರ ನಡೆದ ಬಜೆಟ್ ಸಭೆಯಲ್ಲಿ ಅವರು ಮೂರನೇ ಬಜೆಟ್ ಮಂಡಿಸಿದರು. 2022–23ನೇ ಸಾಲಿನ ಪರಿಷ್ಕೃತ ಹಾಗೂ 2023–24ನೇ ಸಾಲಿನ ಅಂದಾಜು ಆಯ–ವ್ಯಯವನ್ನು ನಗರಸಭೆ ವಾಸ್ತವಿಕ ಮಾಹಿತಿಯ ಅನುಸಾರವಾಗಿ ತಯಾರಿಸಿ, ಆರಂಭಿಕ ಶುಲ್ಕ 16,34,91,000 ಹಾಗೂ 2023–24ನೇ ಸಾಲಿಗೆ ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ನಿರೀಕ್ಷಿತ ಆದಾಯ 14,93,85,000 ಹಾಗೂ ಸರ್ಕಾರದಿಂದ ನಿರೀಕ್ಷಿತ ಅನುದಾನಗಳು 22,76,58,000 ಸೇರಿ ಒಟ್ಟು 54,05,34,000 ರೂ. ಗಳಲ್ಲಿ ಹಿಂದಿನ ಸಾಲಿನ ಮುಂದುವರೆದ ಕಾಮಗಾರಿಗಳು ಸೇರಿದಂತೆ 2023–24ನೇ ಸಾಲಿನ ನಿರ್ವಹಣಾ ವೆಚ್ಚ ಮತ್ತು ಬಂಡವಾಳ ಕಾಮಗಾರಿಗಳಿಗೆ ಒಟ್ಟಾರೆ 52,86,28,000 ಅಂದಾಜು ವೆಚ್ಚಗಳು ಹಾಗೂ 1,19,06,000 ಉಳಿತಾಯದ ಆಯವ್ಯಯವನ್ನು 2023–24ನೇ ಸಾಲಿಗೆ ಮಂಡಿಸಿದರು.

2023–24ನೇ ಸಾಲಿಗೆ ನಗರಸಭೆಯ ಸ್ವಂತ ಮೂಲಗಳಿಂದ 1,493 ಲಕ್ಷ ರೂ.ಗಳ ಆದಾಯವನ್ನು ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. ಇದೇ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ 3,770 ಲಕ್ಷ ರೂ.ಗಳ ಅನುದಾನವನ್ನು ನಿರೀಕ್ಷಿಸಲಾಗಿದೆ. 15ನೇ ಹಣಕಾಸು ಅನುದಾನದಲ್ಲಿ 395 ಲಕ್ಷ ರೂ.ಗಳನ್ನು ಮೂಲ ಸೌಕರ್ಯಕ್ಕಾಗಿ ಕಾಯ್ದಿರಿಸಲಾಗಿದ್ದು, ಸದರಿ ಅನುದಾನದಲ್ಲಿ ನೀರು ಸರಬರಾಜು ಕಾಮಗಾರಿಗಳಿಗಾಗಿ 118 ಲಕ್ಷ ಹಾಗೂ ಘನತ್ಯಾಜ್ಯ ವಸ್ತು ನಿರ್ವಹಣಾ ಕಾಮಗಾರಿಗಳಿಗಾಗಿ 118 ಲಕ್ಷ ರೂ. ಕಾಯ್ದಿರಿಸಲಾಗಿದೆ, ರಸ್ತೆ, ಚರಂಡಿ ಹಾಗೂ ಇತರೆ ಮೂಲಭೂತ ಸೌಕರ್ಯಗಳಿಗೆ 158 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ ಎಂದರು.


ನಗರೋತ್ಥಾನ ನಿಧಿಯಿಂದ ತುರ್ತಾಗಿ ಆಗಬೇಕಾದ ಕಾಮಗಾರಿಗಳಿಗಾಗಿ 75 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ನಗರಸಭಾ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ರಸ್ತೆಗಳಿಗೆ ನಾಮಫಲಕ ಅಳವಡಿಸಲು ನಗರಸಭಾ ನಿಧಿಯಿಂದ 40 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ಎಸ್.ಸಿ, ಎಸ್.ಟಿ ಕಲ್ಯಾಣಕ್ಕಾಗಿ, ಎಸ್‌ಎಫ್‌ಸಿ ಮುಕ್ತ ನಿಧಿ ಅನುದಾನದಿಂದ 45 ಲಕ್ಷ ಮತ್ತು ನಗರಸಭಾ ನಿಧಿಯಿಂದ 27.97 ಲಕ್ಷ ಸೇರಿ ಒಟ್ಟು 72.92 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ. ಸದರಿ ಅನುದಾನದಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ 14.60 ಲಕ್ಷ, ಪರಿಶಿಷ್ಟ ಸಮುದಾಯದ ಕಾರ್ಯಕ್ರಮಗಳಿಗಾಗಿ 24.91 ಲಕ್ಷ ಹಾಗೂ ವೈಯುಕ್ತಿಕ ಕಾರ್ಯಕ್ರಮಗಳಿಗೆ 16.60 ಲಕ್ಷ ರೂ.ಗಳು ಮೀಸಲಿರಿಸಲಾಗಿದೆ ಎಂದರು.

ಎಸ್‌ಟಿ ಸಮುದಾಯದ ಕಾರ್ಯಕ್ರಮಗಳಿಗಾಗಿ 10.12 ಲಕ್ಷ, ವೈಯುಕ್ತಿಕ ಕಾರ್ಯಕ್ರಮಗಳಿಗಾಗಿ 6.74 ಲಕ್ಷ ಮೀಸಲಿರಿಸಲಾಗಿದೆ. ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ನಗರಸಭಾ ನಿಧಿಯಿಂದ 8.41 ಲಕ್ಷ ಕಾಯ್ದಿರಿಸಲಾಗಿದೆ. ಸದರಿ ಅನುದಾನದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಾರ್ಯಕ್ರಮಗಳಿಗೆ 5 ಲಕ್ಷ ಹಾಗೂ ವೈಯುಕ್ತಿಕ ಕಾರ್ಯಕ್ರಮಗಳಿಗೆ 3.36 ಲಕ್ಷ ಕಾಯ್ದಿರಿಸಲಾಗಿದೆ. ವಿಕಲಚೇತನ ಕಲ್ಯಾಣಕ್ಕಾಗಿ 5.80 ಲಕ್ಷ ಮೀಸಲಿರಿಸಲಾಗಿದೆ ಎಂದರು.

ಚಾಮರಾಜನಗರ ವ್ಯಾಪ್ತಿಯಲ್ಲಿ ಉದ್ಯಾನವನ ಅಭಿವೃದ್ಧಿಗಾಗಿ 10 ಲಕ್ಷ ಕಾಯ್ದಿರಿಸಲಾಗಿದ್ದು, ಪಾರ್ಕ್ ಅಭಿವೃದ್ಧಿ, ನಗರದ ಹಸಿರೀಕರಣ ಗೊಳಿಸುವುದು ಅದ್ಯತೆ ಆಗಿದೆ, ಬೀದಿನಾಯಿಗಳ ನಿಯಂತ್ರಣ ಹಾಗೂ ಪ್ರಾಣಿಗಳ ಸಂರಕ್ಷಣೆಗಾಗಿ 10 ಲಕ್ಷ ಮೀಸಲಿರಿಸಲಾಗಿದೆ, ರಾಮಸಮುದ್ರದ ಹಳೆಯ ಪಂಪ್‌ಹೌಸ್ ಹತ್ತಿರ 30 ಲಕ್ಷ ವೆಚ್ಚದಲ್ಲಿ ಸ್ವಚ್ಛ ಗೃಹ ಕಲಿಕಾ ಕೇಂದ್ರ ನಿರ್ಮಾಣ ಮಾಡಲಾಗುವುದು ಎಂದರು. ಸಭೆಯಲ್ಲಿ ಉಪಾಧ್ಯಕ್ಷೆ ಪಿ. ಸುಧಾ, ಪೌರಾಯುಕ್ತ ರಾಮದಾಸ್, ಸದಸ್ಯರು, ಅಧಿಕಾರಿಗಳು ಹಾಜರಿದ್ದರು.

ಜಮೀನುಗಳಲ್ಲಿ ವ್ಯವಸಾಯಕ್ಕೆ ಅವಕಾಶ ಕೊಡಿಸುವಂತೆ ಒತ್ತಾಯಿಸಿ ಪ್ರತಿಭಟನೆ

ಒಂದು ವಾರದೊಳಗೆ ಸಮಸ್ಯೆ ಬಗೆಹರಿಸದಿದ್ದರೆ ಆಮರಣಾಂತ ಉಪವಾಸ : ಪಾಪು



ಚಾಮರಾಜನಗರ, ಫೆ.28– ಹೆಚ್.ಡಿ. ಫಾರೆಸ್ಟ್ ಮತ್ತು ಪುಣಜನೂರು ಸ್ಟೇಟ್ ಫಾರೆಸ್ಟ್‌ನ ಸರ್ವೆ ನಂಬರ್ 1 ಮತ್ತು 3, 5 ರಲ್ಲಿ ನೀಡಿರುವ ಜಮೀನುಗಳನ್ನು ಸ್ವಚ್ಛ ಮಾಡಿಸಿಕೊಂಡು ಉಳುಮೆ ಮಾಡಲು ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಬಡಾವಣೆಯ ಫಲಾನುಭವಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಆಮರಣಾಂತ ಉಪವಾಸ: ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ(ಪಾಪು) ಮಾತನಾಡಿ, ಮಾಜಿ ರಾಜ್ಯಪಾಲ ಬಿ.ರಾಚಯ್ಯನವರು ಸುಮಾರು 50 ವರ್ಷಗಳ ಹಿಂದೆ 150 ಫಲಾನುಭವಿಗಳಿಗೆ ತಲಾ 2.5 ಎಕರೆ ಜಮೀನುಗಳ ಸಾಗುವಳಿ ಚೀಟಿ ವಿತರಿಸಿದ್ದು, ಅದರಂತೆ ಫಲಾನುಭವಿಗಳು ಅನುಭವದಲ್ಲಿದ್ದಾರೆ. ಅಲ್ಲಿ ವ್ಯವಸಾಯ ಮಾಡಲು ಹೋದರೆ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿರುವುದು ಸರಿಯಲ್ಲ ಎಂದರು.

ಹೆಚ್.ಡಿ.ಫಾರೆಸ್ಟ್ ಮತ್ತು ಪುಣಜನೂರು ಸ್ಟೇಟ್ ಫಾರೆಸ್ಟ್‌ನ ಸರ್ವೆ ನಂಬರ್ 1 ಮತ್ತು 3, 5 ರಲ್ಲಿ ಸಾಗುವಳಿ ಚೀಟಿ ಪಡೆದಿರುವ 150 ಫಲಾನುಭವಿಗಳಿಗೆ ವ್ಯವಸಾಯ ಮಾಡಲು ಒಂದು ವಾರದೊಳಗೆ ಅವಕಾಶ ಮಾಡಿಕೊಡದಿದ್ದರೆ ಅರಣ್ಯ ಇಲಾಖೆ ವಿರುದ್ಧ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಆಮರಣಾಂತ ಉಪವಾಸ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಬೆಂಬಲ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಐಕ್ಯತಾ ಹೋರಾಟ ಸಮಿತಿಯ ಜಿಲ್ಲಾ ಸಂಯೋಜಕರಾದ ಸಿ.ಎಂ.ಶಿವಣ್ಣ, ಕೆ.ಎಂ.ನಾಗರಾಜು, ಯಿರಿಯೂರು ರಾಜಣ್ಣ, ರಂಗಸ್ವಾಮಿ ಅವರು ಭಾಗವಹಿಸಿ ಬೆಂಬಲ ಸೂಚಿಸಿದರು. ಪ್ರತಿಭಟನೆಯಲ್ಲಿ ಯಜಮಾನರಾದ ಮಹದೇವಸ್ವಾಮಿ, ನಾಗರಾಜು, ಮುಖಂಡರಾದ ಮಾದು, ಮಹದೇವಸ್ವಾಮಿ, ಸಿ.ಕೆ. ಮಂಜು ನಾಥ್, ಚಾ.ಗು.ನಾಗರಾಜು, ನಾಗಲಕ್ಷ್ಮೀ ಇತರರು ಭಾಗವಹಿಸಿದ್ದರು.



ಗುಂಡ್ಲುಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆಯ ಪ್ರಚಾರ ರಥಕ್ಕೆ ಶಾಸಕ ಸಿ.ಎಸ್.ನಿರಂಜನಕುಮಾರ್ ಚಾಲನೆ ನೀಡಿದರು. ಈ ವೇಳೆ ಮುಖಂಡರಾದ ಎಲ್.ಸುರೇಶ್, ಸ್ವಾಮಿ, ನಾಗೇಶ್, ಎಸ್.ಸಿ. ಮಂಜುನಾಥ್, ಮಹೇಂದ್ರ, ಸಾಗರ್, ಮಹಾದೇವಪ್ಪ ಇತರರು ಇದ್ದರು.

ನಾಳೆ ಚಾ.ನಗರ ಕನ್ನಡ ಸಾಹಿತ್ಯ ಸಮ್ಮೇಳನ

ಚಾಮರಾಜನಗರ, ಫೆ.28– ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ಕಲಾಮಂದಿರದಲ್ಲಿ ಮಾ. 2ರಂದು ಚಾಮರಾಜನಗರ 7ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದ್ದಾರೆ.


ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಳಗ್ಗೆ 8.30ಕ್ಕೆ ತಹಸೀಲ್ದಾರ್ ಬಸವರಾಜು ರಾಷ್ಟ್ರಧ್ವಜ, ವೃತ್ತ ನಿರೀಕ್ಷಕ ಶ್ರೀಕಾಂತ್ ನಾಡಧ್ವಜ ಹಾಗೂ ಸುರೇಶ್ ಎನ್.ಋಗ್ವೇದಿ ಪರಿಷತ್ ಧ್ವಜಾರೋಹಣ ಮಾಡುವರು. ಬೆಳಗ್ಗೆ 10ಕ್ಕೆ ನಗರದ ಪೇಟೆ ಶಾಲಾವರಣದಲ್ಲಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ಚಾಲನೆ ನೀಡುವರು. ನಂತರ ಸಮ್ಮೇಳನಾಧ್ಯಕ್ಷ ಕೊತ್ತಲವಾಡಿ ಶಿವಕುಮಾರ್ ಅವರನ್ನು ಮುಖ್ಯ ವೇದಿಕೆ ಕಾರ್ಯಕ್ರಮಕ್ಕೆ ಕರೆತರಲಾಗುತ್ತದೆ ಎಂದು ತಿಳಿಸಿದರು.

ಬೆಳಗ್ಗೆ 11ಕ್ಕೆ ನಡೆಯುವ ಸಮ್ಮೇಳನದ ವೇದಿಕೆ ಕಾರ್ಯಕ್ರಮದ ಸಾನ್ನಿಧ್ಯವನ್ನು ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ವಹಿಸುವರು. ಕುವೆಂಪು ಭಾಷಾ ಭಾರತಿ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಧಾನಗುರುದತ್ ಸಮ್ಮೇಳನ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಶೈಲಕುಮಾರ್ ಆಶಯ ನುಡಿಗಳನ್ನಾಡುವರು. ಕೊತ್ತಲವಾಡಿ ಶಿವಕುಮಾರ್ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡುವರು. ನಿಕಟ ಪೂರ್ವ ಅಧ್ಯಕ್ಷ ಮಂಜುಕೋಡಿಉಗನೆ ಸೇರಿದಂತೆ ಜನಪ್ರತಿನಿಧಿಗಳು, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು, ಸಾಹಿತಿಗಳು ಭಾಗವಹಿಸುವರು ಎಂದು ತಿಳಿಸಿದರು.

ಮಧ್ಯಾಹ್ನ 12.30ಕ್ಕೆ ನಡೆಯುವ ವಿಚಾರ ಗೋಷ್ಠಿಯಲ್ಲಿ ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ರೈತರ ಸ್ಥಿತಿಗತಿ, ಶಿಕ್ಷಣದ ಸವಾಲುಗಳು ಕುರಿತು ಡಯಟ್ ಪ್ರಾಂಶುಪಾಲ ಡಿವೈಪಿಸಿ ಲಕ್ಷ್ಮೀಪತಿ, ಸಮ್ಮೇಳನಾಧ್ಯಕ್ಷರ ಬದುಕು–ಬರಹ ಕುರಿತು ಅರಳೀಕಟ್ಟೆ ರಾಜಪ್ಪ ವಿಚಾರ ಮಂಡನೆ ಮಾಡುವರು ಎಂದರು.

ಸಮ್ಮೇಳನಾಧ್ಯಕ್ಷರ ಪರಿಚಯ

ಚಾಮರಾಜನಗರ ತಾಲೂಕಿನ ಕೊತ್ತಲವಾಡಿ ಗ್ರಾಮದವರಾದ ಶಿವಕುಮಾರ್ ಅವರು ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ತೆರಕಣಾಂಬಿ, ಪಿಯುಸಿ, ಪದವಿ ಗುಂಡ್ಲುಪೇಟೆ, ಶಾರದ ವಿಲಾಸ್ ಕಾಲೇಜಿನಲ್ಲಿ ಬಿಇಡಿ, ಮೈಸೂರು ವಿವಿಯಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ, ಪ್ರಸ್ತುತ ನಂಜನಗೂಡು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನೆಲದ ಮಾತು, ನೇರ ನೋಟ, ಮಂಥನ, ವಿದ್ಯಮಾನ, ಹಾದಹಾದು, ಗತಿ, ಹೋಲದಂಚಿನ ತಂತಿನಲ್ಲಿ ಸೇರಿದಂತೆ 10ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.



ಮಧ್ಯಾಹ್ನ 2.30ಕ್ಕೆ ಕವಿಗೋಷ್ಠಿ ನಡೆಯಲಿದ್ದು, 26 ಕವಿಗಳು ಕವನ ವಾಚನ ಮಾಡಲಿದ್ದಾರೆ. ಸಂಜೆ 5.30ಕ್ಕೆ ಸಮ್ಮೇಳನದ ಸಮಾರೋಪ ನಡೆಯಲಿದ್ದು, ಸಾನ್ನಿಧ್ಯವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದ ಬಿ.ಕೆ. ದಾನೇಶ್ವರಿ ವಹಿಸುವರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸುವರು. ಸಂಸ್ಕೃತಿ ಚಿಂತಕ ಗುಬ್ಬಿಗೂಡು ರಮೇಶ್ ಸಮಾರೋಪ ನುಡಿಗಳನ್ನಾಡುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಸಾಧಕರಿಗೆ ಗೌರವಾರ್ಪಣೆ ಮಾಡಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ನಿರ್ಣಯದ ಪ್ರತಿಮಂಡನೆ ಮಾಡುವರು.

ನಗರದ ಸಾರ್ವಜನಿಕರು, ಹಿತೈಷಿಗಳು, ಸಾಹಿತ್ಯಾಸಕ್ತರು, ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕಸಾಪ ಕೋಶಾಧ್ಯಕ್ಷ ಆರ್.ವಿ. ಮಹದೇವಪ್ಪ, ಕಲಾವಿದರಾದ ವೆಂಕಟೇಶ್ ಬಾಬು, ಓಂಶಾಂತಿ ಆರಾಧ್ಯ ಹಾಜರಿದ್ದರು.

ಒಂದನೇ ಪುಟದಿಂದ

ಘೋಷಿಸಿದರೆ 'ಕೈ' ಹಿಡಿಯುತ್ತೇವೆ

ಯಾರಿಗೆ ಇರುತ್ತದೋ ಆ ನಾಯಕ ರಾಜ್ಯದ ಮುಖ್ಯಮಂತ್ರಿಯಾಗುತ್ತಾನೆ ಎಂದು ಕೆಲವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಕಾಂಗ್ರೆಸ್ ಸಾಧನೆ ಜನರಿಗೆ ತಲುಪಿಸಿ: ಮಾಜಿ ಸಚಿವ ಚಲುವರಾಯಸ್ವಾಮಿ ಮಾತನಾಡಿ ಮುಖ್ಯವಾಗಿ ಕಾಂಗ್ರೆಸ್ ಪಕ್ಷ ಸಿದ್ದರಾಮಯ್ಯ, ಎಸ್.ಎಂ.ಕೃಷ್ಣ ಸೇರಿದಂತೆ ಇನ್ನಿತರ ನಾಯಕರು ಅಧಿಕಾರದಲ್ಲಿದ್ದಾಗ ಜಿಲ್ಲೆಗೆ ಹಾಗೂ ಸಮುದಾಯಕ್ಕೆ ಕೊಟ್ಟಿರುವ ಕೊಡುಗೆಗಳನ್ನು ಸಮುದಾಯದ ಮತದಾರರ ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕು. ಒಕ್ಕಲಿಗರೆಂದರೆ ಕೇವಲ ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ. ಕುಮಾರಸ್ವಾಮಿ ಮಾತ್ರವಲ್ಲ. ಡಿ.ಕೆ.ಶಿವಕುಮಾರ್ ಸಹ ಒಕ್ಕಲಿಗ ನಾಯಕ ಎಂಬುದನ್ನು ಸಮುದಾಯದ ಜನತೆಗೆ ಮನದಟ್ಟಾಗುವ ಹಾಗೆ ಅರ್ಥ ಮಾಡಿಸಬೇಕೆಂದು ಚಲುವರಾಯಸ್ವಾಮಿ ಸಮುದಾಯದ ಮುಖಂಡರಿಗೆ ತಿಳಿಸಿದರು. ಜೊತೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ಜಿಲ್ಲೆಗೆ ಯಾವ ಮಹತ್ತರ ಕೊಡುಗೆಯೂ ಸಿಕ್ಕಿಲ್ಲ. ಸಮುದಾಯ ಸಹ ಅಭಿವೃದ್ಧಿಯಾಗಿಲ್ಲ ಎಂಬುದನ್ನು ಮತದಾರರಿಗೆ ಮನವರಿಕೆ ಮಾಡಬೇಕು. ಜೆಡಿಎಸ್‌ನಲ್ಲಿ ಬರೀ ಕುಟುಂಬ ರಾಜಕಾರಣ. ಹಾಸನ ಹಾಗೂ ರಾಮನಗರ ಅಭಿವೃದ್ಧಿ ಮಾಡಿದಂತೆ ಮಂಡ್ಯ ಜಿಲ್ಲೆಯನ್ನು ಅಭಿವೃದ್ಧಿ ಮಾಡಿಲ್ಲ ಈ ಬಗ್ಗೆ ನಾವು ಜನರಲ್ಲಿ ಅರಿವು ಮೂಡಿಸಬೇಕೆಂದರು.

ಸಭೆಯಲ್ಲಿ ಸಮುದಾಯದ ನಾಯಕರಾದ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಹೆಚ್.ಬಿ.ರಾಮು, ರಮೇಶ್ ಬಂಡಿಸಿದ್ದೇಗೌಡ, ಮುಖಂಡರಾದ ಗಣಿಗ ರವಿಕುಮಾರ್, ಎಂ.ಎಸ್.ಚಿದಂಬರ್, ಡಾ.ಕೃಷ್ಣ, ಕೀಲಾರ ರಾಧಾಕೃಷ್ಣ, ಪುಟ್ಟೇಗೌಡ, ಅಮರಾವತಿ ಚಂದ್ರಶೇಖರ್, ಸಿದ್ದಾರೂಢ ಸತೀಶ್‌ಗೌಡ, ಸಿ.ಡಿ.ಗಂಗಾಧರ್, ಅಂಜನಾ ಶ್ರೀಕಾಂತ್, ಡಾ.ರವೀಂದ್ರ, ವಿಜಯ್ ರಾಮೇಗೌಡ, ಗುರುಚರಣ್, ಹಾಲಹಳ್ಳಿ ರಾಮಲಿಂಗಯ್ಯ, ವಿಜಯ್‌ಕುಮಾರ್ ಸೇರಿದಂತೆ ಜಿಲ್ಲೆಯ ಒಕ್ಕಲಿಗ ಸಮುದಾಯದ ಬಹುತೇಕ ಮುಖಂಡರು ಭಾಗವಹಿಸಿದ್ದರು.

ವೇಳಾಪಟ್ಟಿ ಪ್ರಕಟ ಸಾಧ್ಯತೆ

ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಜತೆಗೆ ಪಕ್ಷದ ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಪಕ್ಷದ ವರಿಷ್ಠರು ಅಲೆ ಎಬ್ಬಿಸಲು ತೀರ್ಮಾನಿಸಿದ್ದಾರೆ. ಪದೇ ಪದೇ ರಾಜ್ಯ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರಮೋದಿಯವರು ಹಲ ವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದು,ಕೇಂದ್ರ ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಸೇರಿದಂತೆ ಹಲವು ನಾಯಕರು ರಾಜ್ಯದಲ್ಲಿ ಪ್ರವಾಸ ಆರಂಭಿಸಿದ್ದಾರೆ. ಸರ್ಕಾರದ ಸೂಚನೆಯ ಮೇರೆಗೆ ಬಿಜೆಪಿಯ ಸಚಿವರು ಮತ್ತು ಶಾಸಕರು ರಾಜ್ಯ, ಕೇಂದ್ರೀತ ಕಾರ್ಯಕ್ರಮಗಳಿಗಿಂತ ತಮ್ಮ ತಮ್ಮ ಕ್ಷೇತ್ರದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಮತದಾರರ ಮನ ಸೆಳೆಯುವ ಯತ್ನ ಆರಂಭಿಸಿದ್ದಾರೆ. ಪಕ್ಷದ ಶಾಸಕರ ಅನುಕೂಲಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಸಹ ಕ್ಷೇತ್ರಾಭಿವೃದ್ಧಿ ನಿಧಿ ಸೇರಿದಂತೆ ಹಲವು ಬಾಬ್ತುಗಳಲ್ಲಿ ಶಾಸಕರಿಗೆ ಹಣ ಬಿಡುಗಡೆ ಮಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ಈ ಮಧ್ಯೆ ಆಡಳಿತಾರೂಢ ಬಿಜೆಪಿ ಮಾತ್ರವಲ್ಲದೆ,ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಕೂಡಾ ಕೇಂದ್ರ ಚುನಾವಣಾ ಆಯೋಗದ ಇಂಗಿತ ಅರ್ಥವಾಗುತ್ತಿದ್ದಂತೆಯೇ ರಾಜ್ಯ ಪ್ರವಾಸದ ಮೇಲೆ ತಮ್ಮ ಗಮನ ನೆಟ್ಟಿವೆ. ಆ ಮೂಲಕ ಕರ್ನಾಟಕದಲ್ಲಿ ಮೂರೂ ರಾಜಕೀಯ ಪಕ್ಷಗಳ ಚುನಾವಣಾ ತಯಾರಿ ವಿದ್ಯುಕ್ತವಾಗಿ ಆರಂಭವಾಗಿದ್ದು ಪಕ್ಷಾತೀತವಾಗಿ ಸಂಭವನೀಯ ಅಭ್ಯರ್ಥಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮತದಾರರನ್ನು ಓಲೈಸಿಕೊಳ್ಳಲು ಉಡುಗೊರೆಗಳ ಸುರಿಮಳೆಗೈಯ್ಯುತ್ತಿದ್ದಾರೆ.

ದೇಶವನ್ನು ಮತ್ತೊಮ್ಮೆ ಹಾಕುವುದ ತಡೆಯಬೇಕಿದೆ

ಪೆಟ್ರೋಲ್, ಡೀಸೆಲ್, ಹಾಗೂ ದಿನನಿತ್ಯದ ದಿನಸಿಗಳ ಬೆಲೆ ಜಾಸ್ತಿ ಮಾಡಿದ್ದಾನೆ ಎಂಬ ಕೋಪ ನಿಮ್ಮದು. ಸತ್ಯ ಹೇಳುತ್ತಿದ್ದೇನೆ ಇಡೀ ವಿಶ್ವವೇ ವ್ಯತಿರಿಕ್ತ ಆರ್ಥಿಕತೆಯಿಂದ ತತ್ತರಿಸಿ ಹೋಗಿದೆ. ತಿನ್ನಲು ಆಹಾರದ ಕೊರತೆ. ಗ್ಯಾಸ್, ಡೀಸೆಲ್, ಪೆಟ್ರೋಲ್, ಎಲ್ಲವೂ ಕೊರತೆ ಇದೆ. ಹಣ ಕೊಟ್ಟರೂ ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾನು ನನ್ನ ಶಕ್ತಿ ಮೀರಿ ಅಂತರರಾಷ್ಟ್ರೀಯದ ಸಂಬಂಧಗಳಿಂದ ಈ ದಿನ ನಮ್ಮ ದೇಶದ ಜನರಿಗೆ ಆಹಾರ, ನೀರು, ಕರೆಂಟ್ ಸಿಗುವಂತೆ ಮಾಡಿದ್ದೇನೆ. ಸತ್ಯವನ್ನು ತಿಳಿಯಿರಿ ಎಂದಿದ್ದಾರೆ.

ನನ್ನ ದೇಹದ ಅಣು ಅಣುವಿನಲ್ಲೂ ದೇಶಭಕ್ತಿ ತುಂಬಿಕೊಂಡಿದ್ದೇನೆ ನಾನು ವಿರೋಧ ಪಕ್ಷಗಳಂತೆ, ಭ್ರಷ್ಟಾಚಾರಿ ಅಲ್ಲ, ನಾನು ಮಹಾನ್ ದೇಶಭಕ್ತ. ಇದು ನಿಮಗೆ ನೆನಪಿರಲಿ.

ನಿವೃತ್ತಿ ನಿರ್ಧಾರ ಕೈಬಿಡುವಂತೆ ಆಗ್ರಹ

ಅಧಿಕಾರದಲ್ಲಿ ಮುಂದುವರಿದು ಜನ ಸೇವೆ ಮಾಡಬೇಕೆಂದು ನೆರೆದಿದ್ದವರು ತನ್ವೀರ್ ಸೇಠ್ ಅವರನ್ನು ಒತ್ತಾಯಿಸಿದರು. ಸಾವಿರಕ್ಕೂ ಹೆಚ್ಚು ಮಂದಿ ಅವರ ಮನೆ ಬಳಿ ಜಮಾಯಿಸಿ ಯಾವುದೇ ಕಾರಣಕ್ಕೂ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯಬಾರದೆಂದು ಒತ್ತಾಯಿಸಿ ಧರಣಿ ನಡೆಸುತ್ತಿದ್ದಾಗ, ತನ್ವೀರ್ ಸೇಠ್ ಅಭಿಮಾನಿ ಎಂ.ರಸೂಲ್ ಬಾಟಲ್‌ನಲ್ಲಿ ತಂದಿದ್ದ ಸೀಮೆಎಣ್ಣೆಯನ್ನು ಮೈಮೇಲೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲೆತ್ನಿಸಿದ.

ಸ್ಥಳದಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರು, ಅದನ್ನು ಗಮನಿಸಿ ತಕ್ಷಣ ಬಾಟಲಿ ಕಿತ್ತೆಸೆದು, ಮೈಮೇಲೆ ನೀರು ಸುರಿದು, ಬಟ್ಟೆ ಕಳಚಿ, ಬೇರೆ ಬಟ್ಟೆ ಹಾಕಿಸಿ, ಆತನನ್ನು ಸಮಾಧಾನಪಡಿಸಿದರು. ಆಗ ಮನೆಯಿಂದ ಹೊರ ಬಂದ ತನ್ವೀರ್ ಸೇಠ್, ನನ್ನ ಮೇಲೆ ಹಲ್ಲೆಯಾದ ನಂತರ ಆರೋಗ್ಯ ಯಥಾಸ್ಥಿತಿಗೆ ಬರುತ್ತಿಲ್ಲ. ನನ್ನ ಆರೋಗ್ಯದ ಸಮಸ್ಯೆಗಳನ್ನು ಬೇರೆಯವರೊಂದಿಗೆ ಹೇಳಿಕೊಳ್ಳಲು ಸಾಧ್ಯವಿಲ್ಲದ ಕಾರಣ ಚುನಾವಣೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದೇನೆ. ನಿಮ್ಮ ಪ್ರೀತಿ-ಅಭಿಮಾನಕ್ಕೆ ಚಿರಋಣಿಯಾಗಿದ್ದೇನೆ. ಆದರೆ ಈ ರೀತಿ ಅತಿಯಾದ ಅಭಿಮಾನದಿಂದ ಅವಾಂತರ ಮಾಡಿಕೊಳ್ಳಬಾರದು. ನಿಮ್ಮ ಭಾವನೆ ನನಗೆ ಅರ್ಥವಾಗಿದೆ. ನನ್ನ ಪರಿಸ್ಥಿತಿಯನ್ನು ನೀವೂ ಅರ್ಥಮಾಡಿಕೊಳ್ಳಿ ಎಂದು ಮನವಿ ಮಾಡಿದರು.

ಆತ್ಮಹತ್ಯೆಗೆತ್ನಿಸಿದ ರಸೂಲ್‌ನನ್ನು ಮನೆಯೊಳಗೆ ಕರೆದೊಯ್ದು ಸಮಾಧಾನಪಡಿಸಿದ ತನ್ವೀರ್, ಈ ರೀತಿ ನನ್ನ ಕಣ್ಣೆದುರೇ ಸೀಮೆಎಣ್ಣೆ ಸುರಿದುಕೊಂಡರೆ ಬೇರೆಯವರೂ ಇದನ್ನು ಅನುಸರಿಸುತ್ತಾರೆ. ಏನೇ ಇದ್ದರೂ ಬಂದು ಮಾತನಾಡಿ. ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ. ನಾನು ಅಧಿಕಾರ ಇರಲಿ, ಇಲ್ಲದಿರಲಿ, ನಿಮ್ಮ ಸೇವೆಗೆ ಸದಾ ಸಿದ್ಧನಿರುತ್ತೇನೆ ಎಂದರು. ಅದೇ ವೇಳೆ ಸ್ಥಳದಲ್ಲಿದ್ದ ಎನ್.ಆರ್.ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಇಕ್ಬಾಲ್ ಸಹ ತನ್ವೀರ್ ಸೇಠ್ ಮನೆ ಮೇಲೇರಿ ಛಾವಣಿ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದರು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಕಾಂಗ್ರೆಸ್ ಕಾರ್ಯಕರ್ತರ ನೆರವಿನೊಂದಿಗೆ ಆತನ ಮನವೊಲಿಸಿ, ಕೆಳಗೆ ಕರೆತಂದರು.

ವಿಷಯ ತಿಳಿಯುತ್ತಿದ್ದಂತೆಯೇ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಹಾಗೂ ಪಕ್ಷದ ಮುಖಂಡರು, ಆತ್ಮಹತ್ಯೆಗೆತ್ನಿಸಿದವರನ್ನು ಸಮಾಧಾನಪಡಿಸಿ, ತನ್ವೀರ್ ಸೇಠ್‌ರೊಂದಿಗೂ ಸುದೀರ್ಘ ಸಮಾಲೋಚನೆ ನಡೆಸಿ ಮತ್ತೆ ಚುನಾವಣೆಗೆ ಸ್ಪರ್ಧಿಸುವಂತೆ ಮನವೊಲಿಸಲೆತ್ನಿಸಿದರು. ಕಾಂಗ್ರೆಸ್ ಕಾರ್ಪೊರೇಟರ್‌ಗಳು, ಮಾಜಿ ಕಾರ್ಪೊರೇಟರ್‌ಗಳು, ವಿವಿಧ ಸಂಘಟನೆಗಳ ಪ್ರಮುಖರು, ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳು ಇಂದು ತನ್ವೀರ್ ಸೇಠ್ ಮನೆಗೆ ತೆರಳಿ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯದಂತೆ ಮನವಿ ಮಾಡಿದರಲ್ಲದೆ, ಈ ಸಂಬಂಧ ನಿರ್ಧಾರ ಬಹಿರಂಗಪಡಿಸುವಂತೆ ಒತ್ತಾಯಿಸಿದರಾದರೂ, ನನ್ನ ಆರೋಗ್ಯ ಸಮಸ್ಯೆ, ವೈಯಕ್ತಿಕ ಕಾರಣಗಳಿಂದ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ನೀವು ಇಷ್ಟೊಂದು ಪ್ರೀತಿ ತೋರಿಸಿ ತಮ್ಮ ತಮ್ಮ ಭಾವನೆ ವ್ಯಕ್ತಪಡಿಸಿರುವುದನ್ನು ನಾನು ಗೌರವಿಸುತ್ತೇನೆ ಎಂದು ತನ್ವೀರ್ ಸೇಠ್ ಪ್ರತಿಕ್ರಿಯಿಸಿದರು. ನಾನು, ಕುಟುಂಬದವರು, ಸ್ನೇಹಿತರು, ಹಿತೈಷಿಗಳೊಂದಿಗೆ ಮತ್ತೊಮ್ಮೆ ಸಮಾಲೋಚನೆ ನಡೆಸುತ್ತೇನೆ. ನನಗೆ ಮೂರ್‍ನಾಲ್ಕು ದಿನ ಸಮಯ ಕೊಡಿ ಎಂದ ತನ್ವೀರ್ ಸೇಠ್, ಈಗಲೂ ನನ್ನ ನಿಲುವಿಗೆ ಬದ್ಧನಾಗಿದ್ದೇನೆ. ಪಕ್ಷ ನನಗೆ ನೀಡಿದ ಮನ್ನಣೆ, ಗೌರವವನ್ನು ಎಂದಿಗೂ ಮರೆಯುವುದಿಲ್ಲ. ಪಕ್ಷದ ಹೈಕಮಾಂಡ್‌ಗೆ ಈಗಾಗಲೇ ನನ್ನ ನಿರ್ಧಾರವನ್ನು ಪತ್ರ ಮುಖೇನ ತಿಳಿಸಿದ್ದೇನೆ. ಹೈಕಮಾಂಡ್ ಕೈಗೊಳ್ಳುವ ನಿರ್ಧಾರವನ್ನು ಗೌರವಿಸುತ್ತೇನೆ ಎಂದು ತನ್ವೀರ್ ನೆರೆದಿದ್ದವರಿಗೆ ಹೇಳಿದರು. ಉದಯಗಿರಿ ಠಾಣೆ ವತಿಯಿಂದ ತನ್ವೀರ್ ಸೇಠ್ ಮನೆ ಬಳಿ ಸಿಬ್ಬಂದಿಗಳನ್ನು ನಿಯೋಜಿಸಿ, ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲಾಗಿದೆ.

ಹೈಕಮಾಂಡ್ ಸ್ಪರ್ಧಿಸಿ ಎಂದರೆ ಸ್ಪರ್ಧಿಸುತ್ತೇನೆ

ಹಿಂದೆ ಸರಿಯುತ್ತೇನೆ ಎಂದು ಪಕ್ಷದ ವರಿಷ್ಠರಿಗೆ ಪತ್ರ ಬರೆದಿದ್ದೂ ನಿಜ. ನಾನು ಈಗಲೂ ಅದಕ್ಕೆ ಬದ್ಧನಾಗಿದ್ದೇನೆ ಎಂದು ತಿಳಿಸಿದರು. ಆದರೆ, ಈ ಬೆಳವಣಿಗೆಯಿಂದ ಕ್ಷೇತ್ರದ ಮತದಾರರು ಮನ ನೊಂದು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ನನ್ನ ಬೆಂಬಲಿಗರು, ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಅಸಂಖ್ಯಾತ ಸಂಖ್ಯೆಯಲ್ಲಿ ನನ್ನ ಮನೆ ಬಳಿ ಬಂದು ತಮ್ಮ ನೋವನ್ನು ತೋಡಿಕೊಂಡು, ಮತ್ತೆ ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸುತ್ತಿದ್ದಾರೆ. ಕೆಲವರು ಆತ್ಮಹತ್ಯೆಗೂ ಯತ್ನಿಸಿದ್ದಾರೆ. ಅವರ ಭಾವನೆ, ಪ್ರೀತಿ, ಅಭಿಮಾನವನ್ನು ನಾನೆಂದೂ ಮರೆಯಲಾರೆ ಎಂದು ನುಡಿದರು.

ನಮ್ಮ ತಂದೆಯವರಂತೆ ನನ್ನನ್ನೂ ಐದು ಬಾರಿ ಬೆಂಬಲಿಸಿ ಆಶೀರ್ವದಿಸಿರುವ ಎನ್.ಆರ್. ಕ್ಷೇತ್ರದ ಜನರ ಅಭಿಪ್ರಾಯವನ್ನು ಗೌರವಿಸಲೇಬೇಕು. ನಾನು ಚುನಾವಣೆಗೆ ಸ್ಪರ್ಧಿಸಲು ಆರೋಗ್ಯ ಅಡ್ಡಿಯಾಗುತ್ತಿರುವುದರಿಂದ ಚುನಾವಣಾ ರಾಜಕಾರಣದಿಂದ ದೂರ ಉಳಿದು ಪಕ್ಷ ಟಿಕೆಟ್ ನೀಡುವ ಅಭ್ಯರ್ಥಿಗೆ ಬೆಂಬಲ ನೀಡುವುದಾಗಿ ಪತ್ರದಲ್ಲಿ ತಿಳಿಸಿದ್ದೇನೆ. ಇಂದಿನ ಬೆಳವಣಿಗೆಯು ನನ್ನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದೆಯಾದ್ದರಿಂದ ಕ್ಷೇತ್ರದ ಮತದಾರರ ಭಾವನೆಗಳಿಗೆ ಧಕ್ಕೆಯುಂಟು ಮಾಡಲಾರೆ ಎಂದು ತನ್ವೀರ್ ಸುದ್ದಿಗಾರರಿಗೆ ತಿಳಿಸಿದರು. ನಾನು ಪತ್ರ ಮುಖೇನ ತಿಳಿಸಿರುವ ಅಭಿಪ್ರಾಯದ ಬಗ್ಗೆ ಪಕ್ಷದ ಹೈಕಮಾಂಡ್ ಯಾವುದೇ ನಿರ್ಧಾರ ಕೈಗೊಂಡರೂ ಅದಕ್ಕೆ ಬದ್ಧನಾಗಿರುತ್ತೇನೆ. ಒಂದು ವೇಳೆ ಟಿಕೆಟ್ ಕೊಟ್ಟು ಸ್ಪರ್ಧಿಸಿ ಎಂದರೆ ನಿಲ್ಲುತ್ತೇನೆ. ಇಲ್ಲದಿದ್ದರೆ ಅಭ್ಯರ್ಥಿಯಾಗುವವರಿಗೆ ಬೆಂಬಲಿಸಿ, ಕಾಂಗ್ರೆಸ್ ಕಾರ್ಯಕರ್ತನಾಗಿ ಪಕ್ಷದ ಸಂಘಟನೆ ಮುಂದುವರಿಸುತ್ತೇನೆ ಎಂದು ಅವರು ಇದೇ ಸಂದರ್ಭ ನುಡಿದರು.

ಬಿಜೆಪಿ ಸರ್ಕಾರ ನೌಕರರಿಗೆ ಸಾಕಷ್ಟು ಸೌಕರ್ಯ ಕಲ್ಪಿಸಿದೆ

● ಮಾಜಿ ಸಚಿವ ಈಶ್ವರಪ್ಪ ಸ್ಪಷ್ಟನೆ ● ಸರ್ಕಾರಿ ನೌಕರರ ಮುಷ್ಕರದ ಹಿಂದೆ ಷಡ್ಯಂತರ ಆರೋಪ ನಿರಾಕರಣೆ ● ಪ್ರಧಾನಿ ಮೋದಿ ರಾಜ್ಯ ಭೇಟಿ ಬಗ್ಗೆ ಕಾಂಗ್ರೆಸ್ ಹೇಳಿಕೆಗೆ ತರಾಟೆ



ಮೈಸೂರು, ಫೆ28(ಎಸ್‌ಬಿಡಿ)- ರಾಜ್ಯದ ಇತಿಹಾಸದಲ್ಲಿ ಸರ್ಕಾರಿ ನೌಕರರಿಗೆ ಬಿಜೆಪಿ ಸರ್ಕಾರ ಕಲ್ಪಿಸಿದಷ್ಟು ಸೌಲಭ್ಯಗಳನ್ನು ಮತ್ತಾವುದೇ ಸರ್ಕಾರ ನೀಡಿಲ್ಲ ಎಂದು ಮಾಜಿ ಸಚಿವ, ಹಾಲಿ ಶಾಸಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಮೈಸೂರಿನ ಸರ್ಕಾರಿ ಅತಿಥಿಗೃಹದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಸರ್ಕಾರಿ ನೌಕರರು ಸ್ಪಷ್ಟವಾಗಿ ಹೇಳಲಿ. ರಾಜ್ಯದ ಇತಿಹಾಸದಲ್ಲಿ ಸರ್ಕಾರಿ ನೌಕರರಿಗೆ ಬಿಜೆಪಿ ಸರ್ಕಾರ ನೀಡಿದಷ್ಟು ಸೌಲಭ್ಯವನ್ನು ಮತ್ತಾವ ಸರ್ಕಾರ ನೀಡಿಲ್ಲ. ಹಾಗೆಂದ ಮಾತ್ರಕ್ಕೆ ನೌಕರರ ಬೇಡಿಕೆಯನ್ನು ತಿರಸ್ಕಾರ ಮಾಡಿಲ್ಲ. ಈ ಬಗ್ಗೆ ಚರ್ಚೆ ಮಾಡಿ ಮುಖ್ಯಮಂತ್ರಿಗಳು ಬಜೆಟ್ ಅಧಿವೇಶನದಲ್ಲಿ ಉತ್ತರಿಸಿದ್ದಾರೆ. ಮುಷ್ಕರ ಮಾಡುತ್ತೇವೆ ಎನ್ನುವುದು ಬಹಳ ಸುಲಭ. ಈ ವೇಳೆ ಬಿಜೆಪಿ ಸರ್ಕಾರ ಏನೆಲ್ಲಾ ಸೌಲಭ್ಯಗಳನ್ನು ನೀಡಿದೆ ಎನ್ನುವುದನ್ನೂ ನೆನಪು ಮಾಡಿಕೊಳ್ಳಬೇಕು. ಆದರೂ ಸಮಸ್ಯೆ ಪರಿಹರಿಸುವತ್ತ ಗಮನಹರಿಸಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಕುತಂತ್ರ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಜೊತೆ ಉತ್ತಮ ಬಾಂಧವ್ಯವಿದೆ. ಹಾಗಾಗಿ ಮುಖ್ಯಮಂತ್ರಿ ಬೊಮ್ಮಾಯಿ ಅವರ ಸಾಮರ್ಥ್ಯ ಪರೀಕ್ಷಿಸಲೆಂದು ಬಿಎಸ್‌ವೈ ಅವರೇ ಷಡಕ್ಷರಿಯನ್ನು ಮುಂದೆ ಬಿಟ್ಟಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ ಎನ್ನುವುದಕ್ಕೆ ಪ್ರತಿಕ್ರಿಯಿಸಿ, ಕಾಂಗ್ರೆಸ್‌ನವರಿಗೆ ಈ ರೀತಿ ಕುತಂತ್ರದ ರಾಜಕಾರಣ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ. ಸರ್ಕಾರಿ ನೌಕರರಿಗೆ ಯಡಿಯೂರಪ್ಪನವರು ಹಾಗೂ ಬೊಮ್ಮಾಯಿ ಅವರು ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. ಇದು ಅವರಿಂದ ಸಾಧ್ಯವಾಗಲಿಲ್ಲವಲ್ಲಾ ಎಂದು ಹೊಟ್ಟೆಕಿಚ್ಚಿನಿಂದ ಈ ರೀತಿ ಹೇಳಿದ್ದಾರೆ. ಬಿಎಸ್‌ವೈ ಹಾಗೂ ಬೊಮ್ಮಾಯಿ ಅಣ್ಣ ತಮ್ಮನ ರೀತಿ ಇದ್ದಾರೆ. ಇಬ್ಬರೂ ಒಟ್ಟಿಗೆ ಇರುವುದನ್ನು ಕಾಂಗ್ರೆಸ್‌ಗೆ ಸಹಿಸಲಾಗುತ್ತಿಲ್ಲ. ನಾನು ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರಂತೆ ಬಡಿದಾಡಬೇಕೆಂಬುದು ಅವರ ಆಸೆ. ಆದರೆ ಬಿಎಸ್‌ವೈ ಹಾಗೂ ಬೊಮ್ಮಾಯಿ ಒಟ್ಟಿಗಿರುವುದನ್ನು ಸಹಿಸಲಾಗದೆ ಕಾಂಗ್ರೆಸ್ ಕೆಟ್ಟ ಕುತಂತ್ರದ ರಾಜಕಾರಣ ಮಾಡುತ್ತಿದೆ ಆದರೆ ಇದಕ್ಕೆ ಯಾವ ಕಾರಣಕ್ಕೂ ರಾಜ್ಯದ ಜನ ಬಲಿಯಾಗುವುದಿಲ್ಲ ಎಂದರು.

ಅನಾರೋಗ್ಯವಲ್ಲ; ಅಪಮಾನ: ವೀರೇಂದ್ರ ಪಾಟೀಲ್, ನಿಜಲಿಂಗಪ್ಪನವರಿಗೆ ಅನಾರೋಗ್ಯ ಇರಲಿಲ್ಲ. ಆದರೆ ಅವರನ್ನು ವಿಮಾನ ನಿಲ್ದಾಣದಲ್ಲೇ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿ ಅಪಮಾನ ಮಾಡಿದರು. ಆದರೆ ಬಿ.ಎಸ್.ಯಡಿಯೂರಪ್ಪನವರು ತಾವಾಗಿಯೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇದೆರಡಕ್ಕೂ ಬಹಳ ವ್ಯತ್ಯಾಸವಿದೆ. ಲಿಂಗಾಯತ ನಾಯಕರಾದ ಯಡಿಯೂರಪ್ಪನವರನ್ನು ಅಪಮಾನ ಮಾಡಿ ಸಿಎಂ ಸ್ಥಾನದಿಂದ ಇಳಿಸಿದ್ದಾರೆಂಬ ಕಾಂಗ್ರೆಸ್ ಕುತಂತ್ರ ಹೇಳಿಕೆ ನೀಡಿದೆ ಎಂದು ಜನರಿಗೆ ತಿಳಿದಿದೆ. ವೀರೇಂದ್ರ ಪಾಟೀಲರು ಎಂತಹ ಒಳ್ಳೆ ಹೋರಾಟಗಾರರು ಎಂದು ನಾನು ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದಾಗ ನೋಡಿದ್ದೇನೆ. ಇಂದಿಗೂ ಶಿವಮೊಗ್ಗ ನಗರದ ಜನ ವೀರೇಂದ್ರ ಪಾಟೀಲರ ಹೆಸರೇಳಿಕೊಂಡು ನೀರು ಕುಡಿಯುತ್ತಿದ್ದೇವೆ. ಅಭಿವೃದ್ಧಿಪರ ಆಡಳಿತ ನಡೆಸಿದ್ದ ಅಂತಹವರನ್ನೇ ರಾಜೀವ್ ಗಾಂಧಿಯವರು ವಿಮಾನ ನಿಲ್ದಾಣದಲ್ಲೇ ಸಿಎಂ ಸ್ಥಾನದಿಂದ ಕಿತ್ತು ಹಾಕಿದ್ದನ್ನು ಜನ ಮರೆತಿಲ್ಲ ಎಂದು ತಿಳಿಸಿದರು.

ಕಾಂಗ್ರೆಸ್‌ಗೆ ನೇತೃತ್ವವಿಲ್ಲ: ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಗಂಡಸರು, ಗಂಡಸ್ತನದ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನಾಯಕರಿರುವುದು ಬಿಜೆಪಿಯಲ್ಲಿ ಮಾತ್ರ. ಜನರ ಮನಸ್ಸು ಗೆದ್ದಿರುವ ಮೋದಿ, ಅಮಿತ್‌ಷಾ ಅವರು ಹೋದಲ್ಲೆಲ್ಲಾ ಲಕ್ಷಾಂತರ ಜನ ಸೇರುತ್ತಾರೆ. ಜನ ಮೆಚ್ಚಿದ ನಾಯಕ ಬಿಜೆಪಿಯಲ್ಲಿದ್ದಾರೆ. ಹಾಗಾಗಿ ಅವರನ್ನು ಆಮಂತ್ರಿಸುತ್ತೇವೆ. ಬಿಜೆಪಿಯಲ್ಲಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲೂ ನಾಯಕರಿದ್ದೇವೆ. ಬಿಜೆಪಿಯವರು ಹೆಮ್ಮೆಯಿಂದ ಹೇಳುತ್ತೇವೆ. ಮೋದಿ ಅವರು ಪಕ್ಷ, ದೇಶಕ್ಕಷ್ಟೇ ಅಲ್ಲ ವಿಶ್ವ ನಾಯಕರು. ಆದರೆ ಕಾಂಗ್ರೆಸ್‌ನಲ್ಲಿ ನೇತೃತ್ವವೇ ಇಲ್ಲದ ಕಾರಣ ಪಕ್ಷ ಎಲ್ಲಿದೆ ಎಂದು ಹುಡುಕುವಂತಾಗಿದೆ. ಇಬ್ರಾಹಿಂ ಹೇಳಿಕೆಗೆ ಪ್ರತಿಕ್ರಿಯೆ ನೀಡುವ ಅಗತ್ಯವಿಲ್ಲ. ಏಕೆಂದರೆ ಅವರದು ರಾಷ್ಟ್ರೀಯ ಪಕ್ಷವೇ ಅಲ್ಲ ಎಂದರು.

ವಿಜಯ ಸಂಕಲ್ಪ ಯಾತ್ರೆ: ನಾಳೆ(ಮಾ.1)ರಿಂದ ರಾಜ್ಯದಲ್ಲಿ ನಾಲ್ಕು ಭಾಗದಿಂದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಆರಂಭವಾಗುತ್ತಿದೆ. ಬುಧವಾರ ಮಲೆ ಮಹದೇಶ್ವರ ಬೆಟ್ಟದಿಂದ ಆರಂಭವಾಗುವ ಯಾತ್ರೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಚಾಲನೆ ನೀಡಲಿದ್ದಾರೆ. ಆ ರಥದಲ್ಲಿ ನಾನು, ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ, ಸುನೀಲ್ ಕುಮಾರ್, ಆರಗ ಜ್ಞಾನೇಂದ್ರ, ವಿ.ಸೋಮಣ್ಣ ಸೇರಿದಂತೆ ಅನೇಕ ಪ್ರಮುಖರು ಭಾಗವಹಿಸುತ್ತಿದ್ದಾರೆ. ಮಾ.2ರಂದು ಸಂಗೊಳ್ಳಿ ರಾಯಣ್ಣ ಸಮಾಧಿ ಇರುವ ನಂದಗಡದಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್, ಮಾ.3ರಂದು 2 ರಥಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಚಾಲನೆ ನೀಡಲಿದ್ದಾರೆ. ರಾಜ್ಯದ 50 ನಾಯಕರು 4 ತಂಡಗಳಲ್ಲಿ ಪ್ರವಾಸದಲ್ಲಿ ಭಾಗಿಯಾಗಲಿದ್ದೇವೆ ಎಂದು ತಿಳಿಸಿದರು.

ಪಕ್ಷ ನಿರ್ಧರಿಸುತ್ತದೆ

ಕಡೆಗೂ ಸಚಿವ ಸ್ಥಾನ ಸಿಗದಿರುವ ಬಗ್ಗೆ ಪ್ರತಿಕ್ರಿಯಿಸಿದ ಈಶ್ವರಪ್ಪ, ಸಚಿವ ಸ್ಥಾನ ಸಿಗಲೇಬೇಕೆಂದು ಏನಾದರೂ ಯಾರಾದರೂ ಬರೆದುಕೊಟ್ಟಿದ್ದಾರಾ. ಯಾವಾಗ ಯಾರು ಮಂತ್ರಿಯಾಗಬೇಕು ಎಂದು ಕೇಂದ್ರದವರು ತೀರ್ಮಾನಿಸುತ್ತಾರೆ. ಬಿಜೆಪಿ ಶಾಸಕರೆಲ್ಲಾ ಮಂತ್ರಿಯಾಗಲು ಸಾಧ್ಯವೇ ಇಲ್ಲ. ಮುಂದಿನ ಚುನಾವಣೆ ಟಿಕೆಟ್ ವಿಚಾರವಾಗಿಯೂ ಕೇಂದ್ರ ಹಾಗೂ ರಾಜ್ಯದ ನಾಯಕರು ಒಮ್ಮತದಿಂದ ತೀರ್ಮಾನಿಸುತ್ತಾರೆ. 150 ಸ್ಥಾನ ಗೆಲ್ಲುವುದು ನಮ್ಮೆಲ್ಲರ ಮುಖ್ಯ ಉದ್ದೇಶವೇ ಹೊರತು ಯಾರಿಗೆ ಟಿಕೆಟ್ ಸಿಗಲಿದೆ ಎನ್ನುವುದಲ್ಲ. ಚೇಲಾಗಳನ್ನು ಇಟ್ಟುಕೊಂಡು, ಜಾತಿ, ಹಣದ ಆಧಾರದಲ್ಲಿ ಟಿಕೆಟ್‌ಗೆ ಒತ್ತಾಯಿಸುವ ವ್ಯವಸ್ಥೆ ಬಿಜೆಪಿಯಲ್ಲಿ ಇಲ್ಲ ಎಂದು ಹೇಳಿದರು.

ಸಿದ್ದರಾಮೇಶ್ವರ ಜಾತ್ರಾ ಮಹೋತ್ಸವ



ಮೈಸೂರು, ಫೆ28(ಎಂಟಿವೈ)- ಮೈಸೂರು ತಾಲೂಕಿನ ಸಜ್ಜೇಹುಂಡಿ ಗ್ರಾಮದ ಶ್ರೀ ಹೊಂಬಾಳೇಶ್ವರಿ ಶಿವಗುರು ಸಿದ್ದರಾಮೇಶ್ವರ ಜಾತ್ರಾ ಮಹೋತ್ಸವ ಹಾಗೂ ಶ್ರೀ ಸಿದ್ದರಾಮೇಶ್ವರ ದೇವಾಲಯದ ಈಶ್ವರಲಿಂಗ ಪ್ರತಿಷ್ಠಾಪನಾ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು.

ಎರಡು ದಿನಗಳ ಈ ಜಾತ್ರಾ ಮಹೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರೂ ಸೇರಿದಂತೆ ಅಪಾರ ಸಂಖ್ಯೆ ಭಕ್ತರು ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದರು. ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಗ್ರಾಮದ ಬೀದಿಗಳಲ್ಲಿ ಶ್ರೀ ಹೊಂಬಾಳೇಶ್ವರಿ ಶಿವಗುರು ಸಿದ್ದರಾಮೇಶ್ವರ ಸ್ವಾಮಿ ದೇವರ ಉತ್ಸವ, ಗ್ರಾಮದ ಬಸವೇಶ್ವರ ಸ್ವಾಮಿಯ ಮೆರವಣಿಗೆ ಆಯೋಜಿಸಲಾಗಿತ್ತು. ಗಣೇಶ್ ದೀಕ್ಷಿತ್ ಹಾಗೂ ಗುಡ್ಡಪ್ಪ ಎಂ.ಸಿದ್ದರಾಜು ನೇತೃತ್ವದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ ನೆರವೇರಿಸಲಾಯಿತು. ಫೆ.27ರಂದು ಮುಂಜಾನೆ 5.30ರಿಂದ 6.30ರವರೆಗೆ ಮಕರ ಲಗ್ನದಲ್ಲಿ ಈಶ್ವರಲಿಂಗ ಪ್ರತಿಷ್ಠಾಪನೆ ಮಾಡಿ, ಕಲಾಹೋಮ, ಗೋಪೂಜೆ ನೆರವೇರಿಸಿ ಪೂರ್ಣಾಹುತಿ ನೆರವೇರಿಸಲಾಯಿತು. ಈ ಜಾತ್ರಾ ಮಹೋತ್ಸವದಲ್ಲಿ ಕೇರ್ಗಳ್ಳಿ ಗಡಿ, ಗೌಹಳ್ಳಿ ಗಡಿ, ವರಕೋಡು ಗಡಿ, ದುದ್ದಗೆರೆ ಗಡಿ ಸೇರಿದಂತೆ ಇನ್ನಿತರ ಗಡಿಗಳಿಂದ ಪೂಜಾ ಕುಣಿತ, ಕಂಸಾಳೆ, ಬಸವ ಹಾಗೂ ವೀರಮಕ್ಕಳ ಕುಣಿತದ ತಂಡ ಸಂಪ್ರದಾಯದಂತೆ ಆಗಮಿಸಿ ಜಾತ್ರೆಗೆ ಮೆರಗು ನೀಡಿದರು.



ಇತ್ತೀಚೆಗೆ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದ ಮಾಜಿ ಶಾಸಕರೂ ಆದ ಪ್ರಸಿದ್ಧ ಉದ್ಯಮಿ ಸಂದೇಶ್ ನಾಗರಾಜ್ ಅವರನ್ನು ಮೈಸೂರು ನಗರ ಕಾಂಗ್ರೆಸ್ ಕೆ.ಆರ್.ಕ್ಷೇತ್ರದ ಮುಖಂಡರಾದ ಶಂಕರ್, ಶಶಿಕಾಂತ್, ಸಾಗರ್, ನಾಗೇಶ್, ಮಂಜು, ಪಟೇಲ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಮಸಾಲೆ ಪದಾರ್ಥಗಳು ಆರೋಗ್ಯಕ್ಕೆ ಉತ್ತಮ

'ಮಸಾಲೆಗಳು, ಆರೋಗ್ಯ ಪರಿಣಾಮಗಳು' ಕುರಿತು ಉಪನ್ಯಾಸ




ಮೈಸೂರು, ಫೆ.28(ಎಸ್‌ಪಿಎನ್)- ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ 'ಮಸಾಲೆಗಳು ಮತ್ತು ಆರೋಗ್ಯ ಪರಿಣಾಮಗಳು' ಕುರಿತು ಮೈಸೂರಿನ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮಸಾಲೆಗಳು ಮತ್ತು ಸುವಾಸನೆ ವಿಜ್ಞಾನ ವಿಭಾಗ(ರಾಸಾಯನಿಕ ವಿಜ್ಞಾನ)ದ ಪ್ರೊ. ಡಾ.ಎಸ್.ನಾಗರಾಜನ್ ಮಂಗಳವಾರ ವಿಶೇಷ ಉಪನ್ಯಾಸ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕದ ವತಿಯಿಂದ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ' ಅಂಗವಾಗಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಸಾಲೆ ಪದಾರ್ಥಗಳ ಸೇವನೆ ದೇಹದ ಆರೋಗ್ಯ ದೃಷ್ಟಿಯಿಂದ ಉತ್ತಮ. ಊಟದಲ್ಲಿ ಉಪ್ಪಿನ ಕಾಯಿ ಸೇವನೆ ನಾಲಿಗೆಗೆ ರುಚಿ ನೀಡುತ್ತದೆ. ನಿಂಬೆಹಣ್ಣು, ಈರಳೆಕಾಯಿ, ಮಾವಿನ ಕಾಯಿ ಸೇರಿದಂತೆ ಇತರ ಪದಾರ್ಥಗಳಿಂದ ತಯಾರು ಮಾಡುತ್ತಾರೆ. ಊಟದ ಜೊತೆಗೆ ಸೇವನೆ ಮಾಡುವುದರಿಂದ ಸ್ವಲ್ಪ ರುಚಿ ಕಡಿಮೆಯಾಗಿದ್ದರೂ ಇದರ ಮೂಲಕ ರುಚಿ ಪಡೆದುಕೊಳ್ಳಲು ಸಹಕಾರಿಯಾಗುತ್ತದೆ. ಮೈಯಸ್ ರಕ್ತದೊತ್ತಡ(ಬಿಪಿ) ಇರುವವರಿಗೆ ಉಪ್ಪಿನಕಾಯಿ ಸೇವನೆ ಉಪಯುಕ್ತ. ಬೇಸಿಗೆ ಕಾಲದಲ್ಲಿ ನಿಂಬೆಹಣ್ಣು ಜ್ಯೂಸ್ ಕುಡಿಯುವುದರಿಂದ ದೇಹದ ದಣಿವಾರಿಸಿಕೊಳ್ಳಬಹುದು. ಈ ಪಾನೀಯ ಸೇವನೆಯಿಂದ ಮೈಯಸ್ ಮಧುಮೇಹ ಇರುವವರಿಗೆ ಒಳ್ಳೆಯದು ಎಂದು ಇದರ ಉಪಯುಕ್ತತೆ ಬಗ್ಗೆ ತಿಳಿಸಿದರು.

ಹೆಚ್ಚು ಕುದಿಸಿದ 'ಟೀ' ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ. ಕರ್ನಾಟಕದ ಟೀ ಸ್ಟಾಲ್‌ಗಳಲ್ಲಿ ತಯಾರಿಸುವ 'ಟೀ'ಯನ್ನು ಹೆಚ್ಚು ಕುದಿಸುತ್ತಾರೆ. ಇದರಿಂದ 'ಟೀ' ಸೊಪ್ಪಿನಲ್ಲಿರುವ ನೈಸರ್ಗಿಕ ಗುಣಗಳು ಕಡಿಮೆಯಾಗಿ ಸೇವನೆಗೆ ರುಚಿ ಇರುವುದಿಲ್ಲ. ಅಸ್ಸಾಂನಲ್ಲಿ ಬೆಳೆಯುವ 'ಟೀ' ಸೊಪ್ಪಿಗೆ ಉತ್ತಮ ಬೇಡಿಕೆಯಿದ್ದು, ಈ 'ಟೀ' ಸೇವನೆಗೆ ಎಲ್ಲರೂ ಇಷ್ಟಪಡುತ್ತಾರೆ ಎಂದು ತಿಳಿಸಿದರಲ್ಲದೆ, ದಿನನಿತ್ಯ ಬಳಸುವ ವಿವಿಧ ಸಾಂಬಾರು ಪದಾರ್ಥಗಳ ಉಪಯೋಗಗಳ ಕುರಿತು ಎಳೆಎಳೆಯಾಗಿ ವಿವರಿಸಿದರು. ಈ ವೇಳೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್(ಇಂಡಿಯಾ) ಮೈಸೂರು ಘಟಕ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಬಾಬು, ಜಂಟಿ ಕಾರ್ಯದರ್ಶಿ ಡಾ.ಆರ್.ದೀಪ ಉಪಸ್ಥಿತರಿದ್ದರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಆಸ್ಪತ್ರೆಗೆ ದಾಖಲು



ಬೆಂಗಳೂರು, ಫೆ.28- ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರು ಬೆಳಗ್ಗೆ 10.30ಕ್ಕೆ ಆಸ್ಪತ್ರೆಗೆ ದಾಖಲಾಗಿದ್ದು, ಕಾಲುನೋವಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ದೇವೇಗೌಡರು ಆಸ್ಪತ್ರೆಗೆ ತೆರಳುವ ಬಗ್ಗೆ ಬೆಳಿಗ್ಗೆ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಮಾಹಿತಿ ನೀಡಿದ್ದರು. ದೇವೇಗೌಡರು ಇಂದು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿದ್ದಾರೆ. ಆಸ್ಪತ್ರೆಯಿಂದ ಬಂದ ಬಳಿಕ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ನೀಡಿಕೆ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದ್ದರು. ಇದೀಗ ದೇವೇಗೌಡರು ಆಸ್ಪತ್ರೆಗೆ ದಾಖಲಾಗಿರುವುದು ತಿಳಿದುಬಂದಿದೆ. ದೇವೇಗೌಡರ ಆರೋಗ್ಯ ಸ್ಥಿತಿ ಅಷ್ಟೊಂದು ಉತ್ತಮವಾಗಿಲ್ಲ ಎಂದು ಎರಡು ದಿನಗಳ ಹಿಂದೆಯೇ ಕುಮಾರಸ್ವಾಮಿ ತಿಳಿಸಿದ್ದರು. ಹಾಸನ ಕ್ಷೇತ್ರದ ಟಿಕೆಟ್ ಹಂಚಿಕೆ ಬಗ್ಗೆ ದೇವೇಗೌಡರ ಸಮ್ಮುಖದಲ್ಲಿ ನಿರ್ಧಾರ ಕೈಗೊಳ್ಳುತ್ತೇವೆ. ಈ ವಿಚಾರವಾಗಿ ದೇವೇಗೌಡರಿಗೆ ಹೆಚ್ಚಿನ ಹೊರೆ ನೀಡುವುದು ತಪ್ಪಾಗುತ್ತದೆ. ದೇವೇಗೌಡರ ಆರೋಗ್ಯವೇ ಮುಖ್ಯ ಎಂದು ಕುಮಾರಸ್ವಾಮಿ ಹೇಳಿದ್ದರು. ಈ ಮಧ್ಯೆ ಮಾಜಿ ಪ್ರಧಾನಿ ದೇವೇಗೌಡರು ಇನ್ನೆರಡು ದಿನದಲ್ಲಿ ಆಸ್ಪತ್ರೆಯಿಂದ ಮನೆಗೆ ಮರಳುವುದಾಗಿ ಟ್ವೀಟ್ ಮೂಲಕ ತಿಳಿಸಿದ್ದಾರೆ.

ವಚನಕಾರರ ಹೋರಾಟ ಯುವ ಪೀಳಿಗೆಗೆ ಮಾದರಿ

ಮೈಸೂರು, ಫೆ.28(ಎಸ್‌ಪಿಎನ್)-ಶರಣ ಸಾಹಿತ್ಯ ಇಂದಿಗೂ ಪ್ರಸ್ತುತ. ಹನ್ನೆರಡನೇ ಶತಮಾನದಲ್ಲಿ ವಚನಕಾರರು ಸಮಾನತೆಗಾಗಿ ಮಾಡಿದ ಹೋರಾಟ ಇಂದಿನ ಯುವ ಪೀಳಿಗೆಗೆ ಮಾದರಿ ಎಂದು ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಚನಗಳು ಸಾರ್ವಕಾಲಿಕ ಸತ್ಯವಾಗಿದ್ದು, ವಿಶ್ವಮನ್ನಣೆ ಪಡೆದಿವೆ. 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಅವರ ಸಂಗಡಿಗರು ವಚನ ಸಾಹಿತ್ಯವನ್ನು ಇಟ್ಟುಕೊಂಡು ಭಕ್ತಿ ಮಾರ್ಗದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಪ್ರಯತ್ನ ನಡೆಸಿದ್ದಾರೆ ಎಂದು ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮ.ಗು.ಸದಾನಂದಯ್ಯ ಮಾತನಾಡಿ, ನುಡಿದರೆ ಮುತ್ತಿನ ಹಾರದಂತೆ ಎನ್ನುವ ವಚನದಂತೆ ಭಾಷೆ ಇರಬೇಕು. ಆದರೆ, ಕನ್ನಡ ಭಾಷೆಯನ್ನು ಇತ್ತೀಚಿನ ದಿನಗಳಲ್ಲಿ ಅವಮಾನಕರ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಪ್ರಾಧ್ಯಾಪಕಿ ಪ್ರೊ.ಎಚ್.ಎಸ್. ಅಂಬಿಕಾ ಅವರು ವಚನ ಸಾಹಿತ್ಯ ಮತ್ತು ಸಮೂಹ ಸಂವಹನ ವಿಷಯ ಕುರಿತು ಮಾತನಾಡಿದರು. ಬಳಿಕ ಕೆ.ಆರ್. ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ ಅವರು ವಚನ-ಭಾಷೆ ಮತ್ತು ಸಂಸ್ಕೃತಿ ವಿಚಾರವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್. ಸಪ್ನಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಇದ್ದರು.

ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಿಂದ ಟನ್‌ಗೆ 150 ರೂ. ಹೆಚ್ಚುವರಿ ಹಣ ಸೇರಿ

ನಾನಾ ಬೇಡಿಕೆ ಈಡೇರಿಸಲು ಆಗ್ರಹಿಸಿ ಕಬ್ಬು ಬೆಳೆಗಾರರ ಪ್ರತಿಭಟನೆ



ಮೈಸೂರು, ಫೆ.28(ಎಂಟಿವೈ)- ಕಬ್ಬು ಬೆಳೆಗಾರರಿಗೆ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಿಂದ ಟನ್‌ಗೆ ಹೆಚ್ಚುವರಿ 150 ರೂ. ಕೊಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದರು.

ಮೈಸೂರಿನ ಗನ್‌ಹೌಸ್ ಬಳಿ ಇರುವ ಕುವೆಂಪು ಉದ್ಯಾನವನದ ಬಳಿಯಿಂದ ಕಬ್ಬಿನ ಜಲ್ಲೆ ಹಿಡಿದು ಮೆರವಣಿಗೆ ಆರಂಭಿಸಿದ ರೈತರು, ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು. ಈ ವೇಳೆ ರಸ್ತೆಯಲ್ಲಿ ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕಬ್ಬು ಬೆಳೆಗಾರರ ಸಂಘದ ಸತತ 39 ದಿನಗಳ ಹೋರಾಟದ ಪರಿಣಾಮವಾಗಿ ಕಬ್ಬಿಗೆ ಹೆಚ್ಚುವರಿ 150 ರೂ. ನೀಡಲು ಸರ್ಕಾರ ಸೂಚಿಸಿತ್ತು ಆದರೆ, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಹೆಚ್ಚುವರಿ ಹಣ ಪಾವತಿಸದೆ ಇರುವ ಬಗ್ಗೆ ದೂರು ಸಲ್ಲಿಸಿದರೂ ಯಾವುದೇ ಕ್ರಮ ಜಾರಿಯಾಗಿಲ್ಲ. ಅರಿಶಿನ ಬೆಳೆಗೆ ಬೆಲೆ ಕುಸಿತವಾಗಿದ್ದು ಉತ್ಪಾದನಾ ವೆಚ್ಚವೂ ಸಿಗುತ್ತಿಲ್ಲ. ಹೀಗಾಗಿ ಕನಿಷ್ಠ ಬೆಂಬಲ ಬೆಲೆ ಕ್ವಿಂಟಾಲ್‌ಗೆ 17,500 ರೂ ನಿಗದಿ ಮಾಡಬೇಕು. ಕಾವೇರಿ, ಕಬಿನಿ ಅಚ್ಚುಕಟ್ಟು ನಾಲೆಗಳ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಕಬ್ಬು, ಬಾಳೆ ಇನ್ನಿತರ ಬೆಳೆಗಳ ರಕ್ಷಣೆಗಾಗಿ ಬೇಸಿಗೆಯಲ್ಲಿ ದನ ಕರುಗಳ ಕುಡಿಯುವ ನೀರಿಗಾಗಿ ಕೆರೆ ಕಟ್ಟೆಗಳನ್ನು ತುಂಬಿಸಲು ಕೂಡಲೇ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ನೀಡಬೇಕು. ಕಾಡು ಪ್ರಾಣಿಗಳ ದಾಳಿಯಿಂದ ರೈತರು ಭಯಭೀತರಾಗಿದ್ದು, ಹಗಲು ವೇಳೆ ವಿದ್ಯುತ್ ನೀಡಬೇಕು. ಭತ್ತ, ರಾಗಿ ಇತರೆ ಉತ್ಪನ್ನಗಳ ಖರೀದಿ ಕೇಂದ್ರಗಳಲ್ಲಿ ರೈತರಿಂದ ಖರೀದಿ ಮಿತಿ ವಿಧಿಸಿರುವುದನ್ನು ರದ್ದುಗೊಳಿಸಬೇಕು, ಬ್ಯಾಂಕ್‌ಗಳಲ್ಲಿ ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಮಾನದಂಡ ನೀತಿ ಕೈ ಬಿಡಬೇಕು. ಕೃಷಿ ಸಾಲ ನೀತಿ ಬದಲಾಗಬೇಕು, ರೈತನ ಭೂಮಿ ಮೌಲ್ಯಕ್ಕೆ ಅನುಗುಣವಾಗಿ ಶೇ.75 ರಷ್ಟು ಸಾಲ ನೀಡಬೇಕು, ಕೃಷಿ ಉತ್ಪಾದನೆಗೆ ಬಡ್ಡಿ ರಹಿತ ಸಾಲ ನೀಡಬೇಕು ಎಂದು ಆಗ್ರಹಿಸಿದರು.

ರಸಗೊಬ್ಬರ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಕೆಲವು ಕಡೆ ಕಳಪೆ ರಸಗೊಬ್ಬರ ಕೀಟನಾಶಕ ಮಾರಾಟ ಮಾಡುವುದನ್ನು ತಡೆಗಟ್ಟಬೇಕು. ರಾಜ್ಯದಲ್ಲಿ ಜಾರಿಗೆ ಬಂದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಕೂಡಲೇ ರದ್ದುಗೊಳಿಸಬೇಕು. ಸಾವಿರಾರು ರೈತರು ಈ ಕಾಯ್ದೆ ಜಾರಿಯಾದ ಮೇಲೆ ಕೃಷಿ ಉತ್ಪನ್ನಗಳನ್ನು ರಹದಾರಿ ಇಲ್ಲದ ದಲ್ಲಾಳಿಗಳಿಗೆ ಮಾರಾಟ ಮಾಡಿ, ಕೋಟ್ಯಂತರ ರೂಪಾಯಿ ಹಣ ಕಳೆದುಕೊಂಡಿದ್ದಾರೆ. ರೈತರಿಗೆ ನ್ಯಾಯಬದ್ಧವಾಗಿ ಸಾಗುವಳಿ ಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು ಕಚೇರಿಯಲ್ಲಿ ಇಲ್ಲದ ಕಾರಣ ಎಡಿಸಿ ಕವಿತಾ ರಾಜಾರಾಂ ಪ್ರತಿಭಟನಾಕಾರರ ಮನವಿ ಸ್ವೀಕರಿಸಿದರು. ಜಿಲ್ಲಾಧಿಕಾರಿಗಳು ಮೂರು ನಾಲ್ಕು ದಿನಗಳಲ್ಲಿ ಸಭೆ ನಡೆಸಿ ನಿಮ್ಮ ಸಮಸ್ಯೆ ಬಗೆಹರಿಸಲಿದ್ದಾರೆ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಅಂತ್ಯಗೊಳಿಸಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು, ಬರಡನಪುರ ನಾಗರಾಜು, ಜಿಲ್ಲಾಧ್ಯಕ್ಷ ಸೋಮಶೇಖರ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಹಾಡ್ಯ ರವಿ, ಗಿರೀಶ್, ಕಿರಗಸೂರು ಶಂಕರ್, ರಾಜು, ಗೋವಿಂದರಾಜು, ಗೌರಿಶಂಕರ್, ರಾಣಿ, ಪುಟ್ಟಸುಬ್ಬಮ್ಮ, ಜಯಮ್ಮ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ತಿ.ನರಸೀಪುರ ಪುರಸಭೆಗೆ 76.25 ಲಕ್ಷ ಉಳಿತಾಯ ಬಜೆಟ್

ಪ್ರಸಕ್ತ ಸಾಲಿನಲ್ಲಿ 12.52 ಕೋಟಿ ರೂ. ಆದಾಯ ನಿರೀಕ್ಷೆ: ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ

ತಿ.ನರಸೀಪುರ, ಫೆ.28– ಪಟ್ಟಣದ ಪುರಸಭೆಯಿಂದ 2023–24ನೇ ಸಾಲಿನಲ್ಲಿ 12,52,00,000 ರೂ. ಆದಾಯ ನಿರೀಕ್ಷೆ ಮಾಡಲಾಗಿದೆ ಎಂದು ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಪ್ರಸಕ್ತ ಸಾಲಿನ ಬಜೆಟ್ ಮಂಡಿಸಿ ಮಾತನಾಡಿದ ಅವರು, ಈ ಬಾರಿ 76,25,274 ರೂ. ಉಳಿತಾಯ ಬಜೆಟ್ ಮಂಡಿಸಲಾಗಿದೆ. ಪಟ್ಟಣದ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಬಜೆಟ್ ರಚಿಸಲಾಗಿದೆ. ಮುಂದಿನ ದಿನಗಳಲ್ಲಿ ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಆಸ್ತಿ ತೆರಿಗೆ 2.42 ಕೋಟಿ, ಉದ್ದಿಮೆ ಪರವಾನಗಿ 13.50 ಲಕ್ಷ, ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕ ಶುಲ್ಕ 55 ಲಕ್ಷ, ವಾಣಿಜ್ಯ ಮಳಿಗೆ ಬಾಡಿಗೆ 36 ಲಕ್ಷ, ವಿದ್ಯುತ್ ಅನುದಾನ 2.65 ಕೋಟಿ, ಮುಕ್ತ ನಿಧಿ ಅನುದಾನ 1.13 ಕೋಟಿ, ನಿರ್ದಿಷ್ಟ ಅನುದಾನ ಸೇರಿದಂತೆ ಇತರೆ ಅನುದಾನಗಳಿಂದ 12.52 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದರು.

ಪರಿಶಿಷ್ಟ ಪಂಗಡ, ಪ.ಜಾತಿ ಅಭಿವೃದ್ಧಿ ನಿಧಿಗೆ 23 ಲಕ್ಷ, ಪತ್ರಕರ್ತರ ಆರೋಗ್ಯ ತಪಾಸಣೆ ಹಾಗೂ ಆರೋಗ್ಯ ವಿಮೆಗಾಗಿ 1 ಲಕ್ಷ, ವಿದ್ಯುತ್ ಶುಲ್ಕ 2.65 ಕೋಟಿ, 14 ಮತ್ತು 15ನೇ ಹಣಕಾಸು ಯೋಜನೆಯಡಿ ರಸ್ತೆ ಸೇತುವೆ ಮತ್ತು ಮಳೆ ನೀರಿನ ಚರಂಡಿಗಳು, ತೆರೆದ ಚರಂಡಿಗಳ ನಿರ್ಮಾಣಕ್ಕೆ 2 ಕೋಟಿ, ರಾಷ್ಟ್ರ ನಾಯಕರ ಪ್ರತಿಮೆಗಳ ನಿರ್ಮಾಣಕ್ಕಾಗಿ 10ಲಕ್ಷ, ಸ್ವಾಗತ ಕಮಾನು, ರಸ್ತೆ ಬದಿ ಮಾರ್ಗಸೂಚಿ ಫಲಕಗಳ ಅಳವಡಿಕೆ ಹಾಗೂ ಇತರೆ ನಾಗರಿಕ ಸೌಲಭ್ಯಗಳಿಗೆ 1.30 ಕೋಟಿ ರೂ. ಮೀಸಲಿರಿಸಲಾಗಿದೆ ಎಂದರು.

ಬಜೆಟ್ ಮಂಡನೆ ನಂತರ ನಡೆದ ಚರ್ಚೆಯಲ್ಲಿ ಮೊದಲಿಗೆ ನಾಮನಿರ್ದೇಶಿತ ಸದಸ್ಯ ಎನ್.ಲೋಕೇಶ್ ಮಾತನಾಡಿ, ಪತ್ರಕರ್ತರ ಆರೋಗ್ಯ ವಿಮೆಗಾಗಿ ಮೀಸಲಿಟ್ಟಿರುವ ಒಂದು ಲಕ್ಷ ಹಣ ಸಾಲದು ಕನಿಷ್ಠ 5 ಲಕ್ಷಗಳನ್ನಾದರೂ ಇಡುವಂತೆ ಅಧ್ಯಕ್ಷರಲ್ಲಿ ಮನವಿ ಮಾಡಿದರು.



ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಹೀದ್, ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಮಾಜಿ ಉಪಾಧ್ಯಕ್ಷೆ ಪ್ರೇಮಾ ಮರಯ್ಯ, ಬಾದಾಮಿ ಮಂಜು, ತುಂಬಲ ಪ್ರಕಾಶ್, ಎಲ್.ಮಂಜುನಾಥ್, ಮೆಡಿಕಲ್ ನಾಗರಾಜು, ಬೇಬಿ ಹೇಮಂತ್, ಮಹದೇವಮ್ಮ, ರೂಪಾ ಪರಮೇಶ್, ಮಾದೇವಿ, ಸಿಸ್ಟಮ್ ಸಿದ್ದು, ತೇಜಸ್ವಿನಿ, ರೂಪಾ ಕರಿಯಪ್ಪ, ಶೋಭಾರಾಣಿ ಮಲ್ಲೇಶ್, ರಾಜೇಶ್ವರಿ, ನಾಮನಿರ್ದೇಶಿತ ಸದಸ್ಯರಾದ ಕೆ.ನಂಜುಂಡಸ್ವಾಮಿ. ಲೋಕೇಶ್, ಚಿಕ್ಕಮಹದೇವ, ಸರ್ವಮಂಗಳ, ಮುಖ್ಯಾಧಿಕಾರಿ ಎಚ್.ಆರ್. ಬಸವರಾಜು, ಆರೋಗ್ಯಾಧಿಕಾರಿ ಲೋಕೇಶ್ವರಿ, ಜೆ.ಇ.ಸಿದ್ದಯ್ಯ, ಸಮನ್ವಯಾಧಿಕಾರಿ ಮಹದೇವ ಇತರರಿದ್ದರು.

ಬೀಚನಹಳ್ಳಿ ಜಿ.ವಿ.ಸೀತಾರಾಮು ಹೆಗಲಿಗೆ ಹೊಸ ಜವಾಬ್ದಾರಿ

ಜಿಲ್ಲಾ ಕಾಂಗ್ರೆಸ್ ಮಾಧ್ಯಮ್ ಪ್ರಮುಖ್ ಆಗಿ ನೇಮಕ

ಹೆಚ್.ಡಿ.ಕೋಟೆ, ಫೆ.28– ಮೈಸೂರು ಜಿಲ್ಲಾ ಮಾಧ್ಯಮ ಹಾಗೂ ಸಂವಹನ ವಿಭಾಗದ ವಕ್ತಾರರಾಗಿ ತಾಲೂಕಿನ ಬೀಚನಹಳ್ಳಿ ಗ್ರಾಮದ ಜಿ.ವಿ.ಸೀತಾರಾಮು ಅವರನ್ನು ನೇಮಕ ಮಾಡಲಾಗಿದೆ.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರಾಗಿ ಮತ್ತು ಕಾಂಗ್ರೆಸ್ ಪಕ್ಷದ ಯುವ ಮುಖಂಡನಾಗಿ ಪಕ್ಷ ಸಂಘಟನೆಗೆ ಶ್ರಮಿಸಿದ ಜಿ.ವಿ.ಸೀತಾರಾಮ್‌ಗೆ ಕಾಂಗ್ರೆಸ್‌ನ ವರಿಷ್ಠರು ನೂತನ ಜವಾಬ್ದಾರಿ ನೀಡಿದ್ದಾರೆ. ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಪ್ರಿಯಾಂಕ ಖರ್ಗೆ ಸೇರಿದಂತೆ ಪ್ರಮುಖರ ಸಹಕಾರದಿಂದ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ವಕ್ತಾರ ಸ್ಥಾನ ದೊರಕಿದ್ದು, ಅಚ್ಚುಕಟ್ಟಾಗಿ ನಿರ್ವಹಿಸಿ ಪಕ್ಷ ಸಂಘಟನೆಗೆ ಶ್ರಮಿಸುತ್ತೇನೆ ಎಂದು ಸೀತಾರಾಮು ತಿಳಿಸಿದ್ದಾರೆ.

ಬೀಚನಹಳ್ಳಿ ಮತ್ತು ಕೋಟೆ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಸೀತಾರಾಮು, 1989ರಲ್ಲಿ ಹೆಚ್.ಡಿ.ದೇವೇಗೌಡರ ನೇತೃತ್ವದ ಸಮಾಜವಾದಿ ಜನತಾ ಪಕ್ಷದಲ್ಲಿ ಗುರುತಿಸಿಕೊಂಡರು. ಸಹೋದರ ದಿ.ಮಾಜಿ ಶಾಸಕ ಎಂ.ಪಿ. ವೆಂಕಟೇಶ್ ಅವರ ಒಡನಾಟದಲ್ಲಿದ್ದು, ತಾಲೂಕಿನ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ಸಿದ್ದರಾಮಯ್ಯ ಜೊತೆಗೂಡಿ ಅವರ ಒಡನಾಟ ಬೆಳೆಸಿಕೊಂಡರು. ನಂತರ ಬದಲಾದ ರಾಜಕೀಯದಲ್ಲಿ 1991 ರಲ್ಲಿ ಕಾಂಗ್ರೆಸ್ ಕಾರ್ಯಕರ್ತನಾಗಿ ಕೆಲಸ ನಿರ್ವಹಿಸುವ ಜೊತೆಗೆ 1992ರಲ್ಲಿ ಯುವ ಕಾಂಗ್ರೆಸ್ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿದರು. 1994ರಲ್ಲಿ ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯ ಜೊತೆಯಾದ ಸೀತಾರಾಮು, 2006ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಬಳಿಕ 2008ರಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರನಾಗಿ, 2016ರಲ್ಲಿ ಕ್ಯಾಬಿನೆಟ್ ದರ್ಜೆಯ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಇವರ ಕಾರ್ಯವೈಖರಿ ಮತ್ತು ಪಕ್ಷದ ಸಂಘಟನೆ ಗುರುತಿಸಿ ಪಕ್ಷದ ವರಿಷ್ಠರು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ವಕ್ತಾರರನ್ನಾಗಿ ನೇಮಕ ಮಾಡಿದ್ದಾರೆ.

ಮಾ.17ಕ್ಕೆ, ಹಾಡ್ಯ ಏತ ನೀರಾವರಿ ಯೋಜನೆಗೆ ಚಾಲನೆ: ಸಾರಾ



ಚುಂಚನಕಟ್ಟೆ, ಫೆ.28– ಮುಂಬರುವ ಮಾ.17ರಂದು 16 ಕೋಟಿ ವೆಚ್ಚದ ಹಾಡ್ಯ ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಗೊಲ್ಲರಕೊಪ್ಪಲು ಗ್ರಾಮದ ವಾಲ್ಮೀಕಿ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಚುಂಚನಕಟ್ಟೆ ಹೋಬಳಿ ಬರಪೀಡಿತ ಪ್ರದೇಶಗಳಾದ ಮಾಯಿಗೌಡನಹಳ್ಳಿ ಮತ್ತು ಹೊಸಕೋಟೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಉಂಟಾಗುತ್ತಿದ್ದ ನೀರಿನ ಬವಣೆ ತಪ್ಪಿಸುವ ಸಲುವಾಗಿ ಈ ಏತ ನೀರಾವರಿ ಯೋಜನೆ ಹಮ್ಮಿಕೊಳ್ಳಲಾಗಿದೆ. ಇದು ನನ್ನ ಅವಧಿಯ ಶಾಶ್ವತ ಕೆಲಸವಾಗಿದ್ದು ಈ ಭಾಗದ ಜನತೆ ಎಂದಿಗೂ ಇದನ್ನು ಮರೆಯುವುದಿಲ್ಲ ಎಂದರು.

ಕ್ಷೇತ್ರದಲ್ಲಿ ಯಾವುದೇ ಸಣ್ಣಪುಟ್ಟ ಸಮಾಜಗಳನ್ನು ನಿರ್ಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ. ಇದಕ್ಕೆ ಗೊಲ್ಲರಕೊಪ್ಪಲು ಗ್ರಾಮದ ಅಭಿವೃದ್ಧಿಯೇ ಸಾಕ್ಷಿ. ವಾಲ್ಮೀಕಿ ಸಮುದಾಯ ಭವನಕ್ಕೆ 50 ಲಕ್ಷ ರೂ. ನೀಡಿದ್ದು, ಗ್ರಾಮದ ರಸ್ತೆ ಹಾಗೂ ಮಳೆಗಾಲದಲ್ಲಿ ನೀರು ತುಂಬುತ್ತಿದ್ದ ಕಾರಣ ಇದೀಗ 30 ಲಕ್ಷ ರೂ. ವೆಚ್ಚದಲ್ಲಿ ಚರಂಡಿ ಕಾಮಗಾರಿಗೂ ಅನುದಾನ ನೀಡಲಾಗಿದೆ ಎಂದರು. ಈ ವೇಳೆ ತಂದ್ರೆ ಗ್ರಾಮದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಗ್ರಾಮದಿಂದ ರಾಮನಾಥಪುರ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಈ ವೇಳೆ ಹಾಡ್ಯ ಸಹಕಾರ ಸಂಘದ ಮಾಜಿ ಅಧ್ಯಕ್ಷ ಮಹೇಶ್, ಕುಮಾರಪ್ಪ, ತ್ರಿಜೇಂದ್ರ, ಚಂದ್ರೇಗೌಡ, ಯಜಮಾನರಾದ ತಮ್ಮಣ್ಣನಾಯಕ, ಚಲುವನಾಯಕ, ಸುಬ್ಬನಾಯಕ, ಶಿವರಾಜಶೆಟ್ಟಿ, ಕೃಷ್ಣನಾಯಕ ಜೆಡಿಎಸ್ ಮುಖಂಡರಾದ ಮಧು, ಈರಣ್ಣ, ಶಂಕರ, ಹರೀಶ, ರೇವಣ್ಣ, ಶಶಿಧರ ಸೇರಿದಂತೆ ಮತ್ತಿತರರಿದ್ದರು.

ಕೂಡ್ಲಾಪುರ ಗ್ರಾಪಂಗೆ ಮಾಲಾಂಬಿಕ ಸದಸ್ಯೆ



ನಂಜನಗೂಡು, ಫೆ.28– ತಾಲೂಕಿನ ಕೂಡ್ಲಾಪುರ ಗ್ರಾಪಂ ಸದಸ್ಯೆಯಾಗಿ ಮಾಲಾಂಬಿಕ ಆಯ್ಕೆಯಾಗಿದ್ದಾರೆ. ಈ ಹಿಂದಿನ ಸದಸ್ಯೆ ಸರಸ್ವತಿ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆದಿತ್ತು. ಹುಣಸನಾಳು ಗ್ರಾಮದ ಮಾಲಾಂಬಿಕ ಮತ್ತು ಸಿದ್ದಮ್ಮ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮಂಗಳವಾರ ತಾಲೂಕು ಕಚೇರಿಯಲ್ಲಿ ಮತಎಣಿಕೆ ನಡೆಸಲಾಯಿತು. ಮಾಲಾಂಬಿಕ 371 ಮತ ಪಡೆದು ವಿಜಯಶಾಲಿಯಾದರೆ, ಸಿದ್ದಮ್ಮ 232 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಗುರುಮಹದೇವು, ಮಾಲಾಂಬಿಕ ಅವರಿಗೆ ಪ್ರಮಾಣಪತ್ರ ವಿತರಿಸಿದರು.

ನೂತನ ಸದಸ್ಯೆ ಮಾಲಾಂಬಿಕ ಮಾತನಾಡಿದರು. ಈ ವೇಳೆ ಮುಖಂಡರಾದ ಕೃಷ್ಣ, ಮಹದೇವಶೆಟ್ಟಿ, ಸಿದ್ದಪ್ಪ, ರಾಜು, ಪುಟ್ಟಸ್ವಾಮಿ, ಎಂ.ರಾಜು, ಸಹಾಯಕ ಚುನಾವಣಾಧಿಕಾರಿ ಗುರುಪ್ರಸಾದ್, ಸೇರಿದಂತೆ ಹಲವರಿದ್ದರು.

ಹುಣಸೂರಲ್ಲಿ ಅಶಾಂತಿ ಮೂಡಿಸಲು ಕಿಡಿಗೇಡಿಗಳ ಯತ್ನ

ಶಾಂತಿ ಕಾಪಾಡಲು ಶಾಸಕ ಮಂಜುನಾಥ್ ಮನವಿ

ಹುಣಸೂರು, ಫೆ.28– ಕಳೆದ ಒಂದೂವರೆ ತಿಂಗಳಿಂದ ಹುಣಸೂರಲ್ಲಿ ಅಶಾಂತಿ ಮೂಡಿಸಲು ಕಿಡಿಗೇಡಿಗಳು ಯತ್ನಿಸುತ್ತಿದ್ದು, ತಾಲೂಕಿನ ಜನತೆ ಶಾಂತಿ ಕಾಪಾಡಬೇಕು ಎಂದು ಶಾಸಕ ಹೆಚ್.ಪಿ.ಮಂಜುನಾಥ್ ಮನವಿ ಮಾಡಿದರು.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಣ್ಣಪುಟ್ಟ ಕೋಮುಗಳನ್ನು ರಾಜಕೀಯ ಕಾರಣವೊಡ್ಡಿ ಬೆದರಿಸಲಾಗುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರಿಗೆ ಬೆದರಿಕೆ, ಘರ್ಷಣೆಗೆ ಇಂಬು ನೀಡುವಂತೆ ಕೆಲವರು ವರ್ತಿಸುತ್ತಿದ್ದಾರೆ ಇದು ತಾಲೂಕಿನ ಕಾನೂನು ಸುವ್ಯವಸ್ಥೆ, ಶಾಂತಿಗೆ ಅಡ್ಡಿಯಾಗಲಿದೆ ಎಂದರು.

ತಾಲೂಕಿನಲ್ಲಿ ಹಲವು ಜಟಾಪಟಿ ನಡೆದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿವೆ. ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನವನ್ನು ಕೆಲ ಕಿಡಿಗೇಡಿಗಳು ನಡೆಸುತ್ತಿದ್ದು, ಈ ಕುರಿತು ತಾಲೂಕಿನ ಪ್ರಥಮ ಪ್ರಜೆಯಾಗಿ ಪೊಲೀಸ್ ಇಲಾಖೆ ಸೇರಿದಂತೆ ಜಿಲ್ಲಾಡಳಿತಕ್ಕೂ ದೂರು ನೀಡಿದ್ದೇನೆ. ಆದರೆ ಕಾನೂನಾತ್ಮಕ ಕಾರ್ಯಗಳಿಗೆ ಅದರದೆ ಆದ ಕ್ರಮಗಳಿದ್ದು, ಪೊಲೀಸರು ಅದನ್ನು ಜಾರಿಗೊಳಿಸುವತ್ತ ಗಮನ ಹರಿಸಿದ್ದಾರೆ ಎಂದರು.



ಶಾಸಕನಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾನು ಕಿಡಿಗೇಡಿಗಳ ಕುತಂತ್ರಕ್ಕೆ ಜನತೆ ಬಲಿಯಾಗಬಾರದೆನ್ನುವ ಸದುದ್ದೇಶದಿಂದ ಮಾನಸಿಕವಾಗಿ ನೋವಾಗಿದ್ದರೂ, ತಾಲೂಕಿನ ಶಾಂತಿ, ಸೌಹಾರ್ದತೆ ಕಾಪಾಡಲು ನಾನೇ ಒಂದು ಹೆಜ್ಜೆ ಹಿಂದಿಟ್ಟು ನಡೆದುಕೊಳ್ಳುತ್ತಿದ್ದೇನೆ. ಪಕ್ಷದ ಕಾರ್ಯಕರ್ತರಿಗೂ ತಾಳ್ಮೆ ಮೀರಿ ವರ್ತಿಸದಂತೆ ಸೂಚಿಸಿದ್ದೇನೆ ಎಂದರು.

ಪ್ರಸ್ತುತ ಸಾಮಾಜಿಕ ಜಾಲತಾಣಗಳ ದುರ್ಬಳಕೆಯಾಗುತ್ತಿದೆ. ಈ ಬಗ್ಗೆ ಪೊಲೀಸ್ ಕ್ರೈಂ ವಿಭಾಗಕ್ಕೂ ಮಾಹಿತಿ ನೀಡಲಾಗಿದೆ. ಕಿಡಿಗೇಡಿಗಳು ಸಮಾಜ ವಿರೋಧಿ ಯತ್ನ ನಡೆಸುತ್ತಿರುವುದರ ಕುರಿತಾಗಿ ಸಾಕಷ್ಟು ಸಾಕ್ಷ್ಯಾಧಾರಗಳು ನನ್ನಲ್ಲಿವೆ. ಹುಣಸೂರು ತಾಲೂಕಿನಲ್ಲಿ ಅಶಾಂತಿ ಮೂಡಿಸಲು ಯತ್ನಿಸುವವರಿಗೆ ನನ್ನದೊಂದು ಮನವಿ. ಏನೆಂದರೆ ಚುನಾವಣೆಯನ್ನು ಚುನಾವಣೆಯಾಗಿಯೇ ಸ್ವೀಕರಿಸಿ, ಯುದ್ಧರಂಗವೆಂದು ಭಾವಿಸಬೇಡಿ. ತಾಲೂಕಿನಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿ ಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಅಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಪುಟ್ಟರಾಜು ಹಾಜರಿದ್ದರು.

ಜೆಡಿಎಸ್ ಅಧಿಕಾರಕ್ಕೆ ಬಂದರೆ ಉಚಿತ ಶಿಕ್ಷಣ, ವಿದ್ಯುತ್

ನಂ.ಗೂಡು ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್

ಮಲ್ಕುಂಡಿ, ಫೆ.28– ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದರೆ ಪ್ರತಿ ಗ್ರಾಪಂಗೊಂದು ಮಾದರಿ ಸರ್ಕಾರಿ ಶಾಲೆ ನಿರ್ಮಿಸಿ ಉಚಿತ ಶಿಕ್ಷಣ, ರೈತರಿಗೆ 24 ಗಂಟೆ ವಿದ್ಯುತ್ ನೀಡುವ ಜೊತೆಗೆ ನಿರುದ್ಯೋಗ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ತಿಳಿಸಿದರು.



ನಂಜನಗೂಡು ವಿಧಾನಸಭಾ ಕ್ಷೇತ್ರದ ಕಪ್ಪಸೋಗೆ ಗ್ರಾಮದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು ದೇಶವನ್ನಾಳಿದ ರಾಜಕೀಯ ಪಕ್ಷಗಳ ಆಡಳಿತದಲ್ಲಿ ಬಡವರು ಬಡವರಾಗಿದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಇಂತಹ ಅಸಮಾನತೆ ನಿವಾರಣೆ ಮಾಡಬೇಕೆಂಬುದು ಜೆಡಿಎಸ್ ಉದ್ದೇಶ. ರೈತರ ಕಷ್ಟ ನಿವಾರಣೆಗಾಗಿ ಜೆಡಿಎಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು. ತಾಪಂ ಮಾಜಿ ಸದಸ್ಯ ಹಗಿನವಾಳು ಸುರೇಶ್, ಹುಲ್ಲಹಳ್ಳಿ ಮುಜೀಬ್ ಪಾಷ, ಮಾದನಹಳ್ಳಿ ಗಿರೀಶ್, ಶ್ರೀಧರ್, ನಂದೀಶ್, ಸಂಗರಾಜ್, ಪರಮೇಶ್, ಸಿದ್ದನಾಯಕ, ಮಧು ಸೇರಿದಂತೆ ಪ್ರಮುಖರು ಹಾಜರಿದ್ದರು.

ವಿವಿಧ ಕಾಮಗಾರಿಗೆ ಶಾಸಕ ಅನಿಲ್ ಭೂಮಿ ಪೂಜೆ



ಸರಗೂರು, ಫೆ.28– ಕಷ್ಟದಲ್ಲಿದ್ದಾಗ ಸಹಕರಿಸಿ, ನನ್ನನ್ನು ಪ್ರೋತ್ಸಾಹಿಸಿದ ತಾಲೂಕಿನ ಜನತೆಯನ್ನು ಎಂದಿಗೂ ಮರೆಯುವುದಿಲ್ಲ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕೊತ್ತೇಗಾಲ ಗ್ರಾಮದಲ್ಲಿ ಗಾಣಿಗರ ಸಮುದಾಯ ಭವನ, ಶ್ರೀರಾಮ ಮಂದಿರ ಸಮುದಾಯ ಭವನ, ಜಯನಗರ ಗ್ರಾಮದಲ್ಲಿ ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನನ್ನ ತಂದೆ, ಮಾಜಿ ಶಾಸಕ ದಿ.ಚಿಕ್ಕಮಾದು ಅವರು ನಿಧನರಾದಾಗ ನಾವು ತುಂಬಾ ಸಂಕಷ್ಟಕ್ಕೆ ಸಿಲುಕಿದ್ದೇವು. ಈ ವೇಳೆ ತಾಲೂಕಿನ ಜನತೆ ನನ್ನನ್ನು ಪ್ರೋತ್ಸಾಹಿಸಿದರು. ಇದಕ್ಕೆ ಪೂರಕವಾಗಿ ನಾನು ಶಾಸಕನಾದ ಬಳಿಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ನನ್ನ ಅಭಿವೃದ್ಧಿ ಕೆಲಸ ನೋಡಿ ಗ್ರಾಮಸ್ಥರು ಕೂಲಿ ರೂಪದಲ್ಲಿ ಮತ ನೀಡಬೇಕು. ಆ ಮೂಲಕ ತಮ್ಮ ಸೇವೆ ಮಾಡಲು ಮತ್ತೊಂದು ಅವಕಾಶ ಮಾಡಿಕೊಡಬೇಕು. ಅಲ್ಲದೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮತ್ತೆ ರಾಜ್ಯದ ಮುಖ್ಯಮಂತ್ರಿಯನ್ನಾಗಿಸಲು ಎಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಮಾಜಿ ಶಾಸಕ ದಿ.ಚಿಕ್ಕಮಾದು ಅವರು ಹಾಕಿಕೊಟ್ಟ ಹಾದಿಯಲ್ಲಿಯೇ ಶಾಸಕ ಅನಿಲ್ ಚಿಕ್ಕಮಾದು ಸಾಗುತ್ತಿದ್ದು, ಗ್ರಾಮಸ್ಥರು 5 ವರ್ಷದ ಹಿಂದೆ ಇವರನ್ನು ಬೆಂಬಲಿಸಿದ್ದೀರಿ. ಅದೇ ರೀತಿ ಈ ಬಾರಿಯೂ ಬೆಂಬಲಿಸಿ ಅವರ ಗೆಲುವಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಕೆ.ಚಿಕ್ಕವೀರನಾಯಕ, ಕಾಂಗ್ರೆಸ್ ಮುಖಂಡರಾದ ಶಂಭುಲಿಂಗನಾಯಕ, ಗ್ರಾಪಂ ಉಪಾಧ್ಯಕ್ಷೆ ಶೋಭಾ ಸುಂದರ್, ಚಲುವಪ್ಪ, ಮಹದೇವಯ್ಯ, ಸ್ವಾಮಿ, ಬಸವಣ್ಣ, ಎಂ.ಕೆಂಡಗಣ್ಣಸ್ವಾಮಿ, ಮಂಜು, ಜಯರಾಜು, ಗುಂಡಣ್ಣ, ಸಮಾಜದ ಮುಖಂಡರಾದ ಸಣ್ಣಸ್ವಾಮಿಶೆಟ್ಟಿ, ಪುಟ್ಟೇಗೌಡ, ಪುಟ್ಟಶೆಟ್ಟಿ, ಶಿವಕುಮಾರ್, ಸಿ.ರವಿ, ಪಿಡಿಓ ನಾಗೇಂದ್ರ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ವೃದ್ಧೆ ನಾಪತ್ತೆ



ನಂಜನಗೂಡು, ಫೆ.28– ತಾಲೂಕಿನ ಮಹದೇವನಗರ ಬಳಿಯ ಎಸ್‌ಎಂಪಿ ಲೇಔಟ್ ನಿವಾಸಿ ನಾಗಮ್ಮ(73) ಕಾಣೆಯಾಗಿದ್ದಾರೆ. ಫೆ.13ರಂದು ನಂಜನಗೂಡಿನ ಒಕ್ಕಲಗೇರಿ ಬಡಾವಣೆಯಲ್ಲಿರುವ ತನ್ನ ದೊಡ್ಡ ಮಗನ ಮನೆಗೆ ಹೋಗಿ ಬರುತ್ತೇನೆಂದು ಹೇಳಿ ಹೋದ ನಾಗಮ್ಮ ವಾಪಸ್ ಮನೆಗೆ ಬಂದಿಲ್ಲ. ಹುಡುಕಿ ಕೊಡುವಂತೆ ಕೌಲಂದೆ ಪೊಲೀಸ್ ಠಾಣೆಗೆ ನಾಗಮ್ಮರ ಪುತ್ರ ಕುಮಾರ ದೂರು ನೀಡಿದ್ದು, ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕೌಲಂದೆ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಎಸ್‌ಐ ಕೃಷ್ಣಕಾಂತ್‌ಕೋಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ರಾ.7.25ಕ್ಕೆ, ರಾ.9.55ಕ್ಕೆ, ವಿಧಿ (ಆರ್ಟಿಕಲ್) 370 (ಕ): ಮ.1.45ಕ್ಕೆ, ಸೌತ್ ಇಂಡಿಯಾ ಹೀರೋ (ಕ): ಸಂ.4.25ಕ್ಕೆ.

ಸ್ಕ್ರೀನ್ 2 ಪಾಲಾರ್ (ಕ): ಬೆ.10.55ಕ್ಕೆ, ಹೊಂದಿಸಿ ಬರೆಯಿರಿ (ಕ): ಮ.1.35ಕ್ಕೆ, ಜೂಲಿಯೆಟ್ 2: (ಕ): ಸಂ.4.45ಕ್ಕೆ, ಗೌಳಿ (ಕ): ರಾ.7ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 3 ರೋಮಾಂಚಂ (ಮ): ಬೆ.11ಕ್ಕೆ, ಕ್ಯಾಂಪಸ್ ಕ್ರಾಂತಿ (ಕ): ಮ.1.40ಕ್ಕೆ, ಪಠಾಣ್ (ಹಿಂ): ಸಂ.4.20ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಎನ್ನಿಕ್ಕೊರು ಪ್ರೇಮಂದರ್ನ್ನು (ಮ): ರಾ.9.50ಕ್ಕೆ.

ಸ್ಕ್ರೀನ್ 4 ಸೆಲ್ಫಿ (ಹಿಂ): ಬೆ.10.30ಕ್ಕೆ, ಮ.1.20ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಹೊಟ್ಟೆಪಾಡು (ಕ): ಬೆ.10.30ಕ್ಕೆ, 1975 (ಕ): ಮ.1.20ಕ್ಕೆ, ಸೌತ್ ಇಂಡಿಯನ್ ಹೀರೋ (ಕ): ಸಂ.4.10ಕ್ಕೆ, ಲವ್ ಬರ್ಡ್ಸ್ (ಕ): ರಾ.7.15ಕ್ಕೆ, ಪಠಾಣ್ (ಹಿಂ): ರಾ.10ಕ್ಕೆ.

ಸ್ಕ್ರೀನ್ 2 ಸೆಲ್ಫೀ (ಹಿಂ): ಬೆ.9.55ಕ್ಕೆ, ಮ.12.45ಕ್ಕೆ, ಮ.3.45ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.10.55ಕ್ಕೆ, ರಾ.7.30ಕ್ಕೆ, ರಾ.10.10ಕ್ಕೆ, ಜಬ್ ವಿ ಮೆಟ್ (ಹಿಂ): ಮ.1.35ಕ್ಕೆ, ಗೌಳಿ (ಕ): ಸಂ.4.35ಕ್ಕೆ.

ಸ್ಕ್ರೀನ್ 4 ಗೌಳಿ (ಕ): ಬೆ.10ಕ್ಕೆ, ಅಂತರಂಗ (ಕ): ಮ.12.45ಕ್ಕೆ, ಜೂಲಿಯೆಟ್ 2 (ಕ): ಮ.3ಕ್ಕೆ, ವಿಧಿ 370 (ಕ): ಸಂ.5.10ಕ್ಕೆ, ಸಂಭ್ರಮ (ಕ): ರಾ.7.30ಕ್ಕೆ, ಎನ್ನಿಕ್ಕೊರು ಪ್ರೇಮಂದರ್ನ್ನು (ಮ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.

ಸ್ಕ್ರೀನ್ 2 ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಸ್ಕ್ರೀನ್ 3 ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.

ಸ್ಕ್ರೀನ್ 4 ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪಠಾಣ್ (ಹಿ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಟ್ಟೆಪಾಡು (ಕ) 2 ಪ್ರದರ್ಶನಗಳು, ಹೊಂದಿಸಿ ಬರೆಯಿರಿ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತುನಿವು (ತ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಾತಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಸೌತ್ ಇಂಡಿಯನ್ ಹೀರೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂಗ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗೌಳಿ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾತಿ (ತ)	4 ಪ್ರದರ್ಶನಗಳು
ಪ್ರಭಾ	
ಕ್ಯಾಂಪಸ್ ಕ್ರಾಂತಿ (ತ)	4 ಪ್ರದರ್ಶನಗಳು

ಉರುಳಿಗೆ ಸಿಲುಕಿ ಚಿರತೆ ಸಾವು

ನಂಜನಗೂಡು, ಫೆ.28– ಜಮೀನೊಂದರಲ್ಲಿ ಹಾಕಲಾಗಿದ್ದ ಉರುಳಿಗೆ ಸಿಲುಕಿ ಚಿರತೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೂಡ್ಲಾಪುರ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಚಂದ್ರಶೇಖರ್ ಅವರ ಜಮೀನಿನಲ್ಲಿ ಹಾಕಲಾಗಿದ್ದ ಉರುಳಿಗೆ 2 ವರ್ಷದ ಹೆಣ್ಣು ಚಿರತೆ ಸಿಲುಕಿ ಸಾವನ್ನಪ್ಪಿದೆ. ವಲಯ ಅರಣ್ಯಾಧಿಕಾರಿ ಕಿರಣ್‌ಕುಮಾರ್ ಕರತಂಗಿ ಮಾತನಾಡಿ, ಕೂಡ್ಲಾಪುರ ಹೊರವಲಯದ ಜಮೀನೊಂದರಲ್ಲಿ ಉರುಳಿಗೆ ಸಿಲುಕಿ ಚಿರತೆ ಮೃತಪಟ್ಟಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಜಮೀನಿನಲ್ಲಿ 4 ಕುರುಹು ಪತ್ತೆಯಾಗಿವೆ. ಜಮೀನಿನ ಮಾಲೀಕರು ಸ್ಥಳದಲ್ಲಿ ಇಲ್ಲದ ಕಾರಣ ಅರಣ್ಯ ಸಂರಕ್ಷಣಾ ಕಾಯ್ದೆ 1972 ಪ್ರಕಾರ ಸಿಆರ್‌ಪಿ 200 ಅಡಿ ಜಮೀನಿನ ಮಾಲೀಕರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಹೆಚ್ಚಿನ ತನಿಖೆ ನಡೆಸಿ ಪ್ರಕರಣವನ್ನು ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಈ ವೇಳೆ ಎಸಿಎಫ್ ಶಿವರಾಮು, ಅರಣ್ಯಾಧಿಕಾರಿಗಳಾದ ಜನಾರ್ಧನ್, ಸಿಬ್ಬಂದಿ ಮಂಜುನಾಥ್ ಮತ್ತು ಚಿರತೆ ಕಾರ್ಯಪಡೆ ಸಿಬ್ಬಂದಿಗಳು ಇದ್ದರು.

ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಎಸ್‌ಸಿ ಮೋರ್ಚಾ ಕಾರ್ಯಕರ್ತರ ಸಾಮೂಹಿಕ ರಾಜೀನಾಮೆ

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ದಯಾನಂದ್

ತಿ.ನರಸೀಪುರ, ಫೆ.28– ಭಾರತೀಯ ಜನತಾ ಪಕ್ಷದಲ್ಲಿ ದಲಿತರಿಗೆ ಸಾಮಾಜಿಕ ನ್ಯಾಯ ಗಗನಕುಸುಮವಾಗಿದ್ದು, ವರುಣಾ ಕ್ಷೇತ್ರದ ಎಸ್‌ಸಿ ಮೋರ್ಚಾ ಕಾರ್ಯಕರ್ತರು ಸಾಮೂಹಿಕವಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇವೆ ಎಂದು ಜಿಪಂ ಮಾಜಿ ಸದಸ್ಯ ದಯಾನಂದ್ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮನ್ನು ಬಿಜೆಪಿ ಪಕ್ಷ ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ. ನಮ್ಮನ್ನು ಪಕ್ಷದಲ್ಲಿ ಒಂದು ವರ್ಗಕ್ಕೆ ಸೀಮಿತಗೊಳಿಸಲಾಗಿದೆ. ಸಾಮಾಜಿಕ ನ್ಯಾಯ ಎಂದು ಬೊಬ್ಬೆ ಹಾಕುವ ನಾಯಕರು ಅದನ್ನು ಅನುಷ್ಠಾನಕ್ಕೆ ತರಲು ವಿಫಲರಾಗಿದ್ದಾರೆ. ಅನೇಕ ವರ್ಷಗಳಿಂದ ಪಕ್ಷದಲ್ಲಿ ಸೇವೆ ಸಲ್ಲಿಸುತ್ತಿದ್ದರೂ, ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಯಾವುದೇ ಜವಾಬ್ದಾರಿ, ಅಧಿಕಾರವನ್ನಾಗಲೀ ಕೊಡದೇ ನಮ್ಮನ್ನು ಪಕ್ಷ ತಮಗೆ ಬೇಕಾದ ರೀತಿ ಬಳಸಿಕೊಂಡು ವಂಚಿಸಿದೆ. ಯಾವೊಬ್ಬ ಕಾರ್ಯಕರ್ತನಿಗೂ ಯಾವುದೇ ಅನುಕೂಲ ಕಲ್ಪಿಸಿಲ್ಲ. ನಮ್ಮಿಂದ ನಮ್ಮ ಸಮಾಜದ ಉದ್ಯೋಗಿಗಳನ್ನು ವರ್ಗಾವಣೆ ಮಾಡಿಸುವ ಸಣ್ಣ ಕೆಲಸ ಮಾಡಲಾಗುತ್ತಿಲ್ಲ. ಪಕ್ಷ ನಮ್ಮನ್ನು ಉದಾಸೀನ ಮಾಡಿರುವುದರಿಂದ ಬೇಸತ್ತು ಎಲ್ಲಾ ಕಾರ್ಯಕರ್ತರು ಸಾಮೂಹಿಕವಾಗಿ ಪಕ್ಷಕ್ಕೆ ರಾಜೀನಾಮೆ ನೀಡುತ್ತಿದ್ದೇವೆ ಎಂದರು.

ಜಿಲ್ಲಾ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ ಮಾತನಾಡಿ, ನಾನು 3 ಬಾರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿದ್ದೇನೆ. 2008 ರಿಂದಲೂ ಪಕ್ಷದ ಸಕ್ರಿಯ ಸದಸ್ಯನಾಗಿ ಕೆಲಸ ಮಾಡಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ಆದರೆ ಪಕ್ಷ ನಮ್ಮನ್ನು ಒಂದು ವರ್ಗಕ್ಕೆ ಸೀಮಿತ ಮಾಡಿದೆ. ಸಭೆಗಳಲ್ಲಿ ಪಂಚರತ್ನ ಮಾಡಿ, ಬೂತ್ ಸಮಿತಿ ರಚಿಸಿ ಎಂದು ಹೇಳುತ್ತಾರೆ. ಅಲ್ಲಿ ಒಬ್ಬ ಎಸ್‌ಸಿ, ಒಬ್ಬ ಎಸ್‌ಟಿ, ಓಬಿಸಿ, ಮಹಿಳೆ, ಸಾಮಾನ್ಯ ಸದಸ್ಯರಿರಬೇಕು. ಸಾಮಾಜಿಕ ನ್ಯಾಯದಡಿ ಪಕ್ಷ ಸಂಘಟನೆ ಮಾಡಿ ಎಂದು ಹೇಳುತ್ತಾರೆ. ಆದರೆ ಅದು ಬರೀ ಹೇಳಿಕೆಗಷ್ಟೇ ಸೀಮಿತವಾಗಿದ್ದು, ಯಾವುದೇ ಸಾಮಾಜಿಕ ನ್ಯಾಯ ಪಕ್ಷದಲ್ಲಿಲ್ಲ ಎಂದು ಅವರು ಆರೋಪಿಸಿದರು.



ಜಾತಿಗೋಸ್ಕರ ಮೋರ್ಚಾಗಳ ರಚನೆ: ಬಿಜೆಪಿಯಲ್ಲಿ ಜಾತಿಗೋಸ್ಕರವೇ ಮೋರ್ಚಾ ರಚನೆ ಮಾಡಲಾಗುತ್ತಿದೆ. ಅಲ್ಲಿ ಯಾರಿಗೂ ಹುದ್ದೆ, ಜವಾಬ್ದಾರಿಯನ್ನಾಗಲಿ ನೀಡಲ್ಲ. ನಾವ್ಯಾರೂ ಕೋರ್ ಕಮಿಟಿ ಮೀಟಿಂಗ್‌ಗೆ ಹೋಗುವಂತಿಲ್ಲ. ಹೋದರೆ ಕಮಿಟಿಯಲ್ಲಿಲ್ಲ ಎನ್ನುತ್ತಾರೆ. ಕೇಳಿದ ಜವಾಬ್ದಾರಿ ನೀಡುತ್ತಿಲ್ಲ. ಸರ್ಕಾರ ಬಂದರೂ ನಿಗಮ ಮಂಡಳಿಯಲ್ಲಿ ಅವಕಾಶ ಕೊಡುತ್ತಿಲ್ಲ. ವರುಣಾದಲ್ಲಿ 55 ಸಾವಿರ ದಲಿತ ಮತದಾರರಿದ್ದಾರೆ. 25 ರಿಂದ 30 ಮಂದಿ ಕಾರ್ಯಕರ್ತರಿದ್ದೇವೆ. ನಮಗೆ ರಾಜಕೀಯ ಅವಕಾಶ ಕಲ್ಪಿಸಿಕೊಡಿ ಎಂದು ನಾಯಕರ ಗಮನಕ್ಕೆ ತಂದರೂ ಯಾವುದೇ ಉತ್ತರವಿಲ್ಲ. ಪಕ್ಷದಲ್ಲಿ ದಲಿತರಿಗೆ ಸ್ಥಾನಮಾನ ನೀಡಲು ಮೀನಾಮೇಷ ಎಣಿಸಲಾಗುತ್ತಿದೆ ಎಂದು ಕಿಡಿಕಾರಿದರು.


ಪಕ್ಷದಲ್ಲಿಲ್ಲದವರಿಗೆ ಸ್ಥಾನ: ನನ್ನೊಂದಿಗೆ ತಾಪಂ ಸದಸ್ಯರಾಗಿದ್ದ ನನ್ನಂತೆಯೇ ಸಂಘಟನೆಯಲ್ಲಿದ್ದ ಎಲ್.ಆರ್.ಮಹದೇವಸ್ವಾಮಿಗೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಸ್ಥಾನ, ಪಕ್ಷದಲ್ಲೇ ಇಲ್ಲದ ಹಂಚ್ಯಾ ನಂದೀಶ್‌ಗೆ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ನೀಡುತ್ತಾರೆ. ನಾವು ಕೇಳಿದರೆ ಕೋರ್ ಕಮಿಟಿಯಲ್ಲಿ, ಜಿಲ್ಲಾ, ರಾಜ್ಯ ಕಮಿಟಿಯಲ್ಲಿ ತೀರ್ಮಾನವಾಗಬೇಕು ಎಂಬ ಉತ್ತರ ನೀಡುವ ಮೂಲಕ ನಮಗೆ ಅನ್ಯಾಯ ಮಾಡಲಾಗುತ್ತಿದೆ. ನಮ್ಮಲ್ಲಿ ರಾಜ್ಯಾಧ್ಯಕ್ಷರಾದ ಛಲವಾದಿ ನಾರಾಯಣಸ್ವಾಮಿ ಇದ್ದಾರೆ. ಅವರು ಹೆಸರಿಗಷ್ಟೇ ಛಲವಾದಿ, ಅವಕಾಶವಾದಿ ರಾಜಕಾರಣಿಯಾಗಿರುವ ಅವರಿಂದ ಯಾವುದೇ ಪ್ರಯೋಜನ ಸಮಾಜಕ್ಕಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯ ಗಣೇಶ್, ವರುಣಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಗಿರಿಧರ್, ಜಿಲ್ಲಾ ಉಪಾಧ್ಯಕ್ಷ ಎಂ.ಮಿಥುನ್, ಕೃಷ್ಣಕುಮಾರ್, ಪುಟ್ಟಸ್ವಾಮಿ, ರಾಜೇಂದ್ರ, ಪುಟ್ಟಣ್ಣ, ಪುಟ್ಟಮಾಧು, ಮಹದೇವಸ್ವಾಮಿ, ಎಸ್ಸಿ ಮೋರ್ಚಾ ಕಾರ್ಯದರ್ಶಿ ಮಹದೇವಸ್ವಾಮಿ, ಶಿವಣ್ಣ, ಶ್ರೀಕಂಠಮೂರ್ತಿ, ಮುಖಂಡರಾದ ಶಿವಣ್ಣ, ಮಹದೇವ ಸ್ವಾಮಿ, ಸುರೇಶ್, ಶ್ರೀನಿವಾಸ್ ಹಾಜರಿದ್ದರು.

ಹೋಟೆಲ್‌ನಿಂದ ತಂದು ತಿನ್ನುತ್ತಾರೆ

ಬಿಜೆಪಿಯಲ್ಲಿ ದಲಿತರು ನಾವು ಎಲ್ಲಾ ಒಂದೇ ಎಂಬ ಮಂತ್ರ ಪಠನೆಯಾಗುತ್ತದೆ. ಆರ್‌ಎಸ್‌ಎಸ್‌ನವರು ಬಂದು ನಮಗೆ ಪ್ರತಿ ಮನೆಯಲ್ಲಿಯೂ ಅಂಬೇಡ್ಕರ್ ಭಾವಚಿತ್ರ ಇರಬೇಕೆಂಬ ಪಾಠ ಹೇಳುತ್ತಾರೆ. ಆದರೆ ಅವರು ಮಾತ್ರ ಆ ಕೆಲಸ ಮಾಡುತ್ತಿಲ್ಲ. ಸಹಪಂಕ್ತಿ ಭೋಜನದ ಹೆಸರಲ್ಲಿ ರಾಜಕೀಯ ಮಾಡುವ ಅವರು ನಮ್ಮ ಮನೆಗಳಿಗೆ ಬಂದಾಗ ಹೋಟೆಲ್‌ನಿಂದ ತಂದು ತಿನ್ನುತ್ತಾರೆ. ನಾವು ಅವರ ಮನೆಗೆ ಹೋದಾಗ ಕ್ಯಾಂಟೀನ್‌ನಿಂದ ತರಿಸಿಕೊಡುವ ಮೂಲಕ ಡೋಂಗಿ ಪ್ರದರ್ಶನ ನೀಡುತ್ತಿದ್ದಾರೆ. ಹಾಗಾಗಿ ನಮಗೆ ಬಿಜೆಪಿಯಿಂದ ಸಾಮಾಜಿಕ ನ್ಯಾಯ ಸಿಗದ ಕಾರಣ ಮನಸ್ಸಿಗೆ ನೋವುಂಟಾಗಿ ಎಲ್ಲ ಕಾರ್ಯಕರ್ತರು ಒಮ್ಮತದಿಂದ ಪಕ್ಷಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇವೆ.

–ಕೃಷ್ಣಮೂರ್ತಿ, ಜಿಲ್ಲಾ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ.



ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರವರು ಕಛೇರಿ,
ವಾವಿನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ವಾವಿನೀಸ&ಒಚ(ಪೂರ್ವ)/ಟಿಎನ್-16/1490/2022-23 ದಿನಾಂಕ: 27.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಯಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ ಇ-ಪೋರ್ಟಲ್ ನಲ್ಲಿ ಸೇವಾ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 5.30 ಗಂಟೆ ಒಳಗೆ ಸೇವಾ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5.45 ಗಂಟೆ ನಂತರ ಸೇವಾ ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಕಾರ್ಯಪಾಲಕ ಅಭಿಯಂತರರು (ವಾ.ವಿ.ನೀ.ಸ&ಒಚ (ಪೂರ್ವ) ವಿಭಾಗ)	4 ಸಂಖ್ಯೆ	49.20	28.02.2023	07.03.2023	08.03.2023
		ServiceTender				
		1 ಸಂಖ್ಯೆ	-	28.02.2023	07.02.2023	08.03.2023

ವಿಶೇಷ ಸೂಚನೆ : ಮುಂದೆ ಯಾವುದೇ ಸೂಚನೆ / ಬದಲಾವಣೆ /ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾವಿನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1092/2022-23



ಹಸಿರು ನಮ್ಮ ಉಸಿರು



Statement of Ownership and other particulars about newspaper

MYSORE MITRA
MYSORE

As required to be published under the Press & Registration of Books Act and Rules.

FORM - IV
(See Rule-8)

1. Place of publication: **Mysore**
2. Periodicity of Publication: **Daily**
3. Printer's name, address and citizenship: **T.S. Gopinath,** No. 15-C, Industrial 'A' Layout, Bannimantap, Mysore-570 015. Citizen of India.
4. Publisher's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore-570 015. Citizen of India.
5. Editor's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore-570 015. Citizen of India.
6. Name and addresses of individuals who own the Newspaper and partners or Shareholders, holding more than one percent of the total capital: Owner: Academy Newspapers Pvt. Ltd., No. 15-C, Industrial 'A' Layout, Bannimantap, Mysore-570 015.

SHAREHOLDERS

1. **Mr. K.B. Ganapathy,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
2. **Mrs. K.K. Devamma,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
3. **Mr. K.G. Vikram Muthanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
4. **Mr. K.G. Mickey Bopanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.

I, **M. Govinde Gowda,** Publisher, hereby declare that the particulars given above are true to the best of my knowledge and belief.

—M. Govinde Gowda
Date: 1-3-2023 Publisher

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಮೈಸೂರು ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
Ph: 0821-2483853 Email: dcfmdm@gmail.com

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ವೇದಿಕೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಮೈಸೂರು ವೃತ್ತ ಕಛೇರಿ, ಮೈಸೂರು ವಿಭಾಗ ಕಛೇರಿ, ಉಪವಿಭಾಗ ಕಛೇರಿ ಹಾಗೂ ವಲಯ ಕಛೇರಿಗಳಿಗೆ ಅಗತ್ಯವಿರುವ ಡಾಟಾಎಂಟ್ರಿ ಆಪರೇಟರ್, ವಾಹನ ಚಾಲಕರು, ಕಾವಲುಗಾರರು, ಕಛೇರಿ ಸೇವಕರು ಹಾಗೂ ಸರಗೂರು ಮತ್ತು ನಂಜನಗೂಡು ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಳ್ಳಬೇಟೆ ತಡೆ ಶಿಬಿರಗಳಿಗೆ (ಎಪಿಸಿ) ಕಾವಲುಗಾರರನ್ನು ತಾತ್ಕಾಲಿಕವಾಗಿ ನೇಮಕ ಮಾಡಲು ಮಾನವ ಹೊರಸಂಪನ್ಮೂಲ ಸೇವೆ ಒದಗಿಸಲು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್‌ಗಳನ್ನು ದರಗಳನ್ನು ನಮೂದಿಸಬಹುದಾಗಿರುತ್ತದೆ. ಸ್ವೀಕರಿಸುವ ದಿ: 09.03.2023 ರಂದು 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿ: 10.03.2023 ರಂದು 16.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯಲು 13.03.2023 ರಂದು 16.00 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ ಹಾಗೂ ಟೆಂಡರ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ಮರುಟೆಂಡರ್‌ನ್ನು ಇದೇ ಟೆಂಡರ್ ಪ್ರಕಟಣೆ ಷರತ್ತಿಗೆ ಒಳಪಟ್ಟು ದಿ: 18.03.2023 ರಂದು ಮರು ಟೆಂಡರ್ ದಿನಾಂಕವಾಗಿರುತ್ತದೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 20.03.2023 ರಂದು ಸಂಜೆ 16.00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ: 21.03.2023ರ ಸಂಜೆ 16.00 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳ ಮಾಹಿತಿಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ, ಮೈಸೂರು

DIPR/DDMYS/KSMCA/1087/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ
ಸತ್ತಿ ರಸ್ತೆ, ಚಾಮರಾಜನಗರ - 571313
ಇ-ಮೇಲ್: apmccrnagar@rediffmail.com : 08226-222103, 225665

ಸಂಖ್ಯೆ:ಕೃಉಮಾಸ(ಚಾ) : 851 : 2022-23 ದಿನಾಂಕ: 21/02/2023

ಟೆಂಡರ್-ಕಂ-ಬಹಿರಂಗ ಹರಾಜು ಪ್ರಕಟಣೆ

ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿರುವ 2011 ರ ಮಾಡಲ್‌ನ ಮಹೀಂದ್ರ ಬೊಲಾರೋ **SLX2WD BS3** ಜೀಪ್ ಸಂಖ್ಯೆ ಕೆ ಎ 10 ಎಂ 1797 ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ದಿನಾಂಕ: 10/03/2023 ರಂದು ಟೆಂಡರ್ - ಕಂ - ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಟೆಂಡರ್ - ಕಂ - ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಅರ್ಜಿ ಶುಲ್ಕ ರೂ. 500-00 ಗಳನ್ನು ಪಾವತಿಸಿ ದಿನಾಂಕ: 22/02/2023 ರಿಂದ 09/03/2023 ರ ಸಂಜೆ 4-00 ಗಂಟೆಯವರೆಗೆ ಅರ್ಜಿ ಪಡೆಯಬಹುದು. ಟೆಂಡರ್ - ಕಂ - ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ.25,000-00 ಗಳ ಇ ಎಂ ಡಿ ಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ ಇವರ ಹೆಸರಿಗೆ ಡಿ ಡಿ ಪಡೆದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09/03/2023 ರ ಸಂಜೆ 4-00 ಗಂಟೆಯೊಳಗಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು, ನಂತರ ಟೆಂಡರ್ ಫಾರಂನ್ನು ಪಡೆದು ಭರ್ತಿ ಮಾಡಿದ ಸೀಲ್ಡ್ ಟೆಂಡರ್ ದಿನಾಂಕ: 10/03/2023 ರಂದು ಮಧ್ಯಾಹ್ನ 3-00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು, ತಡವಾಗಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗವುದಿಲ್ಲ. ದಿನಾಂಕ: 10/03/2023 ರಂದು ಮಧ್ಯಾಹ್ನ 4-00 ಗಂಟೆಗೆ ಬಹಿರಂಗ ಹರಾಜನ್ನು ನಡೆಸಲಾಗುವುದು. ಟೆಂಡರ್ - ಕಂ - ಬಹಿರಂಗ ಹರಾಜನ್ನು ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ. ಮೇಲೆ ತಿಳಿಸಿರುವ ವಾಹನವನ್ನು ಮುಖ್ಯ ಮಾರುಕಟ್ಟೆ ಪ್ರಾಂಗಣದ ಕಛೇರಿ ಮುಂಭಾಗದಲ್ಲಿ ವೀಕ್ಷಿಸಬಹುದು. ಹೆಚ್ಚಿನ ನಿಬಂಧನೆ ಮತ್ತು ವಿವರಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- (ಪ್ರಕಾಶ್ ಕುಮಾರ್ ಟಿ.ವಿ)
ಕಾರ್ಯದರ್ಶಿ, ಕೃಉಮಾಸ,
ಚಾಮರಾಜನಗರ

ಸಹಿ/- (ಮನೋಜ್‌ಪಟೇಲ್ ಎಂ)
ಅಧ್ಯಕ್ಷರು, ಕೃಉಮಾಸ,
ಚಾಮರಾಜನಗರ

ವಾಸಾಸುಇ/ಚಾ.ನಗರ607/2022-23



